ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 27 ಭಾನುವಾರ 2022

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695


ಸಂಪುಟ: 43 | ಸಂಚಿಕೆ: 220 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com



ನಾಳೆ ಮೈಸೂರು ಜಿಲ್ಲೆಯಲ್ಲಿ ಸಿಎಂ ಪ್ರವಾಸ



ಮೈಸೂರು, ನ.26– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನ.28ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದು, ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಅಂದು ಬೆಳಗ್ಗೆ 10.15ಕ್ಕೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ 10.45ಕ್ಕೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿ, ಅಲ್ಲಿಂದ ರಸ್ತೆಯ ಮೂಲಕ 11.15ಕ್ಕೆ ನಂಜನಗೂಡು ತಲುಪಲಿದ್ದಾರೆ.

ಅಲ್ಲಿನ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ನಂತರ, ಶ್ರೀಕಂಠೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ದೇವಸ್ಥಾನದ ಆವರಣದಲ್ಲಿ ವಿವಿಧ ಕಾಮಗಾರಿಗಳಿಗೆ ಗುದ್ದಲಿ ಪೂಜೆ ಮತ್ತು ನುಗು, ಹೆಡಿಯಾಲ ಏತ ನೀರಾವರಿ ಯೋಜನೆಗೆ ಚಾಲನೆ ಹಾಗೂ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ನಂಜನಗೂಡಿನಿಂದ ಮಧ್ಯಾಹ್ನ 2.30ಕ್ಕೆ ರಸ್ತೆ ಮೂಲಕ ಮೈಸೂರಿಗೆ ಮರಳಿ ಕಲಾಮಂದಿರದಲ್ಲಿ ಆಯೋಜಿಸಿರುವ ಮೈಸೂರು ಪೇಯಿಂಟ್ಸ್ ಅಂಡ್ ವಾರ್ನಿಷ್ ಸಂಸ್ಥೆಯ 75ನೇ ಅಮೃತ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ನಂತರ ಸಂಜೆ 4.00 ಗಂಟೆಗೆ ವೈದ್ಯಕೀಯ ಶಿಕ್ಷಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಘಟಕ ಹಾಗೂ ಲೋಕೋಪಯೋಗಿ ಇಲಾಖೆ ವತಿಯಿಂದ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಆವರಣದಲ್ಲಿ ಆಯೋಜಿಸಿರುವ ವಿವಿಧ ಕಟ್ಟಡಗಳ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು. ನಂತರ ಸಂಜೆ 5.30ಕ್ಕೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ವಾಪಸ್ ಆಗಲಿದ್ದಾರೆ.

ಒಕ್ಕಲಿಗರು ರಾಜಕೀಯವಾಗಿ ಸಂಘಟಿತರಾಗಲಿ: ಮಂಜೇಗೌಡ



ಮೈಸೂರು, ನ. 26– ಒಕ್ಕಲಿಗರು ರಾಜಕೀಯವಾಗಿ ಸಂಘಟಿತರಾಗಿ ಹೋರಾಟ ಮಾಡಿದಾಗ ಮಾತ್ರ ಸಮುದಾಯ ಉದ್ಧಾರವಾಗುತ್ತದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಕರೆ ನೀಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರ ಒಕ್ಕಲಿಗರ ಸಂಘದ ವತಿಯಿಂದ ನಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಹಿರಿಯ ನಾಗರಿಕರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ದೇಶಕ್ಕೆ ಹೆಚ್.ಡಿ.ದೇವೇಗೌಡರಂತಹ ಮಹಾನಾಯಕರನ್ನು ಪ್ರಧಾನಿಯಾಗಿ ಕೊಟ್ಟಂತಹ ಸಮಾಜ ನಮ್ಮದು. ಮಾತ್ರವಲ್ಲ ರಾಜ್ಯದಲ್ಲಿ 7 ಜನ ಮುಖ್ಯಮಂತ್ರಿಗಳನ್ನು ಕೊಟ್ಟಂತಹ ಸಮಾಜ. ನಾಡಪ್ರಭು ಕೆಂಪೇಗೌಡರನ್ನು ಕೊಟ್ಟಂತಹ ಸಮಾಜ ನಮ್ಮದಾಗಿದ್ದು, ನಮ್ಮ ಸಮಾಜ ನನ್ನನ್ನು ಎಂಎಲ್‌ಸಿ ಮಾಡಿದೆ. ಈ ಸಮಾಜದ ಋಣ ನಮ್ಮೆಲ್ಲರ ಮೇಲಿದೆ. ನಾನು ಇದ್ದದ್ದನ್ನು ಇದ್ದಂಗೆ ಹೇಳುತ್ತೇನೆ. ಏಕೆಂದರೆ ನಾನೊಬ್ಬ ಮಾಜಿ ಸೈನಿಕ. ಆದರೆ ನಮ್ಮಲ್ಲಿ ಒಗ್ಗಟ್ಟಿನ ಕೊರತೆ ಇದೆ. ದೃಢಸಂಕಲ್ಪವಿಲ್ಲ. ಸಂಘಕ್ಕೆ ಸದಸ್ಯರಾಗಿ ಎಂದರೆ ಯೋಚನೆ ಮಾಡುತ್ತಾರೆ. ಆದರೆ ಕ್ಲಬ್‌ಗಳಲ್ಲಿ ಸದಸ್ಯರಾಗಲು ಲಕ್ಷಗಟ್ಟಲೇ ಕಟ್ಟುತ್ತಾರೆ ಎಂದರು. ಸಮಾರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ವಿಜಯಕುಮಾರ್, ಪಾಲಿಕೆ ಸದಸ್ಯರಾದ ಕೆ.ವಿ.ಶ್ರೀಧರ್, ಎಸ್‌ಬಿಎಂ ಮಂಜು, ಸಂಘದ ಅಧ್ಯಕ್ಷ ಮೊಗಣ್ಣೇಗೌಡ, ಉಪಾಧ್ಯಕ್ಷ ವಿಷಕಂಠೇಗೌಡ, ಕಾರ್ಯದರ್ಶಿ ಚಂದ್ರಶೇಖರ್, ಖಜಾಂಚಿ ಶಿವೇಗೌಡ, ಗೋಪಾಲಸ್ವಾಮಿ, ನಿರ್ದೇಶಕರಾದ ಹೆಚ್.ಡಿ.ಗೋಪಾಲ್, ದೊಡ್ಡೇಗೌಡರು, ಡಾ.ಮರೀಗೌಡ, ಬಸವರಾಜು, ಕುಸುಮ ಇದ್ದರು.



ಸಂವಿಧಾನ ಸಮರ್ಪಣಾ ದಿನದಂಗವಾಗಿ ಮೈಸೂರು ಅಶೋಕಪುರಂ ವೃತ್ತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಬಿಜೆಪಿ ಮುಖಂಡರು ಮಾಲಾರ್ಪಣೆ ಮಾಡಿದರು. ಈ ವೇಳೆ ಗ್ರಾಮಾಂತರ ಎಸ್ಸಿ ಮೋರ್ಚಾ ಅಧ್ಯಕ್ಷ ಮಾದೇವಯ್ಯ, ಪ್ರಧಾನ ಕಾರ್ಯದರ್ಶಿಗಳಾದ ಕೃಷ್ಣಮೂರ್ತಿ, ಮಹೇಶ್ ಬಾಬು, ಅನಿಲ್, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ವಕೀಲ ಶಿವರಾಜ್, ಎಸ್‌ಸಿ ಮೋರ್ಚಾ ರಾಜ್ಯ ಕಾರ್ಯಕಾರಿ ಸದಸ್ಯ ಮಹೇಶ್, ಉಪಾಧ್ಯಕ್ಷ ಸೋಮಶೇಖರ್, ನರಸಿಂಹರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ವೇಲು ಇದ್ದರು.



ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಸಂವಿಧಾನ ಸಮರ್ಪಣಾ ದಿನ ಕಾರ್ಯಕ್ರಮವನ್ನು ಹಿರಿಯ ನ್ಯಾಯವಾದಿ ಶ್ಯಾಂಭಟ್ ಶುಕ್ರವಾರ ಉದ್ಘಾಟಿಸಿದರು. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಕಾನೂನು ಕಾಲೇಜಿನ ಪ್ರಾಂಶುಪಾಲ ಡಾ.ಪಿ.ದೀಪು, ಕಾನೂನು ಅಧ್ಯಯನ ವಿಭಾಗದ ನಿರ್ದೇಶಕ ಪ್ರೊ.ಕೆ.ಬಿ.ವಾಸುದೇವ ಚಿತ್ರದಲ್ಲಿದ್ದಾರೆ.

ಕಡಿಮೆ ಬೆಲೆಯಲ್ಲಿ ಚಿನ್ನದ ಆಸೆಗೆ ಬಿದ್ದು 2.27 ಲಕ್ಷ ಕಳೆದುಕೊಂಡ ಶಿಕ್ಷಕಿ

ಮೈಸೂರು, ನ.26– ಕಡಿಮೆ ಬೆಲೆಯಲ್ಲಿ ಚಿನ್ನ ಕೊಡಿಸುವುದಾಗಿ ನಂಬಿಸಿ ಶಿಕ್ಷಕಿಯೊಬ್ಬರಿಗೆ ಆನ್‌ಲೈನ್ ಮೂಲಕ 2.27 ಲಕ್ಷ ರೂ. ವಂಚಿಸಲಾಗಿದೆ.

ಮೈಸೂರಿನ ಸರಸ್ವತಿಪುರಂ ನಿವಾಸಿ ಅಮೋಘ್ ಅಪ್ರಮೇಯ (30) ಎಂಬುವರು ಸೆನ್ ಠಾಣೆಗೆ ದೂರು ಸಲ್ಲಿಸಿದ್ದು, 9686877795 ಸಂಖ್ಯೆಯಿಂದ ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್‌ಗೆ ಕರೆ ಮಾಡಿದ್ದ ವ್ಯಕ್ತಿ ತನ್ನನ್ನು ಸಂತೋಷ್ ಎಂದು ಪರಿಚಯಿಸಿಕೊಂಡು ಶಾಲೆ ಹಳೆಯ ವಿದ್ಯಾರ್ಥಿ ಎಂದು ತಿಳಿಸಿ, ಅಲ್ಲಿನ ಶಿಕ್ಷಕರ ಮೊಬೈಲ್ ನಂಬರ್‌ಗಳನ್ನು ಪಡೆದಿದ್ದಾನೆ. ನಂತರ ಶಿಕ್ಷಕಿಯಾಗಿರುವ ಅಮೋಘ್ ಅಪ್ರಮೇಯ ಅವರ ತಾಯಿಗೆ ಕರೆ ಮಾಡಿದ ಆತ, ತಾನು ಅವರ ಹಳೇ ವಿದ್ಯಾರ್ಥಿ ಎಂದು ಪರಿಚಯಿಸಿಕೊಂಡಿದ್ದಲ್ಲದೆ, ತಾನು ಕಸ್ಟಂ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದು, ತಮ್ಮ ಕಚೇರಿಯಲ್ಲಿ ಇರುವ ಚಿನ್ನವನ್ನು ಹರಾಜು ಹಾಕಲಾಗುತ್ತಿದೆ. ಹೀಗಾಗಿ ಕಡಿಮೆ ಬೆಲೆಗೆ ಚಿನ್ನ ಕೊಡಿಸುತ್ತೇನೆ ಎಂದು ನಂಬಿಸಿ, ಆನ್‌ಲೈನ್ ಮೂಲಕ 2.27 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ.

150 ಕ್ವಿಂಟಾಲ್ ಪಡಿತರ ರಾಗಿ ವಶ

ಮೈಸೂರು, ನ.26(ಎಂಕೆ)– ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಗೋದಾಮಿನಲ್ಲಿ ಪಡಿತರ ರಾಗಿಯನ್ನು ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಖಚಿತ ಮಾಹಿತಿ ಮೇರೆಗೆ ಸಿಸಿಬಿ ಪೊಲೀಸರ ಸಹಕಾರದೊಂದಿಗೆ ದಾಳಿ ನಡೆಸಿರುವ ಆಹಾರ ಇಲಾಖೆ ಅಧಿಕಾರಿಗಳು, 150 ಕ್ವಿಂಟಾಲ್ ಪಡಿತರ ರಾಗಿಯನ್ನು ವಶಪಡಿಸಿಕೊಂಡಿದ್ದಾರೆ.

ಇಲ್ಲಿನ ಶ್ರೀ ವಿನಾಯಕ ಟ್ರೇಡರ್ಸ್ ಹೆಸರಿನ ಗೋದಾಮಿನ ಮಾಲೀಕ ಚಂದ್ರಶೇಖರ್ ಎಂಬುವರು, ಸರ್ಕಾರದಿಂದ ಬಡವರಿಗಾಗಿ ನೀಡುವ ಪಡಿತರ ರಾಗಿಯನ್ನು ಅಕ್ರಮವಾಗಿ ಖರೀದಿಸಿ, ಪಾಲಿಶ್ ಮಾಡಿಸಿ ಬೇರೆ ಕಡೆ ಮಾರಾಟ ಮಾಡುವ ಉದ್ದೇಶ ಹೊಂದಿದ್ದರು ಎಂಬ ಮಾಹಿತಿ ಮೇರೆಗೆ ನ.23ರಂದು ದಾಳಿ ನಡೆಸಿರುವ ಅಧಿಕಾರಿಗಳು ಗೋದಾಮಿನಲ್ಲಿ ಸಂಗ್ರಹಿಸಿಟ್ಟಿದ್ದ 50 ಕೆ.ಜಿ. ತೂಕದ 300 ಗೋಣಿ ಚೀಲಗಳಲ್ಲಿ ತುಂಬಿರುವ 150 ಕ್ವಿಂಟಾಲ್ ರಾಗಿಯನ್ನು ವಶಕ್ಕೆ ಪಡೆದು ಗೋದಾಮಿನ ಮಾಲೀಕ ಚಂದ್ರಶೇಖರ್, ಲಾರಿ ಡ್ರೈವರ್ ಗುರು ವಿರುದ್ಧ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಕರ್ನಾಟಕ ಮೆಡಿಕೋ-ಲೀಗಲ್ ಸೊಸೈಟಿ ಸಮ್ಮೇಳನ

ಆರ್ಥಿಕ ಅವ್ಯವಹಾರ ತಡೆಗೆ 'ಫೊರೆನ್ಸಿಕ್ ಆಡಿಟ್' 3ನೇ ಕಣ್ಣು

ನಿವೃತ್ತ ಐಪಿಎಸ್ ಅಧಿಕಾರಿ ಸಂಜಯ್ ಸಹಾಯ್ ಅಭಿಮತ

ಮೈಸೂರು,ನ.26(ಪಿಎಂ)–ಕಾಲ್ಪನಿಕ ವಹಿವಾಟು, ಕಿಕ್‌ಬ್ಯಾಕ್ ಸೇರಿದಂತೆ ಇನ್ನಿತರ ಹಣಕಾಸು ಅವ್ಯವಹಾರ ಬಹಿರಂಗಪಡಿಸಲು ಫೊರೆನ್ಸಿಕ್ ಆಡಿಟ್ ತನಿಖೆ ಮಹತ್ವದ ಪಾತ್ರ ವಹಿಸಲಿದ್ದು, ಆರ್ಥಿಕ ವ್ಯವಹಾರ ತಡೆಗೆ ಫೊರೆನ್ಸಿಕ್ ಆಡಿಟ್ ಮೂರನೇ ಕಣ್ಣಾಗಿ ಕಾರ್ಯನಿರ್ವಹಿಸಲಿದೆ ಎಂದು ಬೆಂಗಳೂರಿನ ಟೆಕ್‌ಕಾನ್ ಪ್ರೊ ಪ್ರೈ.ಲಿಮಿಟೆಡ್‌ನ ಸಂಸ್ಥಾಪಕ ಹಾಗೂ ನಿರ್ದೇಶಕರೂ ಆದ ನಿವೃತ್ತ ಐಪಿಎಸ್ ಅಧಿಕಾರಿ ಸಂಜಯ್ ಸಹಾಯ್ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ನ್ಯಾಯ ವೈದ್ಯಶಾಸ್ತ್ರ ವಿಭಾಗದ ವತಿಯಿಂದ 'ಸಹಕಾರಿ ನ್ಯಾಯಶಾಸ್ತ್ರ (ಕೊಲಾಬ್ರೇಟಿವ್ ಫೊರೆನ್ಸಿಕ್ಸ್)' ವಿಷಯ ಕುರಿತಂತೆ ಹಮ್ಮಿಕೊಂಡಿದ್ದ ಕರ್ನಾಟಕ ಮೆಡಿಕೋ–ಲೀಗಲ್ ಸೊಸೈಟಿಯ ರಾಜ್ಯ ಮಟ್ಟದ 30ನೇ ವಾರ್ಷಿಕ ಸಮ್ಮೇಳನದಲ್ಲಿ ಶುಕ್ರವಾರ 'ಸೈಬರ್ ಕ್ರೈಮ್ ಮತ್ತು ಫೊರೆನ್ಸಿಕ್ ಆಡಿಟಿಂಗ್; ಡಿಜಿಟಲ್ ಫೊರೆನ್ಸಿಕ್ ಸಹಯೋಗದ ಹೊಸ ಮಾರ್ಗ' ಕುರಿತು ಅವರು ಮಾತನಾಡಿದರು.

> ಲೆಕ್ಕಪರಿಶೋಧನೆಯಲ್ಲಿ ಉಂಟಾಗುವ ವೈಫಲ್ಯವು ಫೊರೆನ್ಸಿಕ್ ಆಡಿಟ್ ತನಿಖೆಯ ಅಗತ್ಯತೆ ಹೆಚ್ಚಿಸಿದೆ. ಅತಿರೇಕದ ಆರ್ಥಿಕ ಅಪರಾಧ ತಡೆಗೆ ಫೊರೆನ್ಸಿಕ್ ಆಡಿಟ್ ಪರಿಣಾಮಕಾರಿ ಆಗಲಿದೆ. ಫೊರೆನ್ಸಿಕ್ ಆಡಿಟ್ ಮುಖ್ಯವಾಹಿನಿಯಲ್ಲಿ ಬಳಕೆಯಾಗಬೇಕು. ಕೇವಲ ಸಮಸ್ಯೆ ಎದುರಾದಾಗ ಅದರತ್ತ ಗಮನ ಕೇಂದ್ರೀಕರಿಸುವುದಲ್ಲ. ಫೊರೆನ್ಸಿಕ್ ಆಡಿಟ್ ಮುಖ್ಯವಾಗಿ ಕಾರ್ಯಾಚರಣೆಯಲ್ಲಿ ಇಲ್ಲವಾದರೆ ಹಗರಣಗಳು ಬೆಳಕಿಗೆ ಬರಲು ಸಾಧ್ಯವಾಗದು.
>
> –ಸಂಜಯ್ ಸಹಾಯ್



ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಕರ್ನಾಟಕ ಮೆಡಿಕೋ–ಲೀಗಲ್ ಸೊಸೈಟಿ ಸಮ್ಮೇಳನದಲ್ಲಿ ಶುಕ್ರವಾರ 'ಸೈಬರ್ ಕ್ರೈಮ್ ಮತ್ತು ಫೊರೆನ್ಸಿಕ್ ಆಡಿಟಿಂಗ್' ಕುರಿತು ನಿವೃತ್ತ ಐಪಿಎಸ್ ಅಧಿಕಾರಿ ಸಂಜಯ್ ಸಹಾಯ್ ಮಾತನಾಡಿದರು.

ಕೇವಲ ಸಮಸ್ಯೆ ಎದುರಾದಾಗ ಬಳಸುವುದಕ್ಕಿಂತ 'ಫೊರೆನ್ಸಿಕ್ ಆಡಿಟ್ (ವಿಧಿ ವಿಜ್ಞಾನ ಲೆಕ್ಕಪರಿಶೋಧನೆ)' ಮುಖ್ಯವಾಹಿನಿಯಲ್ಲಿ ಕಾರ್ಯಾಚರಣೆಗೆ ಬರಬೇಕು. ಫೊರೆನ್ಸಿಕ್ ಆಡಿಟ್ (ಸಂಸ್ಥೆ ಅಥವಾ ವ್ಯಕ್ತಿಯ ಹಣಕಾಸು ದಾಖಲೆಗಳ ಪರೀಕ್ಷೆ ಮತ್ತು ಮೌಲ್ಯಮಾಪನ) ಮುಂದೆ ಸಂಭವಿಸಬಹುದಾದ ವಂಚನೆ ಪತ್ತೆ ಹಚ್ಚಲು ಹಾಗೂ ಆ ಮೂಲಕ ವಂಚನೆ ತಡೆಯಲು ನೆರವಾಗಲಿದೆ. ವೈಟ್ ಕಾಲರ್ ಕ್ರೈಮ್ (ವೃತ್ತಿಪರರ ಅವ್ಯವಹಾರ) ಪ್ರಕರಣಗಳು ಭಾರತದಲ್ಲಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಫೊರೆನ್ಸಿಕ್ ಆಡಿಟ್ ನಿರ್ಣಾಯಕವಾಗಲಿದೆ ಎಂದು ಪ್ರತಿಪಾದಿಸಿದರು.

ಸೈಬರ್ ಕ್ರೈಮ್: ಸೈಬರ್ ಕ್ರೈಮ್ ಅಥವಾ ಕಂಪ್ಯೂಟರ್ ಆಧಾರಿತ ಅಪರಾಧವು ಕಂಪ್ಯೂಟರ್ ಮತ್ತು ಅಂತರ್ಜಾಲ ಒಳಗೊಂಡಿರುವ ಅಪರಾಧವಾಗಿದೆ. ಈ ಅಪರಾಧದಲ್ಲಿ ಕಂಪ್ಯೂಟರ್ ಅನ್ನು ಬಳಸಬಹುದು ಅಥವಾ ಅದನ್ನು ಗುರಿಯಾಗಿಸಿ ಕೃತ್ಯ ಎಸಗಬಹುದು. ಡಿಜಿಟಲ್ ಫೊರೆನ್ಸಿಕ್ ಎನ್ನುವುದು ಫೊರೆನ್ಸಿಕ್ ವಿಜ್ಞಾನದ ಒಂದು ಭಾಗ. ಡಿಜಿಟಲ್ ಫೊರೆನ್ಸಿಕ್ ಮೂಲಕ ತನಿಖೆಯಲ್ಲಿ ಉಪಯುಕ್ತವಾದ ಎಲೆಕ್ಟ್ರಾನಿಕ್ ದತ್ತಾಂಶವನ್ನು ಸಂಗ್ರಹಿಸುವ, ವಿಶ್ಲೇಷಿಸುವ, ಹಿಂಪಡೆಯುವ ಮತ್ತು ಸಂರಕ್ಷಿಸುವ ಪ್ರಕ್ರಿಯೆ ಸಾಧ್ಯವಾಗಲಿದೆ ಎಂದು ತಿಳಿಸಿದರು.

ಕಂಪ್ಯೂಟರ್, ಮೊಬೈಲ್ ಫೋನ್, ಸ್ಮಾರ್ಟ್ ಉಪಕರಣ, ವಾಹನ ಸಂಚರಣೆ ವ್ಯವಸ್ಥೆ, ಎಲೆಕ್ಟ್ರಾನಿಕ್ ಡೋರ್‌ಲಾಕ್ ಸೇರಿದಂತೆ ಇತರ ಡಿಜಿಟಲ್ ಸಾಧನಗಳಲ್ಲಿನ ಹಾರ್ಡ್ ಡ್ರೈವ್‌ಗಳನ್ನು ಡಿಜಿಟಲ್ ಮಾಧ್ಯಮ ಒಳಗೊಂಡಿದೆ. 'ಡೇಟಾ (ದತ್ತಾಂಶ)' ಪ್ರಸ್ತುತದ ದಿನಗಳಲ್ಲಿ ಸಾಂಸ್ಥಿಕ ಕಾರ್ಯ ಚಟುವಟಿಕೆಗಳಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಮೊಬೈಲ್ ಸಾಧನ ಮತ್ತು ಕಂಪ್ಯೂಟರ್ ಅಪರಾಧ ತನಿಖೆಗೆ ಡಿಜಿಟಲ್ ಫೊರೆನ್ಸಿಕ್ ಅತ್ಯಗತ್ಯವಾಗಿದೆ. ವರ್ಷಕ್ಕೆ 1.5 ಟ್ರಿಲಿಯನ್ (ಲಕ್ಷ ಕೋಟಿ) ಡಾಲರ್ ಮೌಲ್ಯದಷ್ಟು ಜಾಗತಿಕ ಸೈಬರ್ ಅಪರಾಧ ನಡೆಯುತ್ತಿದೆ ಎಂದು ತಿಳಿಸಿದರು.

ಬರ್ತ್‌ಡೇ ಪಾರ್ಟಿಯಲ್ಲಿ ಅರೆಬೆತ್ತಲೆ ನೃತ್ಯ: ಕಾಂಗ್ರೆಸ್ ಸದಸ್ಯರ ನಂಗಾನಾಚ್

ಡಿಕೆಶಿ ತವರಿನಲ್ಲಿ ಬೆಂಗಳೂರು ಡಾನ್ಸರ್ಸ್ ದರ್ಬಾರ್

ರಾಮನಗರ: ರಾಜಕೀಯ ಪಕ್ಷಗಳ ನಾಯಕರಿಗೆ ತಮ್ಮ ಹುಟ್ಟುಹಬ್ಬಗಳನ್ನು ವೈಭವವಾಗಿ ಆಚರಿಸಿಕೊಳ್ಳುವುದು ಪ್ರತಿಷ್ಠೆಯ ಸಂಕೇತವಾಗಿದೆ.



ರಾಮನಗರ ನಗರಸಭೆ 19ನೇ ವಾರ್ಡ್ ಸದಸ್ಯ ದೌಲತ್ ಷರೀಫ್ ತಮ್ಮ ಬರ್ತ್‌ಡೇ ಆಚರಣೆಗೆ ಬೆಂಗಳೂರಿನಿಂದ ಡ್ಯಾನ್ಸರ್‌ಗಳನ್ನು ಕರೆಸಿ ಅವರು ಅರೆಬೆತ್ತಲೆಯಾಗಿ ಕುಣಿಯುವಾಗ ನೋಟುಗಳ ಸುರಿಮಳೆ ಸುರಿಸಿದ್ದಾರೆ. ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಯಾರಬ್ ನಗರದಲ್ಲಿರುವ ಕಲ್ಯಾಣ ಮಂಟಪದಲ್ಲಿ ಹುಚ್ಚೆದ್ದು ಕುಣಿದಿದ್ದಾರೆ. ಸದ್ಯ ಈ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ಭಾರೀ ಸದ್ದು ಮಾಡುತ್ತಿದ್ದು, ಕಾಂಗ್ರೆಸ್ ನಗರಸಭೆ ಸದಸ್ಯರ ವರ್ತನೆಗೆ ಆಕ್ಷೇಪ ವ್ಯಕ್ತವಾಗಿದೆ.

ಲಕ್ಷಾಂತರ ರೂ. ನಗದು, ಮೊಬೈಲ್ ಕಳವು

ಮೈಸೂರು, ನ.26– ಟೆರೇಸ್ ಬಾಗಿಲಿನ ಮೂಲಕ ಮೊಬೈಲ್ ಅಂಗಡಿಗೆ ನುಗ್ಗಿ 2.90 ಲಕ್ಷ ನಗದು ಹಾಗೂ 11.50 ಲಕ್ಷ ಮೌಲ್ಯದ ಮೊಬೈಲ್‌ಗಳನ್ನು ಕಳವು ಮಾಡಿರುವುದು ಮೈಸೂರಿನ ಕೆ.ಟಿ.ರಸ್ತೆಯಿಂದ ತಡವಾಗಿ ವರದಿಯಾಗಿದೆ.

ಮೈಸೂರಿನ ಸಿದ್ಧಾರ್ಥನಗರ ನಿವಾಸಿ ಮುಖೇಶ್ ಡಿ.ಸಿಷ್ವಿ (40) ಅವರು ಕೆ.ಟಿ.ರಸ್ತೆಯಲ್ಲಿ ಮೇಘಾ ಮೊಬೈಲ್ ಸ್ಟೋರ್ ಹೆಸರಿನಲ್ಲಿ ಅಂಗಡಿ ಹೊಂದಿದ್ದಾರೆ. ಅವರು ನ.16ರಂದು ದುಬೈಗೆ ಹೋಗುವಾಗ ಜಿ.ಚಂದ್ರಪ್ರಕಾಶ್ ಎಂಬುವರಿಗೆ ತಮ್ಮ ಅಂಗಡಿಯ ಕ್ಯಾಷ್ ಇನ್‌ಚಾರ್ಜ್ ನೀಡಿದರು. ನ.18ರಂದು ಚಂದ್ರಪ್ರಕಾಶ್ ಅವರು ಅಂಗಡಿಯ ಕ್ಯಾಷ್ ಕೌಂಟರ್‌ನಲ್ಲಿ 2.90 ಲಕ್ಷ ನಗದನ್ನು ಇಟ್ಟು ಅಂಗಡಿ ಬೀಗ ಹಾಕಿಕೊಂಡು ಹೋಗಿದ್ದಾರೆ. ಮರುದಿನ ಬೆಳಗ್ಗೆ ಆಗಮಿಸಿ ಅಂಗಡಿ ತೆರೆದಾಗ ಶೋಕೇಸ್‌ನಲ್ಲಿದ್ದ 11,57,965 ರೂ. ಮೌಲ್ಯದ ಮೊಬೈಲ್‌ಗಳು ಮತ್ತು ಕ್ಯಾಷ್ ಕೌಂಟರ್‌ನಲ್ಲಿದ್ದ 2.90 ಲಕ್ಷ ನಗದು ಕಳುವಾಗಿರುವುದು ಗೊತ್ತಾಗಿದೆ. ಅಂಗಡಿಯ 3ನೇ ಅಂತಸ್ತಿನಲ್ಲಿರುವ ಟೆರೇಸ್ ಬಾಗಿಲು ಮೂಲಕ ಒಳ ನುಗ್ಗಿರುವ ಖದೀಮರು ಕಳವು ಮಾಡಿದ್ದಾರೆ ಎಂದು ಮುಖೇಶ್ ಡಿ.ಸಿಷ್ವಿ ಅವರು ನ.23ರಂದು ಮಂಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಎಸ್‌ಎಸ್‌ಎಲ್‌ಸಿ ನಕಲಿ ಅಂಕಪಟ್ಟಿ ನೀಡಿ ನೌಕರಿ: ಕ್ರಿಮಿನಲ್ ಕೇಸ್ ದಾಖಲು

ಮೈಸೂರು, ನ.26– ಮೈಸೂರಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಗೆ ನಕಲಿ ದಾಖಲೆಗಳನ್ನು ಸಲ್ಲಿಸಿ ತೃತೀಯ ದರ್ಜೆ ಸಹಾಯಕರ ಹುದ್ದೆ ಪಡೆದಿರುವ ಬಗ್ಗೆ ವ್ಯಕ್ತಿಯೋರ್ವನ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

ಮೈಸೂರಿನ ಕಲ್ಯಾಣಗಿರಿ ನಿವಾಸಿ ಸಯ್ಯದ್ ಮುಜೀಬ್ ಆರೋಪಕ್ಕೆ ಗುರಿಯಾದವನಾಗಿದ್ದು, ಈತ 2006ರ ಜೂ.6ರಂದು ಆರೋಗ್ಯ ಇಲಾಖೆ ಚಾಲಕನಾಗಿ ಕರ್ತವ್ಯಕ್ಕೆ ಸೇರಿದ್ದ. ನಂತರ ನೌಕರರ ವೃಂದ ಬದಲಾವಣೆಯ ಪ್ರಸ್ತಾವನೆಯೊಂದಿಗೆ 2012ರ ಫೆ.3ರಂದು ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಮತ್ತು ಕರ್ನಾಟಕ ಲೋಕಸೇವಾ ಆಯೋಗವು ಸರ್ಕಾರಿ ನೌಕರರಿಗೆ ನಡೆಸುವ ಅಕೌಂಟ್ಸ್ ಪರೀಕ್ಷೆ ಉತ್ತೀರ್ಣನಾಗಿರುವ ಅಂಕಪಟ್ಟಿಯನ್ನು ಸಲ್ಲಿಸಿದ್ದಾನೆ.

ಈ ದಾಖಲೆಗಳನ್ನು ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಿಂದ ಬೆಂಗಳೂರಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯಕ್ಕೆ ರವಾನೆ ಮಾಡಲಾಗಿದ್ದು, ಅದನ್ನು ಇಲಾಖೆಯ ನಿರ್ದೇಶನಾಲಯವು ಅಂಗೀಕರಿಸಿಕೊಂಡ ನಂತರ ಆತ 2020ರ ಜ.17ರಿಂದ ಮೈಸೂರು ಡಿಹೆಚ್‌ಓ ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿ ಕೆಲಸ ಮಾಡಿಕೊಂಡಿದ್ದ.

ಆದರೆ ಸಯ್ಯದ್ ಮುಜೀಬ್ ಸರಿಯಾಗಿ ಕನ್ನಡ ಬರೆಯದ ಕಾರಣ ಅನುಮಾನಗೊಂಡ ಡಿಹೆಚ್‌ಓ ಅವರು, ಆತ ಕಚೇರಿಗೆ ಸಲ್ಲಿಸಿದ್ದ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯ ಜೆರಾಕ್ಸ್ ಅನ್ನು 2021ರ ಏ.19ರಂದು ಎಸ್‌ಎಸ್‌ಎಲ್‌ಸಿ ಬೋರ್ಡ್‌ಗೆ ಪರಿಶೀಲನೆಗಾಗಿ ಕಳುಹಿಸಿದ್ದು, ಇದು ನಕಲಿ ಅಂಕಪಟ್ಟಿ ಎಂದು ಒಂದು ವರ್ಷದ ನಂತರ ಅಂದರೆ 2022ರ ಏ.5ರಂದು ಎಸ್‌ಎಸ್‌ಎಲ್‌ಸಿ ಬೋರ್ಡ್‌ನಿಂದ ಆರೋಗ್ಯ ಇಲಾಖೆಗೆ ಉತ್ತರಬಂದಿದೆ. ಅಲ್ಲದೇ ಡಿಹೆಚ್‌ಓ ಅವರು 2021ರ ಆ.5ರಂದು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸಯ್ಯದ್ ಮುಜೀಬ್‌ನ ಅಂಕಪಟ್ಟಿ ನೈಜತೆಗಾಗಿ ರವಾನಿಸಿದ್ದ ಪತ್ರಕ್ಕೂ ಕೂಡ ಅದು ನಕಲಿ ಎಂದು ಉತ್ತರ ಬಂದಿದೆ. ಈ ಹಿನ್ನೆಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯವು ಅ.10ರಂದು ಸಯ್ಯದ್ ಮುಜೀಬ್‌ನನ್ನು ಕೆಲಸದಿಂದ ವಜಾಗೊಳಿಸಿದೆ. ನಿರ್ದೇಶನಾಲಯ ದಿಂದ ಬಂದ ನಿರ್ದೇಶನದ ಮೇರೆಗೆ ಮೈಸೂರು ಡಿಹೆಚ್‌ಓ ಕಚೇರಿ ಸಹಾಯಕ ಆಡಳಿತಾಧಿಕಾರಿ ಜಯಪ್ರಕಾಶ್ ನೀಡಿದ ದೂರನ್ನು ನಜರ್‌ಬಾದ್ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಸಿಎಫ್‌ಟಿಆರ್‌ಐ ಆವರಣದಲ್ಲಿ ಸಂವಿಧಾನ ದಿನಾಚರಣೆಗೆ ಚಾಲನೆ

ಸಂವಿಧಾನ ಜಾರಿಯಿಂದ ದೇಶದ ಸಾಕ್ಷರತೆ ಹೆಚ್ಚಳ

ಮೈಸೂರು,ನ.26(ಆರ್‌ಕೆಬಿ)–ಸಂವಿಧಾನ ಜಾರಿ ನಂತರ ದೇಶದ ಸಾಕ್ಷರತೆ ಪ್ರಮಾಣ ಇಂದು ಶೇ.70ಕ್ಕೆ ಏರಿಕೆಯಾಗಿದೆ ಎಂದು ಸಿಎಫ್‌ಟಿಆರ್‌ಐ ಮುಖ್ಯ ವಿಜ್ಞಾನಿ ಹೆಚ್.ಎಸ್. ಸತೀಶ್ ತಿಳಿಸಿದರು.

ಮೈಸೂರಿನ ಸಿಎಸ್‌ಐಆರ್–ಸಿಎಫ್‌ಟಿಆರ್‌ಐನ ಚೆಲುವಾಂಬ ಸಭಾಂಗಣದಲ್ಲಿ ಸಿಎಫ್‌ಟಿಆರ್‌ಐ ಎಸ್‌ಸಿ/ಎಸ್‌ಟಿ ನೌಕರರ ಕ್ಷೇಮಾಭಿವೃದ್ಧಿ ಸಂಘ ಶನಿವಾರ ಆಯೋಜಿಸಿದ್ದ 'ಸಂವಿಧಾನ ದಿನಾಚರಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

1947ಅನ್ನು ಸಾಕ್ಷರತೆ ಬಹಳ ಕಡಿಮೆ ಇತ್ತು. ಅಂದು ಶೇ.20ರಷ್ಟಿದ್ದ ಸಾಕ್ಷರತೆ ಇಂದು ಶೇ.70ರಷ್ಟಕ್ಕೆ ಏರಿದೆ. ಇದು ಡಾ.ಬಿ.ಆರ್.ಅಂಬೇಡ್ಕರ್ ಅವರು ನೀಡಿದ ಬಹುದೊಡ್ಡ ಕೊಡುಗೆ. ಸಂವಿಧಾನದ ಜಾರಿಯಿಂದ ಇದು ಸಾಧ್ಯವಾಗಿದೆ. ಅಂಬೇಡ್ಕರ್ ಅವರು ದಲಿತರಿಗೆ ದನಿಯಾದರು. ದಲಿತರು, ಹಿಂದುಳಿದವರು ಸೇರಿದಂತೆ ಬಹುತೇಕ ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಅನುಕೂಲವಾಗಿದೆ ಎಂದು ತಿಳಿಸಿದರು. ಮುಖ್ಯ ಅತಿಥಿಯಾಗಿದ್ದ ಪತ್ರಕರ್ತ, ಸಾಮಾಜಿಕ ಹೋರಾಟಗಾರ ಶಿವಸುಂದರ್ 'ಭಾರತೀಯ ಸಂವಿಧಾನ: ಮೌಲ್ಯಗಳು ಹಾಗೂ ತತ್ವಗಳು' ಕುರಿತು ವಿಶೇಷ ಭಾಷಣ ಮಾಡಿದರು. ಸಿಎಫ್‌ಟಿಆರ್‌ಐ ಅಧಿಕಾರಿ ರಾಧಾ ರಮಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಿಎಫ್‌ಟಿಆರ್‌ಐ ಎಸ್‌ಸಿ/ಎಸ್‌ಟಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಸ್ವಾಮಿ, ಕಾರ್ಯದರ್ಶಿ ಹೆಚ್.ಇ.ಕೃಷ್ಣಯ್ಯ, ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಸಭಾಂಗಣದಲ್ಲಿ ಸಂವಿಧಾನ ದಿನಾಚರಣೆಗೆ ಪತ್ರಕರ್ತ, ಸಾಮಾಜಿಕ ಹೋರಾಟಗಾರ ಶಿವಸುಂದರ್ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಚಿತ್ರದಲ್ಲಿ ಮುಖ್ಯ ವಿಜ್ಞಾನಿ ಹೆಚ್.ಎಸ್.ಸತೀಶ್, ಸಿಎಫ್‌ಟಿಆರ್‌ಐ ಎಸ್‌ಸಿ–ಎಸ್‌ಟಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಸ್ವಾಮಿ, ಅಧಿಕಾರಿ ರಾಧಾ ರಮಣಿ ಉಪಸ್ಥಿತರಿದ್ದರು

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.11.2022 ಭಾನುವಾರ, ಮಳೆ ನಕ್ಷತ್ರ: ಅನೂರಾಧ, 20.11.2022 ರಿಂದ 2.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ಥಿ, ನಕ್ಷತ್ರ : ಪೂಷಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ – ಡಾ.ನರೇಂದ್ರ ರೈ ದೇರ್ಲ, 6.15 ಗೀತಾರಾಧನ, 6.30 ಭಾರತ ಹಾಗೂ ನ್ಯೂಜಿಲ್ಯಾಂಡ್ ತಂಡಗಳ ನಡುವೆ ನಡೆಯಲಿರುವ ಏಕದಿನ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ, 11.00 ಮನ್ ಕೀ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತು ನಂತರ ಮನ್ ಕೀ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ **ಮಧ್ಯಾಹ್ನ:** 3.45 ಯಕ್ಷಗಾನ ತಾಳ ಮದ್ದಲೆ– ಪ್ರಸಂಗ– ಪಾಂಡು ದಿಗ್ವಿಜಯ, ಪ್ರಸ್ತುತಿ– ಕೆ.ಎ. ಪದ್ಮನಾಭ ಪೂಜಾರಿ ಮತ್ತು ಬಳಗದವರು, 6.50 ಕೃಷಿರಂಗ– ಕೃಷಿಲೋಕ, ಕೃಷಿ ಮಾಹಿತಿ, ಜನಪದ ಗೀತೆಗಳು, 8.00 ಮನ್ ಕೀ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ಡಿ.ವಿ. ಮೋಹನ ಕೃಷ್ಣ – ಹಾಡುಗಾರಿಕೆ

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ಮಕ್ಕಳ ದಿನಾಚರಣೆ–ಯುವಜನೋತ್ಸವ, ಉದ್ಘಾಟನೆ: ರೋಟರಿ (ಪಶ್ಚಿಮ), ಮೈಸೂರು ಅಧ್ಯಕ್ಷ ಉಲ್ಲಾಸ್ ಪಂಡಿತ್, ಅಧ್ಯಕ್ಷತೆ: ಶ್ರೀ ತ್ಯಾಗರಾಜ ಸಂಗೀತ ಸಭಾ ಅಧ್ಯಕ್ಷ ಡಾ.ಮೋಹನದಾಸ್ ಭಟ್, ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ, ಬೆಳಗ್ಗೆ 9.30ರಿಂದ.

■ **ಲಯನ್ಸ್ ಕ್ಲಬ್ ಆಫ್ ಮೈಸೂರು ಚಂದನ ಹಾಗೂ ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ:** ಆರೋಗ್ಯ ಹಾಗೂ ಕಣ್ಣಿನ ಉಚಿತ ತಪಾಸಣಾ ಶಿಬಿರ, ಉದ್ಘಾಟನೆ: ಶಾಸಕ ಎಲ್.ನಾಗೇಂದ್ರ, ಮುಖ್ಯ ಅತಿಥಿಗಳು: ಮಾಜಿ ರಾಜ್ಯಪಾಲ ಲಯನ್ ಕೆ.ದೇವೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ, ಉಪಸ್ಥಿತರು: ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ಲಯನ್ ಸುರೇಶ್‌ಬಾಬು, ಲಯನ್ಸ್ ಕ್ಲಬ್ ಆಫ್ ಮೈಸೂರು ಚಂದನ ಅಧ್ಯಕ್ಷ ಲಯನ್ ಚಿಕ್ಕಸಿದ್ದೇಗೌಡ, ಲಯನ್ ರವಿ ರಂಗನಾಥ್, ಲಯನ್ ಅಶ್ವಥ್, ಸ್ಥಳ: ರಂಗ ತಾಲೀಮು ಕೊಠಡಿ, ಕಲಾಮಂದಿರ, ಬೆಳಗ್ಗೆ 9.30ಕ್ಕೆ.

■ **ಚಾಲೆಂಜರ್ಸ್ ಅಕಾಡೆಮಿ ಮೈಸೂರು, ಪರಿವರ್ತನ ಪ್ರಥಮ ದರ್ಜೆ ಕಾಲೇಜು :** ಚಾಲೆಂಜರ್ಸ್ ಕಪ್–2022, ಅಂತರ ರಾಜ್ಯ ಪದವಿ ಕಾಲೇಜು ಪುರುಷರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್, ಸ್ಥಳ: ಮೈಸೂರು ವಿವಿ ಬ್ಯಾಸ್ಕೆಟ್‌ಬಾಲ್ ಕ್ರೀಡಾಂಗಣ, ಯುವರಾಜ ಕಾಲೇಜು ಎದುರು, ಬೆಳಗ್ಗೆ 10 ರಿಂದ.

■ **ಕನ್ನಡಾಂಬೆ ರಕ್ಷಣಾ ವೇದಿಕೆ:** ಕನ್ನಡ ರಾಜ್ಯೋತ್ಸವ ಪ್ರಯುಕ್ತ ಕನ್ನಡಾಂಬೆ ಹೆಮ್ಮೆಯ ಕನ್ನಡಿಗ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಶ್ರೀ ಅರ್ಜುನ್ ಅವಧೂತ ಮಹಾರಾಜ್ ಗುರೂಜಿ, ಅಧ್ಯಕ್ಷತೆ: ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು: ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಸಂಸದ ಪ್ರತಾಪ್ ಸಿಂಹ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕ ಸುದರ್ಶನ್, ಚಿತ್ರನಟ ಆದಿ ಲೋಕೇಶ್, ಶೇಖರ್, ನರಸಿಂಹಮೂರ್ತಿ, ಸುಧೀರ್, ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ಆರಕ್ಷಕ ನಿರೀಕ್ಷಕ ರವಿಶಂಕರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪೊಲೀಸ್ ಸೊಸೈಟಿ ಅಧ್ಯಕ್ಷ ರವಿ, ಮುಖ್ಯ ಭಾಷಣಕಾರರು: ಸಾಹಿತಿ ಬನ್ನೂರು ರಾಜು, ಸಾಲಿಗ್ರಾಮ ಕಸಾಪ ಅಧ್ಯಕ್ಷ ಮಧುಚಂದ್ರ, ಪ್ರಾಸ್ತಾವಿಕ ನುಡಿ: ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ರಾಜಶೇಖರ್, ಸ್ಥಳ: ಸರ್ಕಾರಿ ಪ್ರೌಢಶಾಲಾ ಮೈದಾನ, ಹೂಟಗಳ್ಳಿ, ಬೆಳಗ್ಗೆ 10 ರಿಂದ.

■ **ಸರಸ್ವತಿಪುರಂ ಕನ್ನಡ ಗೆಳೆಯರ ಬಳಗ:** ರಾಜ್ಯೋತ್ಸವ ಸಂಭ್ರಮ, ಬೆಳಗ್ಗೆ 8 ಗಂಟೆಗೆ ಶಾಲಾ ಮಕ್ಕಳಿಗಾಗಿ ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ, ಮಧ್ಯಾಹ್ನ 2 ಗಂಟೆಗೆ ಮಹಿಳೆಯರಿಗಾಗಿ ಆಟೋಟ ಸ್ಪರ್ಧೆ, ಸಂಜೆ 6 ಗಂಟೆಗೆ ಬಡಾವಣೆ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಥಳ: ಕೆ.ಜವರೇಗೌಡ ಉದ್ಯಾನವನ.

■ **ಕರ್ನಾಟಕ ಕಾವಲುಪಡೆ:** ಕನ್ನಡ ರಾಜ್ಯೋತ್ಸವ ಆಚರಣೆ, ಧ್ವಜಾರೋಹಣ: ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಅಧ್ಯಕ್ಷತೆ: ಮೇಯರ್ ಶಿವಕುಮಾರ್, ಮುಖ್ಯ ಅತಿಥಿಗಳು : ಶಾಸಕ ಎಲ್.ನಾಗೇಂದ್ರ, ಮಾಜಿ ಉಪಮೇಯರ್ ಎ.ಜೆ.ಅರ್ಜುನ್‌ಕುಮಾರ್, ಕರ್ನಾಟಕ ಕಾವಲುಪಡೆ ರಾಜ್ಯಾಧ್ಯಕ್ಷ ಎಂ.ಮೋಹನ್‌ಕುಮಾರ್‌ಗೌಡ, ಪಾಲಿಕೆ ಸದಸ್ಯರಾದ ಎಂ.ಶಿವಕುಮಾರ್, ಶೋಭ, ಬಾರ್ ಕೌನ್ಸಿಲ್ ಮಾಜಿ ಅಧ್ಯಕ್ಷ ಆನಂದಕುಮಾರ್, ಪಾಲಿಕೆ ಮಾಜಿ ಸದಸ್ಯ ನಿಂಗಣ್ಣ, ಚಾಮುಂಡೇಶ್ವರಿ ದೇವಸ್ಥಾನದ ಧರ್ಮದರ್ಶಿ ಎಂ.ದೇಸಿಗೌಡ, ಸ್ಥಳ: ನ್ಯೂ ಕಾಂತರಾಜ ಅರಸ್ ರಸ್ತೆ, ಕೆ.ಜಿ.ಕೊಪ್ಪಲು, ಬೆಳಗ್ಗೆ 10.30ಕ್ಕೆ.

■ **ದೊಡ್ಡಟ್ಟಿ ಪ್ರಕಾಶನ ಸಂಸ್ಥೆ:** ಮಹಾದಾಸೋಹಿ ಕೃತಿ ಬಿಡುಗಡೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀಮಹಂತ ಸ್ವಾಮೀಜಿ, ಶ್ರೀ ಸಿದ್ದಮಲ್ಲ ಸ್ವಾಮೀಜಿ, ಅಧ್ಯಕ್ಷತೆ: ಮಲ್ಲನಮೂಲೆ ದಾಸೋಹ ಮಠದ ಶ್ರೀ ಚನ್ನಬಸವ ಸ್ವಾಮೀಜಿ, ಕೃತಿ ಬಿಡುಗಡೆ: ಡಾ.ಗೊ.ರು.ಚನ್ನಬಸಪ್ಪ, ಸ್ಥಳ: ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 10.30ಕ್ಕೆ.

■ **ಸಂವಹನ : ಪ್ರಕಾಶಕರು, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ಶಿವರಾಮು ಕಾಡನಕುಪ್ಪೆ ಸಂಸ್ಮರಣಾ ಗ್ರಂಥ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ: ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಂಸ್ಥೆ ಅಧ್ಯಕ್ಷ ಪ.ಮಲ್ಲೇಶ್, ಪ್ರಾಸ್ತಾವಿಕ ನುಡಿ: ವಿಶ್ರಾಂತ ಪ್ರಾಧ್ಯಾಪಕ ಡಾ.ರಾಗೌ, ಕೃತಿ ಲೋಕಾರ್ಪಣೆ: ಹಿರಿಯ ಪತ್ರಕರ್ತ ಜಿ.ಪಿ.ಬಸವರಾಜು, ನುಡಿ ನಮನ: ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಜಿ. ಚಂದ್ರಶೇಖರ್, ವಿಶ್ರಾಂತ ಪ್ರಾಂಶುಪಾಲ ಡಾ. ಕೆ. ಕಾಳಚನ್ನೇಗೌಡ, ಸ್ಥಳ: ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ

■ **ಅಮೃತ ವಿಶ್ವ ವಿದ್ಯಾಪೀಠಂ, ಮೈಸೂರು:** ಪದವೀಧರರ ದಿನ, ಮುಖ್ಯ ಅತಿಥಿಗಳು: ವಿಧಾನಸಭಾ ಸಭಾಪತಿ ವಿಶ್ವೇಶ್ವರ ಹೆಗಡೆ ಕಾಗೇರಿ, ಗೌರವ ಅತಿಥಿಗಳು: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಜಿ.ಹೇಮಂತಕುಮಾರ್, ಸಾನ್ನಿಧ್ಯ: ಮಾತಾ ಅಮೃತಾನಂದಮಯಿ ಮಠದ ಪ್ರಧಾನ ಕಾರ್ಯದರ್ಶಿ ಸ್ವಾಮಿ ಪೂರ್ಣಾಮೃತನಾಂದಪುರಿ, ಉಪಸ್ಥಿತರು: ಅಮೃತ ವಿಶ್ವವಿದ್ಯಾಪೀಠಂ ಕುಲಸಚಿವ ಡಾ.ಕೆ.ಶಂಕರನ್, ಪರೀಕ್ಷಾ ನಿಯಂತ್ರಕ ಡಾ.ದಂಡಪಾಣಿ, ನಿರ್ದೇಶಕ ಅನಂತಾನಂದ ಚೈತನ್ಯ, ಸಂಚಾಲಕ ಮುಕ್ತಿದಾಮೃತ ಚೈತನ್ಯ, ಪ್ರಾಚಾರ್ಯ ಡಾ.ರವೀಂದ್ರನಾಥ್, ಸ್ಥಳ: ಅಮೃತ ವಿಶ್ವ ವಿದ್ಯಾಪೀಠಂ, ಮೈಸೂರು ಕ್ಯಾಂಪಸ್, ಬೆಳಗ್ಗೆ 11ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ:** ಸ್ವಾಮಿ ಮುಕ್ತಿದಾನಂದ ಅವರಿಂದ ಶ್ರೀರಾಮಕೃಷ್ಣ ಆರಾತ್ರಿಕ ಸ್ತೋತ್ರ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಶಾರದಾ ಪ್ರತಿಷ್ಠಾನ ಟ್ರಸ್ಟ್:** ವೀಣಾನಾದ ಸಂಭ್ರಮ, ಪ್ರಥಮ ವರ್ಷದ ಶಾರದಾ ವೀಣಾ ಮಹೋತ್ಸವ, ವಿದ್ವಾನ್ ಲೋಕೇಶ್ವರ ಅವರಿಂದ ವೀಣಾವಾದನ, ವಿದ್ವಾನ್ ಸುದರ್ಶನ್–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಘಟ, ಸ್ಥಳ: ಶ್ರೀರಾಮ ಮಂದಿರ, ಜಯನಗರ, ಸಂಜೆ 6 ರಿಂದ.

■ **ರಂಗಾಯಣ:** ವಾರಾಂತ್ಯ ರಂಗ ಪ್ರದರ್ಶನ, ರಂಗಾಯಣದ ರೆಪರ್ಟರಿ ಕಲಾವಿದರಿಂದ ಟಿಪ್ಪು ನಿಜ ಕನಸುಗಳು ನಾಟಕ ಪ್ರದರ್ಶನ, ನಿರ್ದೇಶನ: ಅಡ್ಡಂಡ ಸಿ.ಕಾರ್ಯಪ್ಪ, ರಂಗವಿನ್ಯಾಸ : ಶಶಿಧರ ಅಡಪ, ಸಂಗೀತ: ಧನಂಜಯ ಆರ್.ಸಿ., ಸುಬ್ರಹ್ಮಣ್ಯ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6ಕ್ಕೆ.

ದೇವಿರಮ್ಮನಹಳ್ಳಿಯಲ್ಲಿಂದು, ನಂಜನಗೂಡು ತಾ.

■ **ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ:** ವೀರಶೈವ ಲಿಂಗಾಯಿತ ವಧು–ವರರ ಸಮಾವೇಶ, ಸಾನ್ನಿಧ್ಯ: ನಂಜನಗೂಡು ತಾಲೂಕು ಶರಣ ಸಂಗಮ ಮಠದ ಮಠಾಧ್ಯಕ್ಷ ಶ್ರೀ ನಾಗರಾಜೇಂದ್ರ ಸ್ವಾಮೀಜಿ, ಉದ್ಘಾಟನೆ: ಗುತ್ತಿಗೆದಾರ ಮಹೇಂದ್ರ, ಅಧ್ಯಕ್ಷತೆ: ನಂಜನಗೂಡು ವೀರಶೈವ ಲಿಂಗಾಯಿತ ಮಹಾಸಭಾ ತಾಲೂಕು ಅಧ್ಯಕ್ಷ ಬುಲೆಟ್ ಮಹದೇವಪ್ಪ, ಸ್ಥಳ: ಶರಣ ಸಂಗಮ ಮಠ, ದೇವಿರಮ್ಮನಹಳ್ಳಿ, ನಂಜನಗೂಡು, ಬೆಳಗ್ಗೆ 11.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 27 ಭಾನುವಾರ 2022

ಸಂಪುಟ: 43 | ಸಂಚಿಕೆ: 220 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

'ಆಧಾರ್' ಆಧಾರವಾಗಬೇಕಿದ್ದರೆ ಕಾಲ ಕಾಲಕ್ಕೆ ನವೀಕರಿಸಿಕೊಳ್ಳಿ...

● ಸರ್ಕಾರದ ಹೊಸ ಹೊಸ ಯೋಜನೆಗಳ ಪ್ರಯೋಜನ ಪಡೆಯಲು ಇದು ಅನಿವಾರ್ಯ ● ಕನಿಷ್ಠ 10 ವರ್ಷಕ್ಕೊಮ್ಮೆ ಸಮರ್ಪಕ ಮಾಹಿತಿಯೊಂದಿಗೆ ನವೀಕರಿಸಿಕೊಳ್ಳುವುದು ಅವಶ್ಯ ● ಬಿಟ್ಟು ಹೋದ ಇಲ್ಲವೇ ಹೊಸ ಮಾಹಿತಿ ಸೇರ್ಪಡೆಗೂ ಅವಕಾಶವಿದೆ

ಮೈಸೂರು,ನ.26(ಎಂಟಿವೈ)– ಹತ್ತು ವರ್ಷದ ಹಿಂದೆ ಪಡೆದ ಆಧಾರ್ ಕಾರ್ಡ್ ಪ್ರಸ್ತುತವಲ್ಲ. ಸರ್ಕಾರಗಳ ಆಯಾ ಕಾಲದ ಪ್ರಯೋಜನ ಪಡೆಯಬೇಕಿದ್ದರೆ ಹೊಂದಿರುವ ಅಗತ್ಯ ದಾಖಲೆ ನೀಡಿ, ಆಧಾರ್ ಕಾರ್ಡ್ ನವೀಕರಿಸಿಕೊಳ್ಳುವುದು ಅವಶ್ಯ. ಇದರ ಬಗ್ಗೆ ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರ (ಯುಐಡಿಎಐ)ವು ಸಲಹೆ ನೀಡಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಸೌಲಭ್ಯ ಪಡೆಯಲು ಆಧಾರ್ ಕಾರ್ಡ್ ಕಡ್ಡಾಯ. ಅಪೂರ್ಣ ಮಾಹಿತಿ ಹಾಗೂ ಅಗತ್ಯ ದಾಖಲೆ ನೀಡದೆ ಯಾವಾಗಲೋ ಮಾಡಿಸಿಕೊಂಡ ಆಧಾರ್ ಕಾರ್ಡ್ ಪ್ರಸ್ತುತ ನಿರುಪಯುಕ್ತವಾಗಬಹುದು. ಯುಐಡಿಎಐ ನೀಡಿರುವ ಸೂಚನೆ ಮೇರೆಗೆ 2009ರಂದು ಆಧಾರ್ ಕಾರ್ಡ್ ಮಾಡಿಸಿಕೊಂಡಿರುವವರು ಅಗತ್ಯ ದಾಖಲೆ ನೀಡಿ, ಈಗ ನವೀಕರಣ ಮಾಡಿಸಿಕೊಳ್ಳಬೇಕಾಗಿದೆ. ಪಡಿತರ ಚೀಟಿ, ಬ್ಯಾಂಕ್ ಖಾತೆ, ಮೊಬೈಲ್ ಸಿಮ್ ಕಾರ್ಡ್, ವಿದ್ಯಾರ್ಥಿ ವೇತನ, ಸಾಲ ಸೌಲಭ್ಯ ಸೇರಿದಂತೆ ವಿವಿಧ ಯೋಜನೆಗಳ ಸದುಪಯೋಗ ಪಡೆದುಕೊಳ್ಳುವುದು, ಸಮಗ್ರ ಮಾಹಿತಿ ಹೊಂದಿರುವ ಆಧಾರ್ ಕಾರ್ಡ್‌ದಾರರಿಗೆ ಮಾತ್ರ ಸಾಧ್ಯವಾಗುತ್ತದೆ. ಹಲವು ಫಲಾನುಭವಿಗಳು ಆಧಾರ್ ಕಾರ್ಡ್ ದೋಷದಿಂದಾಗಿ ನಾನಾ ಸೌಲಭ್ಯ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಯುಐಡಿಎಐ 10 ವರ್ಷದ ಹಿಂದೆ ಮಾಡಿಸಿಕೊಂಡಿರುವ ಆಧಾರ್ ಕಾರ್ಡ್‌ಗೆ ಲೇಟೆಸ್ಟ್ ಮಾಹಿತಿ ನೀಡಿ, ಅಪ್ಡೇಟ್ ಮಾಡಿಸಿಕೊಳ್ಳಲು ಸೂಚನೆ ನೀಡಿದೆ.

ತಿದ್ದುಪಡಿಗೆ ಶುಲ್ಕ

ಆಧಾರ್ ಕಾರ್ಡ್ ನವೀಕರಣಕ್ಕೆ ವಿವಿಧ ದಾಖಲೆಗಳ ವಿವರ ನಮೂದಿಸಲು ಒಬ್ಬರಿಗೆ 50 ರೂ, ಬಯೋಮೆಟ್ರಿಕ್ ಸೇರಿದಂತೆ ತಿದ್ದುಪಡಿ ಮಾಡಲು 100 ರೂ., ಪಿವಿಸಿ ಕಾರ್ಡ್‌ಗಾದರೆ 50 ರೂ. ಪಾವತಿಸಬೇಕಾಗಿದೆ. 5 ವರ್ಷದ ಹಿಂದೆ ಬಯೋಮೆಟ್ರಿಕ್ (ಬೆರಳಚ್ಚು) ಸೇರಿದಂತೆ ಇನ್ನಿತರ ಮಾಹಿತಿ ನೀಡಿ ನವೀಕರಣ ಮಾಡಿಸಿಕೊಂಡಿರುವವರು ಮತ್ತೆ ನವೀಕರಣ ಮಾಡಿಸಿಕೊಳ್ಳುವ ಅಗತ್ಯವಿಲ್ಲ. ಬಯೋಮೆಟ್ರಿಕ್ ಆಗದೇ ಇರುವವರು, ವಿಳಾಸ ಬದಲಾಗಿದ್ದರೆ ತಿದ್ದುಪಡಿ ಮಾಡಿಸಿಕೊಳ್ಳಬೇಕಾಗಿದೆ.



ಸಲ್ಲಿಸಬೇಕಾದ ದಾಖಲೆ: ಆಧಾರ್ ಕಾರ್ಡ್ ನವೀಕರಣಕ್ಕಾಗಿ ಸಾರ್ವಜನಿಕರು ವೋಟರ್ ಐಡಿ ಕಾರ್ಡ್, ರೇಷನ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್, ಡ್ರೈವಿಂಗ್ ಲೈಸೆನ್ಸ್ ಹಾಗೂ ಪಾಸ್‌ಪೋರ್ಟ್ ಸೈಜ್‌ನ 3 ಫೋಟೊದೊಂದಿಗೆ ನಿಗದಿತ ಫಾರಂ ಭರ್ತಿ ಮಾಡಿ ಸಲ್ಲಿಸಬೇಕಾಗಿದೆ. ನವೀಕರಣ ವೇಳೆ ವಿಳಾಸ ಬದಲಾಗಿದ್ದರೆ, ಇನ್ಷಿಯಲ್ ಬದಲಾವಣೆ, ಮೊಬೈಲ್ ನಂಬರ್ ಬದಲಿಸುವುದೂ ಸೇರಿದಂತೆ ಕೆಲ ಮಾಹಿತಿ ಬದಲಿಸಬೇಕಾದರೆ ಅದಕ್ಕೆ ಪೂರಕವಾದ ದಾಖಲೆ ಹಾಜರುಪಡಿಸಬೇಕು. ಸಾರ್ವಜನಿಕರು ನೀಡುವ ಮಾಹಿತಿಗೆ ಅನುಗುಣವಾಗಿ ಇತ್ತೀಚಿನ ಚಿತ್ರದೊಂದಿಗೆ ಒಂದು ತಿಂಗಳೊಳಗೆ ಹೊಸ ಆಧಾರ್ ಕಾರ್ಡ್ ಕೈ ಸೇರಲಿದೆ.

ಸುಲಭ ವಿಧಾನ: ಈ ಹಿಂದೆ ಆಧಾರ್ ಕೇಂದ್ರಗಳ ಮುಂದೆ ಸಾಲುಗಟ್ಟಿ ನಿಂತ ಜನರು ಕಾಣುತ್ತಿದ್ದರು. ಆದರೆ, ಈಗ ಸುಲಭ ವಿಧಾನದಲ್ಲಿ ಆಧಾರ್ ಕಾರ್ಡ್ ನವೀಕರಣ ಮಾಡಿಸಿಕೊಳ್ಳಬಹುದಾಗಿದೆ. ಆನ್‌ಲೈನ್‌ನಲ್ಲೂ ನವೀಕರಣ ಮಾಡಿಕೊಳ್ಳಬಹುದಾಗಿದೆ. ಇಲ್ಲದಿದ್ದರೆ ಮೈಸೂರಲ್ಲಿರುವ ಆಧಾರ್ ಕೇಂದ್ರಗಳಲ್ಲೂ ಮಾಡಿಕೊಳ್ಳಬಹುದಾಗಿದೆ.

ಸರಸ್ವತಿಪುರಂ ಕೇಂದ್ರ: ಮೈಸೂರಿನ ಸರಸ್ವತಿಪುರಂನಲ್ಲಿರುವ ಆಧಾರ್ ಕೇಂದ್ರದಲ್ಲಿ 5 ಯೂನಿಟ್‌ಗಳಿದ್ದು, ದಾಖಲೆ ಪರಿಶೀಲನೆ, ವಿಚಾರಣೆ, ನವೀಕರಣಕ್ಕೆ ಪ್ರತ್ಯೇಕ ಕೌಂಟರ್ ವ್ಯವಸ್ಥೆ ಮಾಡಲಾಗಿದೆ. ಯುಐಡಿಎಐ ನೇರ ಸಂಪರ್ಕವಿರುವ ಸರಸ್ವತಿಪುರಂ ಆಧಾರ್ ಕೇಂದ್ರದಲ್ಲಿ ಆಧಾರ್ ಕಾರ್ಡ್ ನವೀಕರಣ, ಬಾಲ ಆಧಾರ್, ತಿದ್ದುಪಡಿ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ನೇರವಾಗಿ ಮುಖ್ಯ ಕಚೇರಿಗೆ ಮಾಹಿತಿ ರವಾನೆಯಾಗುವುದರಿಂದ ಸಾರ್ವಜನಿಕರಿಗೆ ಪುನರ್ ನವೀಕೃತ ಆಧಾರ್ ಕಾರ್ಡ್ ಬಹುಬೇಗನೆ ಕೈಸೇರಲಿದೆ. ಈ ಕೇಂದ್ರದಲ್ಲಿ ದಿನಕ್ಕೆ 800 ರಿಂದ 1200 ಮಂದಿಗೆ ಆಧಾರ್ ಕಾರ್ಡ್ ಮಾಡಿಕೊಡುವ ಸೌಲಭ್ಯವಿದೆ. ಗ್ರಾಮೀಣ ಪ್ರದೇಶ ಜನರಿಗೆ ಈ ಕೇಂದ್ರ ಉಪಯುಕ್ತವಾಗಲಿದೆ. ಎಟಿಎಂ ಮಾದರಿಯ ಆಧಾರ್ ಕಾರ್ಡ್‌ಗೆ ಈ ಕೇಂದ್ರದಲ್ಲಿ ನೋಂದಣಿ ಮಾಡಿಕೊಳ್ಳಲಾಗುತ್ತಿದೆ. 50 ರೂ. ಶುಲ್ಕ ▶ 9ನೇ ಪುಟಕ್ಕೆ

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಹಿನ್ನೆಲೆ

ಮೈಸೂರಲ್ಲಿ ಬಾಡಿಗೆದಾರರ ಮೇಲೆ ಪೊಲೀಸರ 'ಸುರಕ್ಷಾ' ಕಣ್ಣು

● ಕುಕ್ಕರ್ ಬಾಂಬ್ ಸ್ಫೋಟದ ಆರೋಪಿ ಶಾರಿಕ್ ನಕಲಿ 'ಆಧಾರ್' ನೀಡಿ ಬಾಡಿಗೆ ಮನೆ ಪಡೆದ ಪರಿಣಾಮ
● ಇನ್ನು ಮುಂದೆ ಮನೆ ಬಾಡಿಗೆಗೆ ನೀಡುವವರು ಸಂಬಂಧಿಸಿದ ಪೊಲೀಸ್ ಠಾಣೆಗೆ ಮಾಹಿತಿ ನೀಡಲೇಬೇಕು
● ಸುರಕ್ಷಾ ನಮೂನೆ ಭರ್ತಿ ಮಾಡಿ ಆಧಾರ್, ಪಾನ್ ಕಾರ್ಡ್, ಡಿಎಲ್ ಇತರೆ ದಾಖಲೆಗಳಲ್ಲಿ ಒಂದನ್ನು ಸಲ್ಲಿಸಬೇಕು

ಮೈಸೂರು, ನ.26(ಎಸ್‌ಬಿಡಿ)– ಕುಕ್ಕರ್ ಬಾಂಬ್ ಸ್ಫೋಟದ ರೂವಾರಿ ಶಾರಿಕ್ ನಕಲಿ ಆಧಾರ್ ಕಾರ್ಡ್ ನೀಡಿ ಮೈಸೂರಿನಲ್ಲಿ ನೆಲೆಸಿದ್ದ ಹಿನ್ನೆಲೆಯಲ್ಲಿ ಇಲ್ಲಿನ ಪೊಲೀಸರು ಬಾಡಿಗೆ ಮನೆಯಲ್ಲಿ ವಾಸವಿರುವವರ ಮಾಹಿತಿ ಪರಿಶೀಲನೆಗೆ ಮುಂದಾಗಿದ್ದಾರೆ.

ಮಂಗಳೂರಿನಲ್ಲಿ ಇತ್ತೀಚೆಗೆ ಚಲಿಸುತ್ತಿದ್ದ ಆಟೋದಲ್ಲಿ ಕುಕ್ಕರ್ ಬಾಂಬ್ ಸ್ಫೋಟಿಸಿತ್ತು. ಅದನ್ನು ಸಾಗಿಸುತ್ತಿದ್ದ ಶಾರಿಕ್ ಮೈಸೂರಿನ ಲೋಕನಾಯಕನಗರದ ಬಾಡಿಗೆ ಮನೆಯಲ್ಲಿ ವಾಸವಿದ್ದ. ಕೊಠಡಿ ಬಾಡಿಗೆಗೆ ಪಡೆಯುವಾಗ ಆತ ಮನೆ ಮಾಲೀಕರಿಗೆ ನಕಲಿ ಆಧಾರ್ ಕಾರ್ಡ್ ನೀಡಿದ್ದು ಪೊಲೀಸರ ತನಿಖೆಯಿಂದ ತಿಳಿದು ಬಂದಿದೆ. ಈ ಹಿನ್ನೆಲೆಯಲ್ಲಿ ಕಟ್ಟೆಚ್ಚರ ವಹಿಸಿರುವ ಪೊಲೀಸರು, ಬಾಡಿಗೆದಾರರ ವಿವರವನ್ನು ಮನೆ ಮಾಲೀಕರಿಂದಲೇ ಸಂಗ್ರಹಿಸಿ ಅದರ ಅಸಲಿಯತ್ತು ಪರಿಶೀಲಿಸಲು ವಿಶೇಷ ಕ್ರಮ ಕೈಗೊಂಡಿದ್ದಾರೆ. ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಶನಿವಾರ ತಮ್ಮ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಸಂಬಂಧ ಮಾಹಿತಿ ನೀಡಿ, ಮೈಸೂರು ಶಾಂತಿಯುತ ನಗರವಾಗಿದ್ದು, ಸಮಾಜ ವಿರೋಧಿ ಚಟುವಟಿಕೆಗಳು ನಡೆಯದಂತೆ ನಿಗಾ ವಹಿಸಲಿದ್ದೇವೆ. ಇದಕ್ಕೆ ಸಾರ್ವಜನಿಕರ ಸಹಕಾರ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಭೋಗ್ಯ ಹಾಗೂ ಬಾಡಿಗೆ ಪಡೆಯುವವರ ವಿವರವನ್ನು ಮನೆ ಮಾಲೀಕರು ನಮಗೆ ನೀಡಬೇಕು. ಇದಕ್ಕಾಗಿ ಬಾಡಿಗೆಗಿರುವ ವ್ಯಕ್ತಿ ಅಥವಾ ಕುಟುಂಬದ ಮಾಹಿತಿ ಮತ್ತು ಪೇಯಿಂಗ್ ಗೆಸ್ಟ್ ಹೌಸ್‌ಗಳಲ್ಲಿ ವಾಸವಿರುವವರ ಮಾಹಿತಿಗೆ ಪ್ರತ್ಯೇಕ 'ಸುರಕ್ಷಾ' ನಮೂನೆಯನ್ನು ಸಿದ್ಧಪಡಿಸಲಾಗಿದೆ. ಎಲ್ಲಾ ಪೊಲೀಸ್ ಠಾಣೆಗಳಿಗೂ ವಿತರಿಸಲಾಗಿದ್ದು, ನಗರ ಪೊಲೀಸ್ ವೆಬ್‌ಸೈಟ್‌ನಲ್ಲೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಳಿಕ ಭರ್ತಿ ಮಾಡಿದ ▶ 9ನೇ ಪುಟಕ್ಕೆ



ಪತ್ರಿಕಾಗೋಷ್ಠಿಯಲ್ಲಿ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಡಿಸಿಪಿಗಳಾದ ಪ್ರದೀಪ್ ಗುಂಟಿ, ಗೀತಾ ಪ್ರಸನ್ನ.

'ಸುರಕ್ಷಾ' ನಮೂನೆಯಲ್ಲೇನಿದೆ?

ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಾಗೋತ್ ತಮ್ಮ ಮೊದಲ ಸುದ್ದಿಗೋಷ್ಠಿಯಲ್ಲಿ ವಿಶೇಷ 'ಸುರಕ್ಷಾ' ಕ್ರಮದ ಅವಶ್ಯಕತೆಯನ್ನು ತಮ್ಮ ಸಂಬಂಧಿಕರೊಬ್ಬರ ಹತ್ಯೆ ಘಟನೆಯನ್ನು ಉದಾಹರಿಸಿ ತಿಳಿಸಿದರು. ನಮ್ಮ ಸಂಬಂಧಿಕರೊಬ್ಬರ ಮಕ್ಕಳಿಬ್ಬರು ವಿದೇಶದಲ್ಲಿದ್ದಾರೆ. ಹಾಗಾಗಿ ಅವರೊಬ್ಬರೇ ಮನೆಯಲ್ಲಿದ್ದರು. ಮೇಲಂತಸ್ತಿನ ಮನೆಯನ್ನು ಬಾಡಿಗೆ ನೀಡಿದ್ದರು. ಅಲ್ಲಿದ್ದ ವ್ಯಕ್ತಿ ಕೋವಿಡ್ ಸಂದರ್ಭದಲ್ಲಿ ಅನೇಕ ಬಾರಿ ಅಜ್ಜಿ ಹಣ ಕೊಡಿ ಎಂದು ಪಡೆದಿದ್ದ. ಒಮ್ಮೆ ಹಣ ಕೊಡಲಿಲ್ಲ ಎಂಬ ಕಾರಣಕ್ಕೆ ಅವರನ್ನು ಹತ್ಯೆ ಮಾಡಿ, ಚಿನ್ನಾಭರಣ ದೋಚಿ ಪರಾರಿಯಾದ. ಇಂತಹ ಹಲವು ಘಟನೆಗಳು ನಡೆದಿವೆ. ಹಾಗಾಗಿ ಅಸಲಿ ದಾಖಲೆಗಳ ಪಡೆದು ಪೂರ್ವಾಪರ ತಿಳಿದು ಬಾಡಿಗೆ ನೀಡಬೇಕು ಎಂದು ತಿಳಿಸಿದರು. ಬಾಡಿಗೆ ಮನೆಯಲ್ಲಿರುವ ವ್ಯಕ್ತಿ ಅಥವಾ ಕುಟುಂಬದವರ ಮಾಹಿತಿಯನ್ನು 'ಸುರಕ್ಷಾ' ನಮೂನೆ 1ರಲ್ಲಿ ಸಲ್ಲಿಸಬೇಕು. ಪೇಯಿಂಗ್ ಗೆಸ್ಟ್‌ಹೌಸ್‌ನಲ್ಲಿದ್ದವರ ವಿವರವನ್ನು 'ಸುರಕ್ಷಾ' ನಮೂನೆ 2ರಲ್ಲಿ ಸಲ್ಲಿಸಬೇಕು. ಎರಡರಲ್ಲೂ ಮಾಲೀಕರು ಹಾಗೂ ಬಾಡಿಗೆದಾರರ ಪೂರ್ಣ ಮಾಹಿತಿಯ ಜೊತೆಗೆ ಬಾಡಿಗೆದಾರರ ಪಾಸ್‌ಪೋರ್ಟ್, ಓಟರ್ ಐಡಿ, ಆಧಾರ್ ಕಾರ್ಡ್, ಡಿಎಲ್, ಪಡಿತರ ಚೀಟಿ ಇದರಲ್ಲಿ ಯಾವುದಾದರೊಂದು ದಾಖಲೆ ಪ್ರತಿಯನ್ನು ಲಗತ್ತಿಸಬೇಕು ಎಂದರು.

'ಕೊಡವ ಲ್ಯಾಂಡ್' ಬೇಡಿಕೆಗೆ

ಕೋರ್ಟ್ ಮೊರೆ

'ಕೊಡವ ನ್ಯಾಷನಲ್ ಡೇ' ಕಾರ್ಯಕ್ರಮದಲ್ಲಿ ಕೇಂದ್ರ ಮಾಜಿ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ಅಭಯ

● ಸ್ವಾಯತ್ತ ನಾಡು ಕೇಳಲು ಕೊಡವರಿಗೆ ಹಕ್ಕಿದೆ
● ಕೊಡವರ ಬೇಡಿಕೆ ಬಗ್ಗೆ ನಾನೇ ವಾದ ಮಂಡಿಸುವೆ
● ಪ್ರತ್ಯೇಕ ರಾಜ್ಯ ಕೇಳುವುದರಲ್ಲಿ ಯಾವುದೇ ತಪ್ಪಿಲ್ಲ
● ಭಾರತೀಯರು ಕೊಡವರ ಪರ ಇದ್ದಾರೆ

ಮಡಿಕೇರಿ, ನ.26– ಕೊಡವ ಸ್ವಾಯತ್ತ ನಾಡಿನ ಬೇಡಿಕೆ ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ಮೊರೆ ಹೋಗುವುದಾಗಿ ಘೋಷಿಸಿರುವ ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಕೇಂದ್ರದ ಮಾಜಿ ಸಚಿವ ಡಾ. ಸುಬ್ರಮಣಿಯನ್‌ಸ್ವಾಮಿ, ಕೊಡವರ ಬೇಡಿಕೆ ನ್ಯಾಯಸಮ್ಮತವಾಗಿದ್ದು, ಕೋರ್ಟ್ ಇದನ್ನು ಮನ್ನಿಸುವ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ಮಡಿಕೇರಿ ಸಮೀಪ ಕ್ಯಾಪಿಟಲ್ ವಿಲೇಜ್‌ನಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ನಡೆದ 32ನೇ ವರ್ಷದ 'ಕೊಡವ ನ್ಯಾಷನಲ್ ಡೇ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಕೊಡವರಿಗೆ ಸ್ವಾಯತ್ತ ನಾಡು ಕೇಳಲು ಸಂವಿಧಾನಾತ್ಮಕವಾಗಿ ಹಕ್ಕಿದೆ. ಕೊಡವ ಸ್ವಾಯತ್ತ ನಾಡಿನ ಬೇಡಿಕೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವೆ. ಇದಕ್ಕಾಗಿಯೇ ವಕೀಲರನ್ನು ಕೂಡ ನಿಯೋಜಿಸಿರುವೆ ಎಂದು ಮಾಹಿತಿ ನೀಡಿದರು. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಈ ಹಿಂದೆ ತಾನು ಕೊಡವ ಸ್ವಾಯತ್ತ ನಾಡಿನ ಬೇಡಿಕೆಯನ್ನು ಈಡೇರಿಸುವುದಾಗಿ ಹೇಳಿದ್ದರು. ಆದರೆ 2 ವರ್ಷ ಕಳೆದರೂ ಅವರು ಏನನ್ನೂ ಮಾಡಲಿಲ್ಲ. ಈಗಿನ ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ ಅವರಿಗೆ ಸಿಎನ್‌ಸಿ ಬೇಡಿಕೆ ಬಗ್ಗೆ ತಿಳುವಳಿಕೆ ಇದ್ದಂತೆ ಕಾಣುತ್ತಿಲ್ಲ. ಹೀಗಾಗಿ ಸುಪ್ರೀಂಕೋರ್ಟ್‌ನಲ್ಲಿ ತಾನೇ ಕೊಡವರ ಬೇಡಿಕೆ ಪರ ವಾದ ಮಂಡಿಸುವೆ ಎಂದು ಸುಬ್ರಮಣಿಯನ್ ಸ್ವಾಮಿ ಭರವಸೆ ನೀಡಿದರು. ಮುಂದಿನ ಕೊಡವ ನ್ಯಾಷನಲ್ ▶ 9ನೇ ಪುಟಕ್ಕೆ



ಪ್ರಧಾನಿ ಬಗ್ಗೆ ಭಿನ್ನಾಭಿಪ್ರಾಯವಿಲ್ಲ, ಅವರ ನಿರ್ಧಾರಗಳ ಬಗ್ಗೆ ಆಕ್ಷೇಪವಿದೆ

ಮಡಿಕೇರಿ,ನ.26– ಪ್ರಧಾನಮಂತ್ರಿ ನರೇಂದ್ರಮೋದಿ ಅವರ ಬಗ್ಗೆ ವೈಯಕ್ತಿಕ ಭಿನ್ನಾಭಿಪ್ರಾಯಗಳಿಲ್ಲ. ಆದರೆ ಪ್ರಧಾನಿಯಾಗಿ ಕೈಗೊಂಡ ಕೆಲವೊಂದು ನಿರ್ಧಾರಗಳ ಬಗ್ಗೆ ಆಕ್ಷೇಪವಿದೆ. ಕೆಲವು ವಿಚಾರಗಳಲ್ಲಿ ದಿಟ್ಟ ಹೆಜ್ಜೆ ಇಡುತ್ತಿಲ್ಲವೆಂದು ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಮಾಜಿ ಕೇಂದ್ರ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ಟೀಕಿಸಿದ್ದಾರೆ.

ಕೆಲವು ವಿಚಾರಗಳ ಬಗ್ಗೆ ಬಿಗಿ ನಿರ್ಧಾರಗಳನ್ನು ಮೋದಿ ಕೈಗೊಂಡಿಲ್ಲ ಎಂಬ ಅಸಮಾಧಾನವಿದೆ. ಹೀಗಿದ್ದರೂ ದೇಶದ ಹಿಂದೂ ಸಂಘಟನೆಗಳ ಕಾರ್ಯಕರ್ತರ ಬೆಂಬಲದಿಂದ ಮುಂದಿನ ಚುನಾವಣೆಯಲ್ಲಿಯೂ ಬಿಜೆಪಿಯೇ ಅಧಿಕಾರಕ್ಕೆ ಬರಲಿದೆ ಎಂದು ಡಾ.ಸುಬ್ರಮಣಿಯನ್ ಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು. ದೇಶದ ಅಧಿಕಾರಸ್ಥರು ▶ 9ನೇ ಪುಟಕ್ಕೆ


ರಾಹುಲ್ ಗಾಂಧಿ ಜೈಲಿಗೆ

ಭಾಷಣ ಮಧ್ಯದಲ್ಲಿ ರಾಜಕೀಯವಾಗಿ ಮಾತನಾಡಿದ ಸುಬ್ರಮಣಿಯನ್ ಸ್ವಾಮಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಸದ್ಯದಲ್ಲಿಯೇ ಜೈಲು ಸೇರಲಿದ್ದಾರೆ ಎಂದರು. ಪ್ರಧಾನಿ ನರೇಂದ್ರ ಮೋದಿ ಅವರು ಚೀನಾದ ವಿರುದ್ಧ ಹೋರಾಡುವ ಎದೆಗಾರಿಕೆ ಹೊಂದಿಲ್ಲ ಎಂದು ಟೀಕಿಸಿದರು.

ಚಿರತೆ ಬಂತು ಚಿರತೆ... ನೀರಾವರಿ, ಅರಣ್ಯ ಇಲಾಖೆ ಅಧಿಕಾರಿಗಳ ಚಿಂತೆ...

ತಿಂಗಳಿಂದ ಕೆಆರ್‌ಎಸ್ ಬೃಂದಾವನ ಬಂದ್

● ಸರ್ಕಾರದ ಬೊಕ್ಕಸಕ್ಕೆ ಕೋಟಿ ನಷ್ಟ, ವ್ಯಾಪಾರಿಗಳ ಬದುಕಿಗೆ ಕಲ್ಲು ಬಿತ್ತು ● ಬೋನಿಟ್ಟು ಚಿರತೆ ಬರಮಾಡಿಕೊಳ್ಳಲು ಕಾದಿರುವ ಅಧಿಕಾರಿ ವರ್ಗ ● ಚಿರತೆ ಹಿಡಿಯುವ ಬದಲು ಕಂಡ ಕಂಡ ಬೀದಿ ನಾಯಿ ಹಿಡಿಯುತ್ತಿರುವ ಅರಣ್ಯ ಅಧಿಕಾರಿಗಳು; ಸಾರ್ವಜನಿಕರ ಆಕ್ರೋಶ ● ಪರಿಣಾಮಕಾರಿ ಕ್ರಮ ಕೈಗೊಳ್ಳುವಲ್ಲಿ ಕಾವೇರಿ ನೀರಾವರಿ ನಿಗಮ, ಅರಣ್ಯ ಇಲಾಖೆ ಅಧಿಕಾರಿಗಳ ವಿಫಲ



ಶ್ರೀರಂಗಪಟ್ಟಣ, ನ. 26 (ವಿನಯ್ ಕಾರೇಕುರ)– ಅರಮನೆ ನಗರಿ ಮೈಸೂರಿಗೆ ಭೇಟಿ ನೀಡುವ ದೇಶ–ವಿದೇಶದ ಪ್ರವಾಸಿಗರು ಶ್ರೀರಂಗಪಟ್ಟಣ ತಾಲೂಕಿನಲ್ಲಿರುವ ಕೆಆರ್‌ಎಸ್ ಬೃಂದಾವನಕ್ಕೆ ಭೇಟಿ ನೀಡುವುದು ಸರ್ವೇ ಸಾಮಾನ್ಯ. ವಿಪರ್ಯಾಸವೆಂದರೆ ಚಿರತೆ ಪ್ರತ್ಯಕ್ಷವಾದ ಹಿನ್ನೆಲೆಯಲ್ಲಿ ಕಳೆದ ಒಂದು ತಿಂಗಳಿನಿಂದಲೂ ಕೆಆರ್‌ಎಸ್ ಬೃಂದಾವನ ಗಾರ್ಡನ್‌ಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ.

ಹೀಗಾಗಿ ಕೆಆರ್‌ಎಸ್‌ಗೆ ಪ್ರತಿನಿತ್ಯ ಆಗಮಿಸುತ್ತಿರುವ ಸಾವಿರಾರು ಪ್ರವಾಸಿಗರು ನಿರಾಸೆಯಿಂದ ಹಿಂತಿರುಗುವಂತಾಗಿದೆ. ಕಾವೇರಿ ನೀರಾವರಿ ನಿಗಮ ನಿರ್ವಹಣೆಯಲ್ಲಿರುವ ಕೆಆರ್‌ಎಸ್‌ನಲ್ಲಿ ಪ್ರತ್ಯಕ್ಷವಾದ ಚಿರತೆಯನ್ನು ಸೆರೆ ಹಿಡಿಯಲು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಾಗಲೀ, ಅರಣ್ಯ ಇಲಾಖೆ ಅಧಿಕಾರಿಗಳಾಗಲೀ ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ ಎಂಬ ಆರೋಪಗಳು ಕೇಳಿಬರುತ್ತಿವೆ. ಕೆಆರ್‌ಎಸ್‌ನ ಕೆಲವೆಡೆ ಬೋನ್ ಇಟ್ಟಿರುವುದನ್ನು ಹೊರತುಪಡಿಸಿದರೆ ಚಿರತೆ ಸೆರೆ ಹಿಡಿಯಲು ಬೇರೆ ಯಾವುದೇ ▶ 7ನೇ ಪುಟಕ್ಕೆ

ಬೃಂದಾವನದಲ್ಲೇ 15 ಅಡಿ ಎತ್ತರದ ಬೇಲಿ ನಿರ್ಮಾಣ ಐಡಿಯಾ...

ಬೃಂದಾವನ ಗಾರ್ಡನ್‌ಗೆ ಪ್ರವಾಸಿಗರ ಪ್ರವೇಶ ನಿರ್ಬಂಧದಿಂದಾಗಿ ಪ್ರವಾಸಿಗರ ವ್ಯಾಪಾರವನ್ನೇ ನಂಬಿಕೊಂಡಿರುವ ನೂರಾರು ಮಂದಿ ಪರದಾಡುವಂತಾಗಿದೆ. ಒಂದು ತಿಂಗಳಿಗೂ ಹೆಚ್ಚು ಕಾಲದಿಂದ ಬೃಂದಾವನ ಗಾರ್ಡನ್‌ಗೆ ಪ್ರವೇಶ ನಿರ್ಬಂಧಿಸಿರುವುದರಿಂದ ವ್ಯಾಪಾರವಿಲ್ಲದೆ ಕೈಕಟ್ಟಿ ಕುಳಿತುಕೊಳ್ಳುವಂತಾಗಿದೆ. ಜೀವನೋಪಾಯಕ್ಕಾಗಿ ಇದನ್ನೇ ನಂಬಿಕೊಂಡಿರುವ ನಾವು, ಸಾಲಕ್ಕೆ ಸಿಲುಕುವಂತಾಗಿದೆ ಎಂದು ವ್ಯಾಪಾರಸ್ಥರು ತಮ್ಮ ನೋವನ್ನು ತೋಡಿಕೊಂಡಿದ್ದಾರೆ.

ಮತ್ತೊಂದೆಡೆ ಬೃಂದಾವನ ಸುತ್ತ ಅರಣ್ಯ ಪ್ರದೇಶಕ್ಕೆ ಬೇಲಿ ನಿರ್ಮಿಸಿದರೆ ಚಿರತೆ ಅದನ್ನು ದಾಟಿ ಬೃಂದಾ ವನ ಗಾರ್ಡನ್‌ಗೆ ಬರಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿರುವ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು, ಬೃಂದಾವನ ಸುತ್ತ 3ರಿಂದ 4 ಕಿಲೋಮೀಟರ್ ಉದ್ದಕ್ಕೆ 15 ಅಡಿ ಎತ್ತರದ ಬೇಲಿ ನಿರ್ಮಿಸಬೇಕೆಂಬ ಪ್ರಸ್ತಾವನೆಯನ್ನು ತಮ್ಮ ಹಿರಿಯ ಅಧಿಕಾರಿಗಳು ಹಾಗೂ ಸರ್ಕಾರಕ್ಕೆ ಸಲ್ಲಿಸಿದ್ದಾರೆ ಎಂದು ಹೆಸರೇಳಲು ಇಚ್ಛಿಸದ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಆದರೆ, ಚಿರತೆ 15 ಅಡಿ ಎತ್ತರದ ಬೇಲಿಯನ್ನು ಅನಾಯಾಸವಾಗಿ ಹಾರಬಲ್ಲದು ಎಂದು ವನ್ಯಜೀವಿ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಜಗದ್ವಿಖ್ಯಾತ ಬೃಂದಾವನ 'ಘನತೆಗೆ ಧಕ್ಕೆ'!



ಶ್ರೀರಂಗಪಟ್ಟಣ, ನ 26– ಕೆಆರ್‌ಎಸ್ ಬೃಂದಾವನ ಗಾರ್ಡನ್‌ನಲ್ಲಿ ಕಾಣಿಸಿಕೊಂಡಿರುವ ಚಿರತೆ ಸೆರೆ ಹಿಡಿಯುವ ವಿಚಾರದಲ್ಲಿ ಅಧಿಕಾರಿ ವರ್ಗ ಹಾಗೂ ಸರ್ಕಾರ ತೀವ್ರ ನಿರ್ಲಕ್ಷ್ಯತೆಯಿಂದಾಗಿ ಪ್ರವಾಸಿಗರಿಗೆ ನಿರಾಸೆಯಾಗುತ್ತಿರುವುದರ ಜೊತೆಗೆ ಸರ್ಕಾರದ ಬೊಕ್ಕಸಕ್ಕೂ ಭಾರೀ ನಷ್ಟ ಉಂಟಾಗುತ್ತಿದೆ ಎಂದು ಶ್ರೀರಂಗಪಟ್ಟಣ ಶಾಸಕ ರವೀಂದ್ರ ಶ್ರೀಕಂಠಯ್ಯ ಆರೋಪಿಸಿದ್ದಾರೆ. ಸುದ್ದಿಗಾರರ ಜೊತೆ ಮಾತನಾಡಿದ ಅವರು, ಇದೇ ಮೊದಲ ಬಾರಿಗೆ ಸುದೀರ್ಘ ಅವಧಿಗೆ ಕೆಆರ್‌ಎಸ್ ಬೃಂದಾವನಕ್ಕೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ. ಪ್ರವಾಸಿಗರಲ್ಲೂ ಕೂಡ ಒಂದು ರೀತಿಯ ಭಯದ ವಾತಾವರಣವನ್ನೂ ಸೃಷ್ಟಿಸಲಾಗುತ್ತಿದೆ ಇದೇ ರೀತಿ ಕೆಆರ್‌ಎಸ್‌ಗೆ ನಿರ್ಬಂಧ ಮುಂದುವರೆದರೆ ಕೆಆರ್‌ಎಸ್‌ನ ಪ್ರಸಿದ್ಧಿಗೆ ಧಕ್ಕೆ ಉಂಟಾಗುತ್ತದೆ. ಅದನ್ನು ಸರಿಪಡಿಸುವುದು ಕಷ್ಟವಾಗುತ್ತದೆ. ಸರ್ಕಾರಕ್ಕೆ ಇದರ ಅರಿವು ಇಲ್ಲದಂತೆ ಕಾಣುತ್ತದೆ. ಕೆಆರ್‌ಎಸ್‌ನ ಈ ಸಮಸ್ಯೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ ಎಂದರು. ಕಳೆದ 35 ದಿನಗಳಿಂದಲೂ ಬೃಂದಾವನದ ಬಾಗಿಲು ಬಂದ್ ಮಾಡಿರುವ ವಿಚಾರ ಸಾಮಾಜಿಕ ಜಾಲ ತಾಣದಲ್ಲಿ ಸದ್ದು ಮಾಡುತ್ತಿದೆ. ▶ 7ನೇ ಪುಟಕ್ಕೆ

ಮತದಾರರ ಮಾಹಿತಿ ಕಳವು ಪ್ರಕರಣ

ಕೆಲವು ಸಚಿವರು, ರಾಜಕಾರಣಿಗಳಿಗೆ ಕಂಟಕ!

ಬೆಂಗಳೂರು, ನ.26(ಕೆಎಂಶಿ)– ಮತದಾರರ ಮಾಹಿತಿ ಕಳವು ಪ್ರಕರಣ ಕೆಲವು ಸಚಿವರು ಸೇರಿದಂತೆ ಅನೇಕ ರಾಜಕಾರಣಿಗಳಿಗೆ ಕಂಟಕವಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಚುನಾವಣಾ ಆಯೋಗ ಬಿಗಿ ಕ್ರಮಕ್ಕೆ ಮುಂದಾಗಿರುವುದು ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ರಾಜ್ಯ ಸರ್ಕಾರದ ಗಮನಕ್ಕೂ ಬಾರದೆ, ಇಬ್ಬರು ಐಎಎಸ್ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ತೆಗೆದುಕೊಂಡಿರುವ ಆಯೋಗ, ಇದೀಗ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಅದರ ಹಿಂದಿನ ಕೈಗಳಿಗೆ ಬಿಸಿ ಮುಟ್ಟಿಸಲಿದೆ. ಇತ್ತೀಚೆಗೆ ಸುಪ್ರೀಂ ಕೋರ್ಟ್ ಕೇಂದ್ರ ಚುನಾವಣಾ ಆಯೋಗದ ಕಾರ್ಯವೈಖರಿ ಮತ್ತು ಅಧಿಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಚಾಟಿ ಬೀಸಿರುವ ▶ 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಆತ : ಕೆಲಸ ಯಾಕೆ ಬಿಟ್ಟು ಬಂದೆ?
ಈತ : ತಲೆ ನೋವು ವಿಪರೀತವಾಯ್ತು
ಆತ : ಔಷಧಿ ತಗೋಬಹುದಿತ್ತು ನೀನು
ಈತ : ನನಗಲ್ಲ, ನನ್ನಿಂದಾಗಿ ನಮ್ಮ ಬಾಸ್‌ಗೆ!

ಮೈಸೂರು ಮಿತ್ರ

ಭಾನುವಾರ, 27 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನಿಜವಾದ ನಂಬಿಕೆ, ನಿಜವಾದ ಜ್ಞಾನ, ನಿಜವಾದ ಆಚರಣೆಯೇ ನಿಜವಾದ ಮುಕ್ತಿ ಮಾರ್ಗ –ಭಗವಾನ್ ಮಹಾವೀರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅನ್ನ ಹಾಕಿದ ಮನೆ ಹಾಳಲ್ಲ, ಗೊಬ್ಬರ ಹಾಕಿದ ಹೊಲ ಹಾಳಲ್ಲ

ನಿಮ್ಮ ಪತ್ರಗಳು

ಚಾ.ನಗರ ತಾಲೂಕು ಕಚೇರಿ ಶೌಚಾಲಯದ ದುಸ್ಥಿತಿ

ಮಾನ್ಯರೆ,




ಮಹಾತ್ಮ ಗಾಂಧೀಜಿಯವರು ಈ ದೇಶದ ಹಳ್ಳಿ, ಪಟ್ಟಣ, ನಗರಗಳನ್ನು, ಪ್ರತಿಯೊಂದು ವಿಚಾರದಲ್ಲೂ ಸ್ವಚ್ಛವಾಗಿಡಲು ಬಯಸಿದ್ದರು. ರಸ್ತೆ, ಕಚೇರಿಗಳ ಹೊರಗೆ–ಒಳಗೆ ಎಲ್ಲವೂ ಕೂಡ. ಆದರೆ ಇದಕ್ಕೆ ವಿರುದ್ಧವಾಗಿ ಕಂಡಿದ್ದು ಚಾಮರಾಜನಗರದ ತಾಲೂಕು ಕಚೇರಿಯ ಸಂಕೀರ್ಣದಲ್ಲಿರುವ ಉಪನೋಂದಣಾಧಿಕಾರಿ ಕಚೇರಿ ಎದುರು ಇರುವ ಸಾರ್ವಜನಿಕ ಶೌಚಾಲಯದ ಸ್ಥಿತಿ.

ಇಲ್ಲಿಗೆ ಸುತ್ತಮುತ್ತಲ ಗ್ರಾಮಗಳಿಂದ ದಿನಂಪ್ರತಿ ಸಾವಿರಾರು ಜನರು ಕಚೇರಿ ಕೆಲಸಗಳಿಗೆ ಬಂದು ಹೋಗುತ್ತಾರೆ. ಇಲ್ಲಿಗೆ ಬಂದಾಗ ಜನರು ಮೂತ್ರ ವಿಸರ್ಜನೆಗೆ ಹೋಗಬೇಕಾದಾಗ ಶೌಚಾಲಯದ ಕಡೆ ಮುಖ ಮಾಡಿ ನಿಲ್ಲಲು ಕಷ್ಟವಾಗಿದೆ. ಕಾರಣ ಶೌಚಾಲಯದ ಬಾಗಿಲು ಮುಚ್ಚಿದೆ; ನೀರಿನ ವ್ಯವಸ್ಥೆ ಇಲ್ಲ, ಗಬ್ಬು ವಾಸನೆ. ಅಲ್ಲಿ ತಮ್ಮ ಕೆಲಸ ಕಾರ್ಯಗಳು ಮುಗಿಯುವ ತನಕ ಗುಂಪು ಗುಂಪಾಗಿ ನಿಂತ ಜನ ಮೂಗು ಮುಚ್ಚಿಕೊಂಡು ನಿಲ್ಲಬೇಕಾದ ಪರಿಸ್ಥಿತಿ. ಜನರೆಲ್ಲಾ ತಾಲೂಕು ಕಚೇರಿಯ ಸುತ್ತಲಿನ ಕಾಂಪೌಂಡಿನ ಮರೆಯನ್ನೇ ಆಶ್ರಯಿಸಬೇಕಾಗಿದೆ. ಅಧಿಕಾರಿಗಳಿಗೆ ಅವರವರ ಕೊಠಡಿಗಳಿಗೆ ಹೊಂದಿಕೊಂಡಂತೆ ಶೌಚಾಲಯಗಳಿವೆ. ಸ್ವಚ್ಛ ಮಾಡಲು ಕಾರ್ಮಿಕರಿದ್ದಾರೆ. ಆದರೆ ಕಚೇರಿಯ ಹೊರ ಆವರಣದಲ್ಲಿರುವ ಸಾರ್ವಜನಿಕರ ಸ್ಥಿತಿಯನ್ನು ಕೇಳುವವರಾರು? ಈ ಅವ್ಯವಸ್ಥೆಯನ್ನು ಸರಿಪಡಿಸುವ ಹೊಣೆ ತಹಶೀಲ್ದಾರರವರದೆ? ನೋಂದಣಾಧಿಕಾರಿಯವರದೆ? ನಗರಸಭೆಯವರದೆ?

ಯಾರದೇ ಹೊಣೆ ಇರಲಿ ಮೊದಲು ಶೌಚಾಲಯಕ್ಕೆ ನೀರಿನ ಸಂಪರ್ಕ ಕಲ್ಪಿಸಿ, ಅದನ್ನು ನೋಡಿಕೊಳ್ಳಲು ವ್ಯಕ್ತಿಯೊಬ್ಬನನ್ನು ನೇಮಿಸಬೇಕು. ಈ ಶೌಚಾಲಯವನ್ನು ಸಾರ್ವಜನಿಕರು ಬಳಸುವಂತಾದರೆ–ಜನಸಾಮಾನ್ಯರ ಆರೋಗ್ಯ ಹದಗೆಡದಂತೆ ಕಾಯ್ದುಕೊಳ್ಳುವುದರ ಜೊತೆಗೆ ಸ್ವಚ್ಛ ಭಾರತ ಆಂದೋಲನಕ್ಕೆ ಸಹಕರಿಸಿದಂತಾಗುತ್ತದೆ ಅಲ್ಲವೆ?

–ಎಂ. ಎನ್. ಸ್ವಾಮಿ, ಅಮ್ಮನಪುರ, ಚಾ.ನಗರ ತಾ.

ಬನುಮಯ್ಯ ಕಾಲೇಜು ಹಿಂಭಾಗದ ರಸ್ತೆಯ ದುರವಸ್ಥೆ



ಮಾನ್ಯರೆ,

ಇದು ನಮ್ಮ ಮೈಸೂರು ಮಹಾ ನಗರ ಪಾಲಿಕೆಯ ಹಿಂದೆ ಇರುವ ಬನುಮಯ್ಯ ರಸ್ತೆ. ಈ ರಸ್ತೆ ಹಳ್ಳಕೊಳ್ಳದಿಂದ ಕೂಡಿದ್ದು, ವಾಹನ ಸವಾರರು ಓಡಾಡಲು ತುಂಬಾ ತೊಂದರೆಯಾಗಿದೆ. ನಮ್ಮ ಪಾಲಿಕೆಗೆ ನಗರದ ಜನರ ಕೂಗು ಕೇಳಿಸುವುದಿಲ್ಲ, ಹಾಗೂ ಪಾಲಿಕೆಗೆ ಕಣ್ಣು ಕಾಣಿಸುವುದಿಲ್ಲ. ಅದು ಇರುವುದೇ ಪಾಲಿಕೆಯ ಹಿಂಭಾಗ. ಏಕೆಂದರೆ ಆ ರಸ್ತೆ ಇರುವುದು ಕೇವಲ 250 ಮೀಟರ್ ಉದ್ದ. ಇದರಿಂದ ಇಂಜಿನಿಯರ್‌ಗಾಗಲಿ, ಗುತ್ತಿದಾರರಿಗಾಗಲಿ ಕಮಾಯಿ ಕಡಿಮೆ ಎಂಬ ಧೋರಣೆ ಇರಬಹುದು. ಒಟ್ಟಿನಲ್ಲಿ ಹಣವೇ ಮುಖ್ಯ, ಯಾಕೆಂದ್ರೆ ಗಾದೆನೇ ಇದೆಯಲ್ಲ. "ಹಣ ಅಂದರೆ ಹೆಣವೂ ಬಾಯಿ ಬಿಡುತ್ತದೆ" ಅಂತ. ಕೂಡಲೇ ಜನಪ್ರತಿನಿಧಿಗಳು, ಅಧಿಕಾರಿಗಳು ಇತ್ತ ಗಮನಹರಿಸಿ ರಸ್ತೆ ದುರಸ್ತಿ ಪಡಿಸಿ ವಾಹನ ಸವಾರರ ಸುಗಮ ಓಡಾಟಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ವಿ. ಕೇಶವಮೂರ್ತಿ, ಜ್ಯೋತಿಷ್ಯ ವಿದ್ವಾಂಸ

ಆನ್‌ಲೈನ್‌ನಲ್ಲಿ ನೀರಿನ ಬಿಲ್ಲು ಪಾವತಿಗೆ ವ್ಯವಸ್ಥೆ ಮಾಡಿ

ಮಾನ್ಯರೆ,

ಮೈಸೂರು ನಗರದಲ್ಲಿ ನೀರಿನ ಬಿಲ್ಲನ್ನು ಆನ್‌ಲೈನ್‌ನಲ್ಲಿ ಪಾವತಿ ಮಾಡುವ ಅವಕಾಶವು ಜೂನ್ 2022ರ ವರೆಗೆ ಇದ್ದು, ನಂತರ ಆನ್‌ಲೈನ್‌ನಲ್ಲಿ ಪಾವತಿ ಮಾಡಲು ಆಗುತ್ತಿಲ್ಲ. ಆ ಬಗ್ಗೆ ಕಾರ್ಪೋರೇಷನ್‌ಗೆ ಪತ್ರ ಬರೆದಿದ್ದೆ. ಮಾಮೂಲಿನಂತೆ ಕ್ರಮವೂ ಇಲ್ಲ, ಉತ್ತರವೂ ಇಲ್ಲ. ಇದರ ಬಗ್ಗೆ ಪತ್ರಿಕೆಗಳಲ್ಲಿ ಹಲವಾರು ಪತ್ರಗಳು ಪ್ರಕಟವಾಗಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ತಮ್ಮ ಹಕ್ಕುಗಳಿಗೆ ಹೋರಾಡುವ ಅಧಿಕಾರಿಗಳು ಜನಸ್ನೇಹಿ ಕ್ರಮ ತೆಗೆದುಕೊಳ್ಳಲು ನಾಚಿಕೊಳ್ಳುತ್ತಾರೆ. ಪ್ರತಿಯೊಬ್ಬರೂ ನೀರಿನ ಬಿಲ್ ಕಟ್ಟಿದರೆ ಕಾರ್ಪೋರೇಷನ್‌ಗೆ ಆದಾಯವು ಹೆಚ್ಚಾಗುತ್ತದೆ. ನಡೆಯಲಾರದ ಹಿರಿಯ ನಾಗರಿಕರಿಗೂ ಅನುಕೂಲವಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಜನಪ್ರತಿನಿಧಿಗಳು, ಅಧಿಕಾರಿಗಳು ಗಮನಹರಿಸಿ ಆನ್‌ಲೈನ್ ಮೂಲಕ ನಲ್ಲಿ ನೀರು ಬಿಲ್ಲು ಪಾವತಿಸುವ ವ್ಯವಸ್ಥೆ ಮಾಡಬೇಕೆಂದು ಮನವಿ.

–ಅಕ್ಕಿಹೆಬ್ಬಾಳ್ ವೆಂಕಟೇಶ್, ಕುವೆಂಪುನಗರ

ವಿದ್ಯಾರ್ಥಿಗಳಿಗೆ ಶೀಘ್ರ ಬಸ್ ಪಾಸ್ ವಿತರಿಸಿ

ಮಾನ್ಯರೆ,

ವಿದ್ಯಾರ್ಥಿಗಳು ಬಸ್ ಪಾಸು ಪಡೆಯಲು ವಿಳಂಬವಾಗುತ್ತಿರುವುದು ನಿರಂತರ ಪ್ರಕ್ರಿಯೆಯಾಗಿ ಪರಿಣಮಿಸಿದೆ. ಬಡ ವಿದ್ಯಾರ್ಥಿಗಳು ಬಸ್ ಪಾಸು ಪಡೆಯಲು ಪ್ರತಿ ವರ್ಷವೂ ತುಂಬಾ ಪ್ರಯಾಸ ಪಡುವುದು ಸರ್ವೇ ಸಾಮಾನ್ಯವಾಗಿದೆ. ಕಾಲೇಜಿನ ಆಡಳಿತ ಮಂಡಳಿಗೆ ಈ ವಿಷಯ ತಿಳಿದಿದ್ದರೂ ಜಾಣ ಕಿವುಡರಂತೆ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಣೆ ಮಾಡದೆ ಕಾಲ ದೂಡುತ್ತಿರುವುದು ವಿಪರ್ಯಾಸ. ಮೈಸೂರಿನ ಎಲ್ಲಾ ಕಾಲೇಜಿನ ಪ್ರಾಂಶುಪಾಲರು ಅತಿ ಶೀಘ್ರವಾಗಿ ಇತ್ತ ಕಡೆ ಗಮನ ಹರಿಸಿ ಹಳ್ಳಿಗಾಡಿನ ಬಡ ವಿದ್ಯಾರ್ಥಿಗಳಿಗೆ ಬಸ್ ಪಾಸು ಕೊಡಿಸುವುದರ ಮೂಲಕ ಅವರ ವಿದ್ಯಾಭ್ಯಾಸಕ್ಕೆ ನೆರವಾಗಬೇಕು.

–ಬೆಸಗರಹಳ್ಳಿ ರವಿ ಪ್ರಸಾದ್, ಕೆ ಸಿ ನಗರ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಏನಾದರೂ ಆಗಲಿ ಸಂಬಂಧ ಉಳಿಸಿಕೊಳ್ಳಿ !!

ನಮಗೆ ನಾವು ಹೇಗಿರಬೇಕು ಎಂಬ ಬಗ್ಗೆ ಕೆಲವೊಮ್ಮೆ ಗೊಂದಲವಾಗುತ್ತದೆ. ಅನೇಕ ಸಲ ನನ್ನ ಪಾಡಿಗೆ ನಾನಿದ್ದರೂ ಇದೇಕೆ ಹೀಗೆ ಪರಿಸ್ಥಿತಿ ನನ್ನ ವಿರುದ್ಧವಾಗುತ್ತಿದೆ? ಎನ್ನಿಸುತ್ತದೆ. ನಾನು ಸ್ನೇಹಪರ ಜೀವಿ, ಆದರೂ ನನ್ನನ್ನು ಕೆಲವರು ದ್ವೇಷಿಸುತ್ತಾರೆ. ಇದೇಕೆ ಹೀಗೆ? ಹಾಗಾದರೆ ನಾನು ಹೇಗಿರಬೇಕು? ಎಂಬ ಬಗ್ಗೆ ನಮ್ಮ ಮುಂದೆ ಕೆಲವು ಪ್ರಶ್ನೆಗಳು ಮೂಡುತ್ತವೆ. ಕೆಲವು ಸಲ ಅದಕ್ಕೆ ಪರಿಹಾರವೂ ದೊರಕದೆ ಮನಸ್ಸು ಗೊಂದಲದ ಗೂಡಾಗುತ್ತದೆ. ಇದಕ್ಕೆ ಕಾರಣ ಏನು ಎಂಬುದನ್ನು ನಾವೇ ಕಂಡುಕೊಳ್ಳಬೇಕು. ಆಗ ನಮಗೆ ಅರ್ಥವಾಗುತ್ತದೆ. ನಮಗೆ ಕೆಲವರೊಂದಿಗೆ ಸ್ನೇಹ ಸಂಬಂಧಗಳು ತಾವಾಗೇ ಬೆಳೆಯುತ್ತದೆ. ಅದೂ ಕೆಲವೇ ದಿನಗಳಲ್ಲಿ!! ಅದು ಎಂತಹ ಬಾಂಧವ್ಯಕ್ಕೆ ತಿರುಗುತ್ತದೆ ಎಂದರೆ, ಅವರನ್ನು ಬಿಟ್ಟು ನಾನು ಇರುವುದಕ್ಕೇ ಸಾಧ್ಯವಿಲ್ಲ ಎನ್ನುವಷ್ಟು, ಅವರೊಡನೆ ಪ್ರತಿದಿನ ಮಾತನಾಡಬೇಕು, ಎರಡು ಮೂರು ದಿನಕ್ಕೆ ಒಮ್ಮೆಯಾದರೂ ಭೇಟಿಯಾಗಬೇಕು, ಅವರೊಡನೆ ಎಲ್ಲವನ್ನೂ ಹಂಚಿಕೊಳ್ಳಬೇಕು, ಯಾವುದೇ ಕಾರಣಕ್ಕೂ ಅವರೊಂದಿಗಿನ ಸ್ನೇಹವನ್ನು ಕಳೆದುಕೊಳ್ಳಬಾರದು ಎಂದೆಲ್ಲಾ ಅನಿಸುವುದು, ವಿನಾ ಕಾರಣ ಇದ್ದಕ್ಕಿದ್ದಂತೆಯೇ ಸ್ತಬ್ಧವಾಗಿಬಿಡುತ್ತದೆ. ತಪ್ಪು ಯಾರಿಂದಾಯಿತು? ಎಂಬ ವಿವೇಚನೆಯೇ ಇಲ್ಲದೆ ಸಂಬಂಧ ಕಡಿದುಹೋಗುತ್ತದೆ ಅಥವಾ ಕಡಿದುಹೋದಂತೆ ಭಾಸವಾಗುತ್ತದೆ. ಇದು ಬೇಕೆಂದು ಮಾಡಿಕೊಂಡ ತಪ್ಪು ಎಂದಲ್ಲಾ. ಆದರೆ ಸಂಬಂಧಕ್ಕೆ ಧಕ್ಕೆಯಾಗಿರುತ್ತದೆ.

ಬಹಳಷ್ಟು ಜನರು 'ಬೇರೊಬ್ಬರು ತನ್ನದೇ ಸರಿ' ಎಂದು ದೃಢವಾಗಿ ಹೇಳುವವರನ್ನು ಇಷ್ಟಪಡುವುದಿಲ್ಲ. 'ನಿನ್ನದು ತಪ್ಪು, ನನ್ನದೇ ಸರಿ' ಎನ್ನುವ ಭಾವನೆ ಹಾಗೂ ಅದನ್ನು ಸಮರ್ಥಿಸಿಕೊಳ್ಳುವಂತಹ ಆಲೋಚನೆ ನಮ್ಮಲ್ಲಿ ಸೃಷ್ಟಿಯಾಗುತ್ತದೆ. ಹಾಗೆಂದ ಕೂಡಲೇ ನಮಗೆ ಬೇರೆ ಯಾವುದೇ ಅಭಿಪ್ರಾಯಗಳು ಇರುವುದು ತಪ್ಪು ಎಂದಲ್ಲ. ಈ ಪ್ರೇಮ ವಿವಾಹಗಳು ಮುಂದೆ ಮುರಿದು ಬೀಳುವುದನ್ನು ಕಂಡಾಗ ಇಂತಹ ಆಲೋಚನೆ ಮನಸ್ಸಿಗೆ ಬರುತ್ತದೆ. ಮದುವೆಗೆ ಮುಂಚೆ ಒಬ್ಬರನ್ನೊಬ್ಬರು ಬಹಳ ಇಷ್ಟಪಟ್ಟಿರುವುದಾಗಿ, ಅವರಿಲ್ಲದಿದ್ದರೆ ಜೀವನವೇ ಇಲ್ಲ ಎಂಬಂತೆ ಇರುತ್ತಾರೆ. ಕೊನೆಯ ಹಂತವಾಗಿ ಅವರಿಲ್ಲದಿದ್ದರೆ ನಾನು ಬದುಕುವುದಿಲ್ಲ ಎಂದೋ, ಅವರನ್ನಲ್ಲದಿದ್ದರೆ ಇನ್ನಾರನ್ನೂ ಮದುವೆಯಾಗುವುದಿಲ್ಲ ಎಂದೋ ನಿರ್ಧಾರಕ್ಕೆ ಬಂದಿರುತ್ತಾರೆ. ಅದರಂತೆ ಮದುವೆಯೂ ಆಗುತ್ತದೆ. ಆದರೆ ಕೆಲವೇ ದಿನಗಳಲ್ಲಿ ಅವರ ನಡುವೆ ಭಿನ್ನಾಭಿಪ್ರಾಯಗಳು ಕಾಣಿಸಲಾರಂಭಿಸುತ್ತದೆ. ಅವರು ಒಬ್ಬರನ್ನೊಬ್ಬರು ಇಷ್ಟಪಡುವುದಿಲ್ಲ. ಪರಸ್ಪರ ದ್ವೇಷಿಸುವ ಹಂತಕ್ಕೆ ಹೋಗುತ್ತಾರೆ. ಅದು ವಿಚ್ಛೇದನದವರೆಗೂ ಮುಂದುವರೆಯುತ್ತದೆ. ವಿಚ್ಛೇದನವಾದರೂ ಇಬ್ಬರೂ ನೆಮ್ಮದಿಯಾಗಿರಲು ಸಾಧ್ಯವಾಗುವುದಿಲ್ಲ. ಹಾಗಿದ್ದರೆ ಮದುವೆಗೆ ಮೊದಲು ಅವರು ಪರಸ್ಪರ ಏನನ್ನು ಅರಿತುಕೊಂಡಿದ್ದರು? ಎಂದು ಕೇಳಬೇಕಾಗುತ್ತದೆ. ನಮಗೆ ಪ್ರೇಮವೇ ಬೇರೆ, ಕಾಮವೇ ಬೇರೆ ಎಂಬುದು ತಿಳಿದಿರಬೇಕು. ಕಾಮವನ್ನೇ ಪ್ರೇಮ ಎಂದು ತಿಳಿದಾಗ ಇಂತಹ ಸಂದಿಗ್ಧತೆ ಉಂಟಾಗುತ್ತದೆ.

ವ್ಯಕ್ತಿವ್ಯಕ್ತಿಗಳ ನಡುವೆ ಸಂಬಂಧ ಏರ್ಪಡುವುದನ್ನು ಸುಯೋಗ ಎಂದು ಕರೆಯಬೇಕು. ನಾವು ಎಲ್ಲರೊಡನೆಯೂ ಒಂದೇ ರೀತಿಯಾದಂತಹ ಸ್ನೇಹವನ್ನು ಹೊಂದಲಾಗುವುದಿಲ್ಲ. ಹಾಗೆ ನೋಡಿದರೆ ಉತ್ತಮ ಸ್ನೇಹವು ಕುಟುಂಬದ ಸಂಬಂಧಗಳಿಗಿಂತ ಹೆಚ್ಚಿನದ್ದಾಗಿರುತ್ತದೆ. ಮನೆಯವರೊಡನೆ ಹಂಚಿಕೊಳ್ಳಲಾಗದ ವಿಷಯವನ್ನು ಸ್ನೇಹಿತರೊಡನೆ ಹಂಚಿಕೊಳ್ಳುತ್ತೇವೆ. ಆದ್ದರಿಂದಲೇ "ನನಗೂ ಒಬ್ಬ ಗೆಳೆಯ ಬೇಕು" ಎಂದು ಮನಸ್ಸು ಹಂಬಲಿಸುತ್ತದೆ. ನಮ್ಮ ಮನೋಭಾವಕ್ಕೆ ಸರಿಯಾದ, ನಮ್ಮ ಭಾವನೆಗಳಿಗೆ ಸ್ಪಂದಿಸುವ ವ್ಯಕ್ತಿಗಳು ದೊರೆತಾಗ ಸಾಮಾನ್ಯವಾಗಿ ಸ್ನೇಹ ಏರ್ಪಡುತ್ತದೆ. ಅದನ್ನು ಉಳಿಸಿಕೊಳ್ಳಬೇಕು. ಇಂತಹ ದಟ್ಟವಾದ ಸ್ನೇಹದಲ್ಲಿ ಕಂಡುಬರುವ ಅಪಸ್ವರವನ್ನು ಅಲ್ಲಲ್ಲೇ ಚಿವುಟಬೇಕು. ಇಲ್ಲದಿದ್ದಲ್ಲಿ ಕಷ್ಟಪಟ್ಟು ಬೆಳೆಸಿಕೊಂಡ ಸ್ನೇಹ ನಿರರ್ಥಕವಾಗಿಬಿಡುತ್ತದೆ. ಇದರ ಮೂಲ ಎಂದರೆ ನಮ್ಮ ಮನೋಭಾವ. ನಮಗೆ ಸ್ನೇಹ ಬೇಕು ಎಂದಾದಾಗ ಕಂಡುಬರುವ ಸಣ್ಣಪುಟ್ಟ ಭಿನ್ನಾಭಿಪ್ರಾಯವನ್ನು ಗೌಣವಾಗಿಸಿಕೊಳ್ಳಬೇಕು. ಅಲ್ಲದೇ ಪರಸ್ಪರ ಕುಳಿತು ಮಾತನಾಡುವುದರಿಂದ ಎಂತಹುದೇ ಸಮಸ್ಯೆ ಬಗೆಹರಿಯುತ್ತದೆ. ದೇಶ ದೇಶಗಳ ನಡುವೆ ಯುದ್ಧ ಏರ್ಪಡುವ ಸಮಯದಲ್ಲೂ ಈ ರೀತಿಯ ಮಾತುಕತೆ ಯುದ್ಧವನ್ನು ತಡೆಗಟ್ಟುತ್ತದೆ. ಆದರೆ ನಮ್ಮಿಬ್ಬರ ಸ್ನೇಹ ಅಂತಹ ಯುದ್ಧದ ಸನ್ನಿವೇಶ ಉಂಟುಮಾಡದಿರುವಾಗ, ಮಾತುಕತೆ ಮಾಡಿ ಏಕೆ ಪರಿಹರಿಸಿಕೊಳ್ಳಬಾರದು? ಎಂದು ಯೋಚಿಸಬೇಕು.



> “ಪರಸ್ಪರ ಕುಳಿತು ಮಾತನಾಡುವುದರಿಂದ ಎಂತಹುದೇ ಸಮಸ್ಯೆ ಬಗೆಹರಿಯುತ್ತದೆ. ದೇಶ ದೇಶಗಳ ನಡುವೆ ಯುದ್ಧ ಏರ್ಪಡುವ ಸಮಯದಲ್ಲೂ ಈ ರೀತಿಯ ಮಾತುಕತೆ ಯುದ್ಧವನ್ನು ತಡೆಗಟ್ಟುತ್ತದೆ. ಆದರೆ ನಮ್ಮಿಬ್ಬರ ಸ್ನೇಹ ಅಂತಹ ಯುದ್ಧದ ಸನ್ನಿವೇಶ ಉಂಟುಮಾಡದಿರುವಾಗ, ಮಾತುಕತೆ ಮಾಡಿ ಏಕೆ ಪರಿಹರಿಸಿಕೊಳ್ಳಬಾರದು?

ನಮಗೆ ಅಗತ್ಯವಾಗಿ ಬೇಕಾಗಿರುವುದು ಮಾನವೀಯತೆಯೇ ಹೊರತು ನಮ್ಮ ವೈಯಕ್ತಿಕ ಹಿತಾಸಕ್ತಿಯಲ್ಲ. ಸ್ನೇಹವೂ ಮಾನವೀಯತೆಯ ಮುಖವೇ. ಹಾಗೆಂದು ಭಿನ್ನಾಭಿಪ್ರಾಯ ಇರಬಾರದೆಂದಲ್ಲ, ಕುಳಿತು ಮಾತನಾಡಿದಾಗ 'ನನ್ನ ಅಭಿಪ್ರಾಯ ಸರಿಯಲ್ಲ' ಎನ್ನುವುದಕ್ಕೆ ಕಾರಣ ಸಿಕ್ಕಾಗ ಅದನ್ನು ಒಪ್ಪಿಕೊಳ್ಳುವ ಮನಸ್ಥಿತಿ ಇರಬೇಕು. ಹಾಗಾದಾಗ ಸ್ನೇಹ ಉಳಿಯುತ್ತದೆ. ಜೀವನದಲ್ಲಿ ಎಲ್ಲವನ್ನೂ ನಗುನಗುತ್ತಾ ಒಪ್ಪಿಕೊಳ್ಳಲಾಗುವುದಿಲ್ಲ ನಿಜ. ಒಂದೇ ಉತ್ತರ ಸರಿಯಾದುದು, ಉಳಿದಿದ್ದು ತಪ್ಪು ಎಂಬ ಮನೋಭಾವವೂ ಸರಿಯಲ್ಲ. ನಾವು ಗಡುಸಾಗಿ 'ನಾವು ಪ್ರಾಮಾಣಿಕರು' ಎಂದು ಹೇಳಿಕೊಳ್ಳುವುದರ ಬದಲು 'ನಾನು ತಪ್ಪಿರಬಹುದು: ಆದರೆ ನನಗೆ ಹಾಗೆ ಅನಿಸುತ್ತದೆ..' ಎಂದರೆ ಅಥವಾ ಈ ಸಮಸ್ಯೆಗೆ 'ಮತ್ತೊಂದು ದೃಷ್ಟಿಕೋನವಿರಬಹುದೇ?' ಎಂದು ಆಲೋಚಿಸಿದರೂ ಸಮಸ್ಯೆಯನ್ನು ಪರಿಹರಿಸಿಕೊಳ್ಳಬಹುದು. ಇಂತಹ ಮೃದು ಮನೋಭಾವ ನಮ್ಮ ತಪ್ಪನ್ನು ನಮಗೆ ತಿಳಿಸುತ್ತದೆ, ಅಲ್ಲದೆ ಸ್ನೇಹ ಶಾಶ್ವತವಾಗುತ್ತದೆ.

ನಮ್ಮ ಸಂಬಂಧಗಳ ನಡುವೆ ಬರುವ ಒಡಕಿಗೆ 'ನಾನೇ ಸರ್ವೋತ್ತಮ' ಎಂಬ ಭಾವವೂ ಕಾರಣವಾಗಿರಬಹುದು. ನಾನೇ ಉತ್ತಮ ಎಂದು ಭಾವಿಸಿದಾಗ ನನ್ನ ಎದುರಿನವರು ಉತ್ತಮರಲ್ಲ ಎಂದು ಹೇಳಿದಂತಾಗುತ್ತದೆ. ಇದು ಸರಿಯಲ್ಲ. ಯಾರೂ ಪರಿಪೂರ್ಣರಾಗಿರಲಾರರು. ಅದನ್ನು ಒಪ್ಪಿಕೊಳ್ಳಬೇಕು. ಈ ಸ್ನೇಹ ಎಂಬುದು ಗಂಡು–ಗಂಡು ಅಥವಾ ಹೆಣ್ಣು–ಹೆಣ್ಣುಗಳ ನಡುವೆ ಮಾತ್ರ ಇರುತ್ತದೆ ಎಂದೇನಲ್ಲ. ಇದು ಗಂಡು–ಹೆಣ್ಣಿನ ನಡುವೆಯೂ ಇರಬಹುದು. ಇಂತಹ ಸ್ನೇಹವನ್ನು ಎಚ್ಚರಿಕೆಯಿಂದ ಉಳಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ನಂಬಿಕೆಯು ಮುಖ್ಯವಾಗಿರುತ್ತದೆ. ಒಮ್ಮೆ ಅಪನಂಬಿಕೆ ಮೂಡಿದಾಗ ಸ್ನೇಹಕ್ಕೆ ಧಕ್ಕೆಯಾಗುತ್ತದೆ.

ಇಂತಹ ಸ್ನೇಹ ಬೇರೆ ಬೇರೆ ವ್ಯಕ್ತಿಗಳ ನಡುವೆ ಮಾತ್ರ ಇರಬೇಕೆಂದಿಲ್ಲ. ಮನೆಯ ಅಣ್ಣ–ತಮ್ಮರ ನಡುವೆಯೂ ಸಂಬಂಧಕ್ಕಿಂತ ಸ್ನೇಹ ಏರ್ಪಟ್ಟರೆ ಅದು ಸುಮಧುರ ಬಾಂಧವ್ಯಕ್ಕೆ ಕಾರಣವಾಗುತ್ತದೆ. ಇತ್ತೀಚೆಗೆ ಪತ್ರಿಕೆಯಲ್ಲಿ ವರದಿಯಾದ ಒಂದು ಘಟನೆ ಇದಕ್ಕೆ ಉದಾಹರಣೆ ಎನಿಸುತ್ತದೆ. ಅದೊಂದು ಅಪರೂಪದ ಘಟನೆ, ಇದು ನ್ಯಾಯಾಲಯದಲ್ಲಿ ನಡೆದಂತಹುದು. ಅದನ್ನು ಕಂಡ ನ್ಯಾಯಾಲಯವೇ ಅಚ್ಚರಿಪಟ್ಟಿತು ಎಂದು ವರದಿಯಾಗಿತ್ತು. ನಮಗೆ ತಿಳಿದಂತೆ ಆಸ್ತಿ ವಿವಾದ, ವಿಚ್ಛೇದನ ಹಾಗೂ ಇತರೆ ಕೌಟುಂಬಿಕ ವಿಚಾರಗಳು ನ್ಯಾಯಾಲಯಕ್ಕೆ ಬರುತ್ತವೆ. ಆದರೆ ಈ ಪ್ರಕರಣ ವಿಭಿನ್ನವಾಗಿತ್ತು. 70 ವರ್ಷದ ತಮ್ಮನೊಬ್ಬ ತನ್ನ 80 ವರ್ಷದ ಅಣ್ಣನ ಮೇಲೆ ಒಂದು ಮೊಕದ್ದಮೆ ಹೂಡಿದ್ದ. ಮೊಕದ್ದಮೆಯು 'ನನ್ನ ಅಣ್ಣನಿಗೆ 80 ವರ್ಷವಾಗಿದೆ ಅವನಿಗೆ ತನ್ನನ್ನೇ ಸರಿಯಾಗಿ ನೋಡಿಕೊಳ್ಳಲಾಗುತ್ತಿಲ್ಲ. ಹಾಗಿರುವಾಗ ಅವನು ನಮ್ಮ 110 ವರ್ಷದ ತಾಯಿಯನ್ನು ಹೇಗೆ ನೋಡಿಕೊಳ್ಳುತ್ತಾನೆ? ನಾನು ಈಗ ಚೆನ್ನಾಗಿದ್ದೇನೆ. ಹಾಗಾಗಿ ನನಗೆ ನನ್ನ ತಾಯಿಯ ಸೇವೆಯನ್ನು ಮಾಡಲು ಮತ್ತು ನನ್ನ ತಾಯಿಯನ್ನು ನನಗೆ ಒಪ್ಪಿಸುವ ಕೆಲಸವನ್ನು ನ್ಯಾಯಾಲಯ ಮಾಡಬೇಕು' ಎಂದು ಅವನು ಮೊಕದ್ದಮೆ ದಾಖಲಿಸಿದ್ದ.

ನ್ಯಾಯಾಧೀಶರು ಅಚ್ಚರಿಯಿಂದ ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡರು. ಅವರು ಇಬ್ಬರು ಸಹೋದರರಿಗೆ ತಾಯಿಯನ್ನು ತಲಾ ಹದಿನೈದು ದಿನ ನೋಡಿಕೊಳ್ಳಬಹುದು ಎಂಬ ಸಲಹೆ ನೀಡಿದರು. ಇದಕ್ಕೆ 80 ವರ್ಷದ ಅಣ್ಣ ಒಪ್ಪಲಿಲ್ಲ. ನನ್ನ ತಾಯಿ ಎಂದರೆ ಅದು ನನ್ನ ಸ್ವರ್ಗ. ನನ್ನ ಸ್ವರ್ಗವನ್ನು ನನ್ನಿಂದ ದೂರ ಮಾಡಲು ನಾನು ಏಕೆ ಒಪ್ಪಬೇಕು? ಎಂದು ಹೇಳಿದ. ನನ್ನ ತಾಯಿ ನನಗೆ ಸಮಸ್ಯೆಯಿದೆ, ನಾನು ಅವಳನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದು ಹೇಳಿದರೆ ಮಾತ್ರ ಅವರನ್ನು ನನ್ನ ತಮ್ಮನಿಗೆ ಒಪ್ಪಿಸಬಹುದು ಎಂದು ಹೇಳಿದ. ಅದಕ್ಕೆ ತಮ್ಮನು 'ಕಳೆದ 40 ವರ್ಷಗಳಿಂದ ಅಣ್ಣನೇ ಏಕಾಂಗಿಯಾಗಿ ತಾಯಿಯ ಸೇವೆ ಮಾಡುತ್ತಿದ್ದಾನೆ. ಹೀಗಿರುವಾಗ ನಾನು ನನ್ನ ತಾಯಿಯನ್ನು ನೋಡಿಕೊಳ್ಳುವ ಕರ್ತವ್ಯವನ್ನು ಯಾವಾಗ ಮಾಡಬೇಕು? ಎಂದು ಕೇಳಿದನು. ಇದನ್ನು ಕೇಳಿ ಸಂಕಷ್ಟಕ್ಕೆ ಈಡಾದ ನ್ಯಾಯಾಧೀಶರು ಎಲ್ಲಾ ಪ್ರಯತ್ನಗಳನ್ನೂ ಮಾಡಿದರು. ಆದರೆ ಯಾವುದೇ ಒಮ್ಮತದ ಪರಿಹಾರ ಕಂಡುಬರಲಿಲ್ಲ. ಕೊನೆಗೆ ತಾಯಿಯ ಅಭಿಪ್ರಾಯ ಕೇಳುವುದೆಂದು ನಿರ್ಧರಿಸಲಾಯಿತು. ಆ ತಾಯಿಯು 30 ಕೆಜಿ ತೂಕದ ದುರ್ಬಲ ದೇಹದ ಮಹಿಳೆ. ಅವಳನ್ನು ನೀವು ಯಾರೊಂದಿಗೆ ಇರಬೇಕೆಂದು ಬಯಸುತ್ತೀರಿ? ಎಂದು ಕೇಳಲಾಯಿತು. ಅದಕ್ಕೆ ತಾಯಿಯು ಮಕ್ಕಳಿಬ್ಬರೂ ನನಗೆ ಸಮಾನರು ಎಂದು ದುಃಖದ ಹೃದಯದಿಂದ ಹೇಳಿದಳು. ಒಬ್ಬ ಮಗನ ಪರವಾಗಿ ತೀರ್ಪು ನೀಡುವ ಮೂಲಕ ನಾನು ಇನ್ನೊಬ್ಬನ ಹೃದಯವನ್ನು ನೋಯಿಸಲಾರೆ. ನೀವು ನ್ಯಾಯಾಧೀಶರು ಇದನ್ನು ನಿರ್ಧರಿಸುವುದು ನಿಮ್ಮ ಕೆಲಸ, ನೀವು ಏನೇ ತೀರ್ಪು ನೀಡಿದರೂ ನಾನು ಒಪ್ಪಿಕೊಳ್ಳುತ್ತೇನೆ ಎಂದೂ ಆ ತಾಯಿ ಹೇಳಿದರು.

ಕೊನೆಗೆ ನ್ಯಾಯಾಧೀಶರು ಅಣ್ಣನಿಗೆ ನಿಜವಾಗಿಯೂ ವಯಸ್ಸಾಗಿದೆ, ಅಲ್ಲದೆ ಅವನು ಬಲಹೀನನಾಗಿದ್ದಾನೆ ಎಂಬ ತಮ್ಮನ ಮಾತನ್ನು ನ್ಯಾಯಾಲಯ ಒಪ್ಪಿದೆ ಎಂದು ನ್ಯಾಯಾಧೀಶರು ಭಾರವಾದ ಹೃದಯದಿಂದ ಹೇಳುತ್ತಾ, 'ತಾಯಿಯ ಜವಾಬ್ದಾರಿಯನ್ನು ತಮ್ಮನಿಗೆ ನೀಡಲಾಗಿದೆ' ಎಂದು ತೀರ್ಪು ನೀಡಿದರು. ಈ ತೀರ್ಪನ್ನು ಕೇಳಿದ ಅಣ್ಣ 'ಈ ನ್ಯಾಯಾಧೀಶ ನನ್ನ ಸ್ವರ್ಗವನ್ನು ನನ್ನಿಂದ ಕಿತ್ತುಕೊಂಡಿದ್ದಾರೆ' ಎಂದು ಜೋರಾಗಿ ಅಳಲು ಪ್ರಾರಂಭಿಸಿದ. ಇದನ್ನು ಕೇಳಿದ ನ್ಯಾಯಾಲಯದಲ್ಲಿದ್ದ ನ್ಯಾಯಾಧೀಶರೂ ಸೇರಿದಂತೆ ಎಲ್ಲರ ಕಣ್ಣುಗಳೂ ಒದ್ದೆಯಾಗಿತ್ತು. ತಾಯಿ ತಮ್ಮನ ಮನೆ ಸೇರಿದಳು. ಇದರಿಂದಾಗಿ ಅಣ್ಣನು ಅತ್ಯಂತ ದುಃಖಭರಿತನಾಗಿ ಮನೆ ಸೇರಿ ಹಾಸಿಗೆ ಹಿಡಿದ. ಇದು ಪ್ರಕರಣ. ಇಂದಿಗೂ ಇಂತಹ ಪ್ರಕರಣಗಳು ನಮ್ಮ ಮುಂದೆ ಕಂಡುಬರುತ್ತವೆ. ಇಬ್ಬರು ಮಕ್ಕಳು ತಮ್ಮ ತಾಯಿಯನ್ನು ನಾನು ನೋಡಿಕೊಳ್ಳಲಾರೆ, ನೀನೇ ನೋಡಿಕೋ ಎಂದು ಜಗಳವಾಡುತ್ತಾ, ಕೊನೆಗೆ ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸುವ ಪ್ರಕರಣಗಳನ್ನು ಕಾಣುವ ನಾವು ಇಂತಹ ಪ್ರಕರಣ ಕೇಳಿದಾಗ ಸಂತೋಷ, ಆಶ್ಚರ್ಯಪಡುವಂತಾಗುತ್ತದೆ.

ಸಂಬಂಧಗಳು ಎಂಬುದು ಈ ರೀತಿಯಾಗಿರಬೇಕು ಎನಿಸುತ್ತದೆ. ಆದರೆ ನಮಗೆ ಏಕೆ ಹಾಗಿರಲಾಗುವುದಿಲ್ಲ? ಮಗನು ತಾಯಿಯನ್ನು ಇಷ್ಟಪಟ್ಟರೆ, ಅವನ ಹೆಂಡತಿ ಅದನ್ನು ಟೀಕಿಸುವುದನ್ನು ಕಾಣುತ್ತೇವೆ. ತಾಯಿಯೇ ಬೇಕಿದ್ದರೆ ಏಕೆ ನನ್ನನ್ನು ಮದುವೆಯಾಗಬೇಕಾಗಿತ್ತು? ಎಂದು ಕೇಳುವ ಹೆಂಡತಿಯರಿರುತ್ತಾರೆ. ಆದರೆ ಮಗ ದೃಢ ನಿಲುವು ತಾಳಿದರೆ ಇದು ಸಮಸ್ಯೆಯಾಗುವುದಿಲ್ಲ. ಹೆಂಡತಿ ಅದಕ್ಕೆ ಕ್ರಮೇಣ ಹೊಂದಿಕೊಳ್ಳುತ್ತಾಳೆ. ಅದು ಅನಿವಾರ್ಯವೂ ಆಗಿರುತ್ತದೆ.

ನಾವು ನಮ್ಮ ಸಂಬಂಧಗಳನ್ನು ಹಾಳುಮಾಡಿಕೊಳ್ಳಬಾರದು. ಹಾಗಾಗ ಬೇಕಾದರೆ ನಮ್ಮ ಸ್ವಭಾವವನ್ನು ಸರಿಪಡಿಸಿಕೊಳ್ಳಬೇಕು. ಸಂಬಂಧ ಉಳಿಯಲು ಮತ್ತೊಬ್ಬರೊಡನೆ ಕಠಿಣವಾದ ಮನೋಭಾವ ತೋರಬಾರದು. ನಮ್ಮ ಅಭಿಪ್ರಾಯಗಳು ಮೃದುತ್ವದಿಂದ ಕೂಡಿರಬೇಕು, ಅಲ್ಲದೇ ಮತ್ತೊಬ್ಬರ ಅಭಿಪ್ರಾಯ ಏನು? ಎಂಬುದನ್ನೂ ತಿಳಿದುಕೊಳ್ಳುವ ಪ್ರಯತ್ನವನ್ನೂ ಮಾಡಬೇಕು. 'ಮಾನವ ಜನುಮ ದೊಡ್ಡದು ಅದನ್ನು ಹಾನಿ ಮಾಡಿಕೊಳ್ಳದಿರಿ' ಎಂಬ ದಾಸರ ವಾಣಿ ಯಾವಾಗಲೂ ನಮ್ಮ ಗಮನದಲ್ಲಿರಬೇಕು.

ಡಿ.4ರಂದು ಶ್ರೀ ಮೂಡಲಬಾಗಿಲು ಆಂಜನೇಯಸ್ವಾಮಿ ಸಂಕಲ್ಪ ಮಾಲೆ

ಮೈಸೂರು,ನ.26(ಎಂಟಿವೈ)– ಹಿಂದು ಜಾಗರಣ ವೇದಿಕೆ ವತಿಯಿಂದ ಡಿ.4ರಂದು ಶ್ರೀರಂಗಪಟ್ಟಣದಲ್ಲಿ ಶ್ರೀಮೂಡಲಬಾಗಿಲು ಆಂಜನೇಯಸ್ವಾಮಿ ಸಂಕಲ್ಪ ಮಾಲೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಹ ಸಂಚಾಲಕ ಲೋಹಿತ್ ಅರಸ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಕಾರ್ಯಕ್ರಮದ ಅಂಗವಾಗಿ ನ.27 ರಿಂದ ಮಾಲಾಧಾರಣೆ ಆರಂಭವಾಗಲಿದೆ. ಮೂಡಲಬಾಗಿಲು ಆಂಜನೇಯ ಸ್ವಾಮಿಯನ್ನು ಪಟ್ಟಣದ ಈಗಿನ ಕ್ಷಣಾಂಬಿಕೆ ಹಾಗೂ ಜ್ಯೋತಿರ್ಭೀಮೇಶ್ವರ ದೇವಾಲಯದ ಬಳಿಯಿಂದ ತನ್ನ ಮೂಲ ಸ್ಥಾನಕ್ಕೆ ಕೊಂಡೊಯ್ಯುವ ಯತ್ನ ಇದಾಗಿದೆ ಎಂದು ತಿಳಿಸಿದರು.

ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಇಸ್ಲಾಮಿಕ್ ಜಿಹಾದ್, ಪೋರ್ಚುಗೀಸ್, ಫ್ರೆಂಚ್ ಹಾಗೂ ಬ್ರಿಟಿಷರ ದಾಳಿಗೆ ತುತ್ತಾಗಿರುವ ಸಾವಿರಾರು ದೇವಾಲಯಗಳ ಪುನರ್ ನಿರ್ಮಾಣ ಮಾಡಬೇಕು. ನಗರದಲ್ಲಿ ಟಿಪ್ಪು ಪ್ರತಿಮೆ ಸ್ಥಾಪಿಸುವುದಾಗಿ ಕೆಲ ಇಸ್ಲಾಂ ಮೂಲಭೂತವಾದಿಗಳು ಹೇಳಿದ್ದಾರೆ. ಟಿಪ್ಪು ಓರ್ವ ಹಿಂದೂ ವಿರೋಧಿ, ನೂರಾರು ದೇವಾಲಯ ಧ್ವಂಸಗೊಳಿಸಿ ಸಂಪತ್ತನ್ನು ಲೂಟಿ ಮಾಡಿದ್ದಾನೆ. ಜೊತೆಗೆ ಹಿಂದೂಗಳ ಕಗ್ಗೊಲೆ, ಬಲವಂತ ಮತಾಂತರ ಮಾಡಿದ್ದಾರೆ. ಹೀಗಾಗಿ ಆತನ ಪ್ರತಿಮೆ ಸ್ಥಾಪನೆಗೆ ಹಿಂದೂ ಸಮಾಜ ಒಪ್ಪುವುದಿಲ್ಲವೆಂದರು. ಗೋಷ್ಠಿಯಲ್ಲಿ ವೇದಿಕೆಯ ಸದಸ್ಯರಾದ ರಂಗಸ್ವಾಮಿ, ಮಾರ್ಕಂಡೇಯ, ಚಂದನ್‌ಗೌಡ, ಲಕ್ಷ್ಮಿನಾರಾಯಣ್ ಉಪಸ್ಥಿತರಿದ್ದರು.

ಚಿನ್ನಾಭರಣ ಕಳವು: ಪತ್ನಿ ವಿರುದ್ಧವೇ ಪೊಲೀಸರಲ್ಲಿ ದೂರು ದಾಖಲಿಸಿದ ಪತಿ

ಮೈಸೂರು,ನ.26–ತಮಗೆ ಸೇರಿದ ಚಿನ್ನಾಭರಣವನ್ನು ಪತ್ನಿಯೇ ಕಳವು ಮಾಡಿದ್ದಾಳೆ ಎಂದು ವೃದ್ಧರೊಬ್ಬರು ನೀಡಿದ ದೂರನ್ನು ಮೈಸೂರಿನ 6ನೇ ಎಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಆದೇಶದ ಮೇರೆಗೆ ವಿವಿ ಪುರಂ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಮೈಸೂರಿನ ವಿಜಯನಗರ 2ನೇ ಹಂತದ ನಿವಾಸಿ ಎಂ.ರಘು ಕಾರಿಯಪ್ಪ (70) ಎಂಬುವರೇ ಶಿಕ್ಷಕಿಯಾಗಿರುವ ತಮ್ಮ ಪತ್ನಿ ಜಾಸ್ಮಿನ್ ಆರ್.ಕಾರಿಯಪ್ಪ ವಿರುದ್ಧ ಪ್ರಕರಣ ದಾಖಲಿಸಿರುವವರು.

ವಿವರ: ಪತ್ನಿ ಜಾಸ್ಮಿನ್ ಕಾರಿಯಪ್ಪ ಅವರು ಸುಮಾರು 5 ವರ್ಷದಿಂದ ಮಾನಸಿಕ ಕಿರುಕುಳ ನೀಡಿ, ತಮ್ಮನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದು ರಘು ಕಾರಿಯಪ್ಪ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ. 2022ರ ಏ.15ರಂದು ತಾವು ಗೋಕುಲಂ 3ನೇ ಹಂತದಲ್ಲಿ ವಾಸವಿದ್ದು, ತಾವು ಸ್ನಾನಕ್ಕೆ ಹೋಗಿದ್ದಾಗ ಅಲ್ಮೇರಾದಲ್ಲಿದ್ದ ತಮಗೆ ಸೇರಿದ 1 ನವರತ್ನ ಉಂಗುರ, 1 ಚಿನ್ನದ ಬಳೆ, 4 ಚಿನ್ನದ ಉಂಗುರಗಳು, 2 ಚಿನ್ನದ ನಾಣ್ಯ, 1 ಚಿನ್ನದ ಸರ, 1 ದೊಡ್ಡ ಬಳೆ ಹಾಗೂ ಮಾಣಿಕ್ಯ ಕಿವಿ ಉಂಗುರಗಳನ್ನು ಪತ್ನಿ ಜಾಸ್ಮಿನ್ ಕಳವು ಮಾಡಿದ್ದಾರೆ. ಈ ವಿಚಾರ ಕೇಳಿದಾಗ ತಾನೇ ಚಿನ್ನಾಭರಣ ತೆಗೆದುಕೊಂಡಿರುವುದಾಗಿ ಹೇಳಿದ ಆಕೆ, ಕೊಲೆ ಬೆದರಿಕೆ ಹಾಕಿದಳು. ಈ ಸಂಬಂಧ ತಾವು ಏ.16ರಂದು ವಿವಿಪುರಂ ಠಾಣೆಗೆ ದೂರು ನೀಡಿ, ಮೇ 12ರಂದು ಹಿಂಬರಹ ಪಡೆದಿರುವುದಾಗಿ ರಘು ಕಾರಿಯಪ್ಪ ತಮ್ಮ ದೂರಿನಲ್ಲಿ ಹೇಳಿದ್ದಾರೆ. ಪತ್ನಿಗೆ ಜು.16ರಂದು ವಕೀಲರ ಮೂಲಕ ನೋಟಿಸ್ ನೀಡಿದ್ದು, ಆಕೆ ಆಭರಣಗಳನ್ನು ಹಿಂತಿರುಗಿಸುವುದಾಗಿ ಜು.22 ರಂದು ಉತ್ತರಿಸಿದ್ದರೂ ಕೂಡ ಈವರೆವಿಗೂ ತನ್ನ ಆಭರಣಗಳನ್ನು ನೀಡಿಲ್ಲ ಎಂದು ರಘು ಕಾರಿಯಪ್ಪ ವಿವಿಪುರಂ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಜೈವಿಕ ಸಾಕ್ಷ್ಯ ನಿರ್ವಹಣೆ ಇಲ್ಲವಾದರೆ ಅತ್ಯಾಚಾರಿ ಶಿಕ್ಷೆಯಿಂದ ಪಾರು

ರಾಜ್ಯ ವಿಧಿವಿಜ್ಞಾನ ಪ್ರಯೋಗಾಲಯದ ಜಂಟಿ ನಿರ್ದೇಶಕ ಡಾ. ಎಂ.ವಿ.ಪ್ರದೀಪ್‌ಕುಮಾರ್



ರಾಜ್ಯ ವಿಧಿವಿಜ್ಞಾನ ಪ್ರಯೋಗಾಲಯದ ಜಂಟಿ ನಿರ್ದೇಶಕ ಡಾ.ಎಂ.ವಿ.ಪ್ರದೀಪ್‌ಕುಮಾರ್ ಮಾತನಾಡಿದರು.

ಮೈಸೂರು,ನ.26(ಪಿಎಂ)– ಅಪ್ರಾಪ್ತೆ ಅಥವಾ ಮಹಿಳೆ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಸಂಗ್ರಹಿಸಿದ ಜೈವಿಕ ಸಾಕ್ಷ್ಯಗಳ ಸೂಕ್ತ ನಿರ್ವಹಣೆ ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ಬೆಂಗಳೂರಿನ ರಾಜ್ಯ ವಿಧಿವಿಜ್ಞಾನ ಪ್ರಯೋಗಾಲಯದ ಜಂಟಿ ನಿರ್ದೇಶಕ (ತಾಂತ್ರಿಕ, ಸಂಶೋಧನೆ ಮತ್ತು ಅಭಿವೃದ್ಧಿ) ಡಾ.ಎಂ.ವಿ.ಪ್ರದೀಪ್‌ಕುಮಾರ್ ಹೇಳಿದರು.

ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ನ್ಯಾಯ ವೈದ್ಯಶಾಸ್ತ್ರ ವಿಭಾಗದ ವತಿಯಿಂದ 'ಸಹಕಾರಿ ನ್ಯಾಯಶಾಸ್ತ್ರ (ಕೊಲಾಬ್ರೇಟಿವ್ ಫೊರೆನ್ಸಿಕ್)' ವಿಷಯ ಕುರಿತಂತೆ ಹಮ್ಮಿಕೊಂಡಿದ್ದ ಕರ್ನಾಟಕ ಮೆಡಿಕೋ–ಲೀಗಲ್ ಸೊಸೈಟಿಯ ಎರಡು ದಿನಗಳ ರಾಜ್ಯ ಮಟ್ಟದ 30ನೇ ವಾರ್ಷಿಕ ಸಮ್ಮೇಳನದಲ್ಲಿ ಶನಿವಾರ 'ಅತ್ಯಾಚಾರ, ಲೈಂಗಿಕ ದೌರ್ಜನ್ಯ (ಪೋಕ್ಸೋ ಕಾಯ್ದೆಯಡಿ ಪ್ರಕರಣಗಳೂ ಒಳಗೊಂಡಂತೆ) ಪ್ರಕರಣಗಳಲ್ಲಿ ಅಧಿಕೃತ ವೈಜ್ಞಾನಿಕ ವರದಿ ನೀಡುವಲ್ಲಿ ರಾಜ್ಯ ವಿಧಿವಿಜ್ಞಾನ ಪ್ರಯೋಗಾಲಯದ ಸಹಯೋಗ ವ್ಯಾಪ್ತಿ' ಕುರಿತು ಅವರು ಮಾತನಾಡಿದರು.

> **ಸಹಾನುಭೂತಿ, ಸೂಕ್ಷ್ಮತೆ ಅಗತ್ಯ**
>
> “ಅತ್ಯಾಚಾರ ಪ್ರಕರಣಗಳಲ್ಲಿ ತನಿಖಾಧಿಕಾರಿಯು ಕೃತ್ಯದ ಸ್ಥಳದ ಸಂರಕ್ಷಣೆಗೆ ಸೂಕ್ತ ಭದ್ರತೆ ಕಲ್ಪಿಸಲು ಕ್ರಮ ವಹಿಸಬೇಕು. ಅದರೊಂದಿಗೆ ಅತ್ಯಂತ ಸಹಾನುಭೂತಿ ಹಾಗೂ ಸೂಕ್ಷ್ಮತೆಯಿಂದ ಸಂತ್ರಸ್ತೆಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ದೊರಕಿಸಿಕೊಡಬೇಕು. ಅತ್ಯಾಚಾರ ಕೇವಲ ದೈಹಿಕ ಆಕ್ರಮಣ ಮಾತ್ರವಲ್ಲ. ಅದರ ಜೊತೆಗೆ ಅದು ಸಂತ್ರಸ್ತೆಯ ವ್ಯಕ್ತಿತ್ವದ ಸಂಪೂರ್ಣ ವಿನಾಶವಾಗಿದೆ. ಒಂದು ಕೊಲೆ ದೇಹ ನಾಶಪಡಿಸಿದರೆ, ಅತ್ಯಾಚಾರ ಅಸಹಾಯಕ ಹೆಣ್ಣಿನ ಆತ್ಮವನ್ನೇ ಕೆಡಿಸುತ್ತದೆ.
>
> –ಡಾ.ಎಂ.ವಿ.ಪ್ರದೀಪ್‌ಕುಮಾರ್

ಜೈವಿಕ ಪುರಾವೆಗಳನ್ನು ಗುರುತಿಸುವುದು, ಪರಿಶೀಲಿಸುವುದು, ಸಂಗ್ರಹಿಸುವುದು, ದಾಖಲೀಕರಿಸಿ, ವಿಶ್ಲೇಷಣೆಗೆ ಒಳಪಡಿಸುವವರೆಗೆ ಸೂಕ್ತ ನಿರ್ವಹಣೆ ಅಗತ್ಯ. ಇಲ್ಲವಾದರೆ ಅದು ಅತ್ಯಾಚಾರಿ ಶಿಕ್ಷೆಯಿಂದ ಪಾರಾಗಲು ನೆರವಾಗಲಿದೆ. ಸಂತ್ರಸ್ತೆಯ ಚಿಕಿತ್ಸೆ ಮತ್ತು ಪರೀಕ್ಷೆಗೆ ವಿಶೇಷ ಗಮನ ನೀಡಬೇಕು. ಜೈವಿಕ ಮಾದರಿಗಳ ಆಯ್ಕೆ, ಸಂಗ್ರಹ, ಪ್ಯಾಕಿಂಗ್, ಸೀಲಿಂಗ್, ಲೇಬಲ್, ಸಂರಕ್ಷಣೆ, ಸಾಗಣೆ ಹಾಗೂ ನಿರ್ವಹಣೆಯ ಎಲ್ಲಾ ಹಂತಗಳ ಪ್ರಕ್ರಿಯೆಯಲ್ಲಿ ಸೂಕ್ಷ್ಮ ಗಮನ ನೀಡುವುದು ಅತ್ಯಂತ ಮುಖ್ಯ ಎಂದು ತಿಳಿಸಿದರು.

ಬಹುತೇಕ ಸಂದರ್ಭಗಳಲ್ಲಿ ಪೊಲೀಸರು, ವಿಧಿವಿಜ್ಞಾನ ತಂಡ ಮತ್ತು ವೈದ್ಯರ ನಡುವೆ ಸಮನ್ವಯತೆ ಇರುವುದಿಲ್ಲ. ಸಂತ್ರಸ್ತೆಯಿಂದ ಸಂಗ್ರಹಿಸಿದ ಸಾಕ್ಷ್ಯವನ್ನು ಆರೋಪಿಯೊಂದಿಗೆ ಹೊಂದಿಸಬೇಕು. ಅಲ್ಲದೆ, ದೃಢೀಕರಿಸಬೇಕು. ತನಿಖೆ ಪ್ರಕ್ರಿಯೆಯಲ್ಲಿ ಈ ಎಲ್ಲರಲ್ಲೂ ಸಮನ್ವಯತೆ ಮುಖ್ಯವಾಗುತ್ತದೆ. ರಕ್ತ ಮತ್ತು ವೀರ್ಯ ಮಾದರಿಗಳು, ಕಚ್ಚಿದ ಗುರುತುಗಳು ಹಾಗೂ ಖಾಸಗಿ ಭಾಗಗಳಿಂದ ಸಂಗ್ರಹಿಸಿದ ಸ್ವಾಬ್ ಸೇರಿದಂತೆ ಇನ್ನಿತರ ಸಾಕ್ಷ್ಯಗಳನ್ನು ಹೊಂದಿಸಿ, ದೃಢೀಕರಿಸಬೇಕು. ಅನೇಕ ಸಂದರ್ಭದಲ್ಲಿ ಸಂತ್ರಸ್ತೆ ಮತ್ತು ಆರೋಪಿ ಇಬ್ಬರನ್ನು ಪ್ರತ್ಯೇಕವಾಗಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸುವುದೂ ಇದೆ. ಆದರೆ ಇದು ಸರಿಯಲ್ಲ ಎಂದರು.

ಅತ್ಯಾಚಾರ ಪ್ರಕರಣಗಳಲ್ಲಿ ಇರುವ ಸಾಕ್ಷ್ಯದ ಪ್ರಕಾರಗಳನ್ನು ವೈದ್ಯರು ಅರ್ಥ ಮಾಡಿಕೊಂಡು ಅದರಂತೆ ಫೊರೆನ್ಸಿಕ್ ಸಾಕ್ಷ್ಯಗಳನ್ನು ಸೂಕ್ತವಾಗಿ ಸಂಗ್ರಹಿಸಬೇಕು. ಹಲವು ಸಂದರ್ಭಗಳಲ್ಲಿ ವೈದ್ಯಕೀಯ ಪರೀಕ್ಷೆ ನಡೆಸುವ ಆಸ್ಪತ್ರೆ ಮತ್ತು ವರದಿ ಕಳುಹಿಸುವ ವಿಧಿವಿಜ್ಞಾನ ಪ್ರಯೋಗಾಲಯದ ನಡುವೆಯೂ ಸಮನ್ವಯದ ಕೊರತೆ ಆಗಿರುವುದು ಇದೆ. ಇದರಿಂದ ಆಸ್ಪತ್ರೆಗಳಿಗೆ ರಾಸಾಯನಿಕ ವಿಶ್ಲೇಷಣಾ ವರದಿ ಸಕಾಲಕ್ಕೆ ತಲುಪದ ನಿದರ್ಶನಗಳೂ ಇವೆ ಎಂದರು.

ಅಪರಾಧ ನಡೆದ ಸ್ಥಳವನ್ನು ಸಂರಕ್ಷಣೆ ಮಾಡುವುದು ನಿರ್ಣಾಯಕವಾಗಲಿದೆ. ಜೊತೆಗೆ ವೈದ್ಯರು ವಿಳಂಬ ಮಾಡದೇ ತನಿಖಾಧಿಕಾರಿಗಳಿಗೆ ವರದಿ ಒದಗಿಸಬೇಕು. ಅಂತೆಯೇ ತನಿಖಾಧಿಕಾರಿಗಳು ವರದಿಯನ್ನು ನ್ಯಾಯಾಧೀಶರಿಗೆ ತಲುಪಿಸಬೇಕು. ಈ ಪ್ರಕ್ರಿಯೆಗಳು ಮಹತ್ವದ ಘಟ್ಟಗಳಾಗಿವೆ ಎಂದರು. ಕೃತ್ಯದ ಸ್ಥಳ ಅಥವಾ ಸಂತ್ರಸ್ತೆಯ ಬಟ್ಟೆ, ದೇಹದ ಮೇಲಿನ ಗುರುತುಗಳು, ಹೆಜ್ಜೆ ಗುರುತುಗಳು ಸೇರಿದಂತೆ ಆರೋಪಿ ಬಿಟ್ಟಿರುವ ಒಂದು ಕೂದಲು ಸಹ ಡಿಎನ್‌ಎ ಪ್ರೊಫೈಲಿಂಗ್ ಪ್ರಕ್ರಿಯೆಗೆ ಸಹಕಾರಿ ಆಗಲಿದ್ದು, ಆ ಮೂಲಕ ಕೃತ್ಯ ಸಾಬೀತುಪಡಿಸಬಹುದು. ಆರೋಪಿಯು ಕೃತ್ಯ ನಡೆಸಿದ್ದಾನೆಯೇ? ಅಥವಾ ಇಲ್ಲವೇ? ಎಂಬುದನ್ನು ಪತ್ತೆ ಹಚ್ಚಲು ಡಿಎನ್‌ಎ ಪ್ರಮುಖ ಪಾತ್ರ ವಹಿಸಲಿದೆ. ಅಂತಹ ವಿಶ್ವಾಸಾರ್ಹತೆಯ ವಿಶಿಷ್ಟ ಲಕ್ಷಣವನ್ನು ಇದು ಹೊಂದಿದೆ. ಅತ್ಯಾಚಾರ ಪ್ರಕರಣಗಳಲ್ಲಿ ಆರೋಪಿಯ ಜೊಲ್ಲು, ವೀರ್ಯ, ರಕ್ತದಿಂದ ಡಿಎನ್‌ಎ ಅನ್ನು ಪತ್ತೆ ಹಚ್ಚಬಹುದು ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಶಾಸಕ ಜಿ.ಟಿ.ದೇವೇಗೌಡರ ಹುಟ್ಟುಹಬ್ಬ ಸಂಭ್ರಮ

ಸಾವಿರಾರು ಅಭಿಮಾನಿಗಳು, ಮುಖಂಡರು, ಕಾರ್ಯಕರ್ತರಿಂದ ಬೃಹತ್ ಬೈಕ್ ರ‍್ಯಾಲಿ



ಮೈಸೂರು,ನ.26(ಎಂಕೆ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿಗಳು, ಜೆಡಿಎಸ್ ಮುಖಂಡರು, ಕಾರ್ಯಕರ್ತರು ಶನಿವಾರ ಬೃಹತ್ ಬೈಕ್ ರ‍್ಯಾಲಿ ನಡೆಸಿದರು.

ಮೈಸೂರಿನ ಟಿ.ನರಸೀಪುರ ಮುಖ್ಯ ರಸ್ತೆಯ ಆಲನಹಳ್ಳಿಯಿಂದ ಆರಂಭವಾದ ಬೈಕ್ ರ‍್ಯಾಲಿ ಸಂಗೀತ ಕಾರ್ನರ್, ಟೆರಿಷಿಯನ್ ಕಾಲೇಜು ವೃತ್ತದಿಂದ ಬನ್ನೂರು ಮುಖ್ಯ ರಸ್ತೆಯ ಹೆಚ್.ಡಿ.ದೇವೇಗೌಡ ವೃತ್ತದಿಂದ ರಿಂಗ್ ರಸ್ತೆ ಬದಿಯಲ್ಲಿರುವ ಎಂಪ್ರೋ ಹೋಟೆಲ್‌ವರೆಗೂ ನಡೆಯಿತು. ಮಾರ್ಗದುದ್ದಕ್ಕೂ ಜೆಡಿಎಸ್ ಬಾವುಟಗಳನ್ನು ಹಿಡಿದು ಸಾಗಿದ ಸಾವಿರಾರು ಮಂದಿ ಜೈಕಾರ ಹಾಕಿದರಲ್ಲದೆ ಟೆರಿಷಿಯನ್ ಕಾಲೇಜು ವೃತ್ತ ಹಾಗೂ ಎಂಪ್ರೋ ಹೋಟೆಲ್ ಎದುರು ಬೃಹತ್ ಸೇಬಿನ ಹಾರ ಹಾಕಿ ಪಟಾಕಿ ಸಿಡಿಸಿ, ಸಂಭ್ರಮಿಸಿದರು.

ಆರತಿ ಬೆಳಗಿ ಸ್ವಾಗತ: ರ‍್ಯಾಲಿ ಮಾರ್ಗ ಮಧ್ಯೆ ಪಾಲಿಕೆ ಸದಸ್ಯೆ ರಜಿನಿ ಅಣ್ಣಯ್ಯ ಸೇರಿದಂತೆ ಸ್ಥಳೀಯ ಮುಖಂಡರು ಜಿ.ಟಿ. ದೇವೇಗೌಡರಿಗೆ ಆರತಿ ಬೆಳಗಿ ಸ್ವಾಗತಿಸಿದರು. ನಂತರ ಎಂಪ್ರೋ ಹೋಟೆಲ್‌ನಲ್ಲಿ ಬೃಹತ್ ಕೇಕ್ ಕತ್ತರಿಸಿ ಸಿಹಿ ಹಂಚಿದರು.

ಗೌರವ ತರುವ ಕೆಲಸ ಮಾಡಿದ್ದೇನೆ: ಬೈಕ್ ರ‍್ಯಾಲಿ ಬಳಿಕ ಅಭಿಮಾನಿಗಳನ್ನುದ್ದೇಶಿಸಿ ಮಾತನಾಡಿದ ಜಿಟಿಡಿ, ಪಕ್ಷಾತೀತವಾಗಿ–ಜಾತ್ಯತೀತವಾಗಿ ಎಲ್ಲರನ್ನು ಪ್ರೀತಿಯಿಂದ ಕಂಡಿದ್ದೇನೆ. ಕ್ಷೇತ್ರದ ಮತದಾರರಿಗೆ ಗೌರವ ತರುವ ನಿಟ್ಟಿನಲ್ಲಿ ಕೆಲಸ ಮಾಡಿದ್ದೇನೆ ಎಂದು ಹೇಳಿದರು.

ಕ್ಷೇತ್ರದ ಜನತೆ ಸೇವೆಗೆ ನಮ್ಮ ಕುಟುಂಬ ಸದಾ ಇರುತ್ತದೆ. ನಿಮ್ಮ ಪ್ರೀತಿ–ಅಭಿಮಾನದಿಂದ ನನಗೆ ಮತ್ತಷ್ಟು ಶಕ್ತಿ ಬಂದಿದೆ. ಜವಾಬ್ದಾರಿ ಹೆಚ್ಚಾಗಿದೆ. ಕ್ಷೇತ್ರದ ಜನತೆ ರಾಜ್ಯದ ಯಾವ ಮೂಲೆಗೆ ಹೋದರು ಗೌರವ ದೊರಕುವಂತೆ ನಡೆದುಕೊಂಡಿದ್ದೇನೆ ಎಂದರು.

ಯಾರೋ ಕೆಲವರು ಮಾತನಾಡಿರುವುದಕ್ಕೆ ನಾನು ಯಾವತ್ತು ಉತ್ತರ ಕೊಟ್ಟಿಲ್ಲ. ನಾನು ಅವರನ್ನು ದ್ವೇಷ ಮಾಡಿಲ್ಲ. ಎಲ್ಲರನ್ನು ಪ್ರೀತಿಯಿಂದ ಕಂಡಿದ್ದೇನೆ. ಚಿಕ್ಕ ವಯಸ್ಸಿನಿಂದಲೂ ನಿಮಗೆ ಗೌರವ ತರುವಂತಹ ಕೆಲಸ ಮಾಡಿದ್ದೇನೆ. ನಿಮ್ಮೆಲ್ಲರ ಪ್ರೀತಿ–ವಿಶ್ವಾಸಕ್ಕೆ ಋಣಿಯಾಗಿದ್ದೇನೆ ಎಂದು ಹೇಳಿದರು.





ಜಿ.ಟಿ.ದೇವೇಗೌಡರಿಗೆ ನಗರಪಾಲಿಕೆ ಸದಸ್ಯೆ ಸವಿತಾ ಸುರೇಶ್ ಶುಭ ಕೋರಿದರು. ಈ ಸಂದರ್ಭದಲ್ಲಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಸುರೇಶ್, ಟೆಂಟ್ ಕುಮಾರ್, ಪ್ರಸಾದ್, ಮಂಜು,ಪ್ರಕಾಶ್ ರಮೇಶ್, ಪರಮೇಶ್‌ಗೌಡ, ಸೊಸೈಟಿ ಕುಮಾರ್, ಲೋಕೇಶ್, ಬಸವರಾಜ್, ಧರ್ಮೇಶ್ ಇನ್ನಿತರರು ಉಪಸ್ಥಿತರಿದ್ದರು.



ಶಾಸಕ ಜಿ.ಟಿ.ದೇವೇಗೌಡ ಅವರಿಗೆ ಜೆಡಿಎಸ್ ಉಪಾಧ್ಯಕ್ಷ ಕೆ.ಆರ್.ಮಿಲ್ ಶಿವಣ್ಣ, ಮುಖಂಡರಾದ ಫಾಲ್ಕನ್ ಬೋರೇಗೌಡ, ಮಧುಸೂದನ್, ಎಸ್.ಎನ್. ವಾಸು, ಕೃಷ್ಣೇಗೌಡ, ವಿಜಿಕುಮಾರ್ ಹೂಗುಚ್ಛ ನೀಡಿ, ಶುಭ ಕೋರಿದರು.

ಸಂವಿಧಾನ ದಿನಾಚರಣೆ ಕುರಿತ ಕೇಂದ್ರದ ಸುತ್ತೋಲೆ ಖಂಡಿಸಿ ದಸಂಸ ಪ್ರತಿಭಟನೆ



ಮೈಸೂರು, ನ.26(ಪಿಎಂ)– ಸಂವಿಧಾನ ಸಮರ್ಪಣಾ ದಿನವನ್ನು 'ಭಾರತ; ಲೋಕತಂತ್ರ ಜನನಿ' ಶೀರ್ಷಿಕೆಯಡಿ ಆಚರಿಸಲು ಸುತ್ತೋಲೆ ಹೊರಡಿಸುವ ಮೂಲಕ ಕೇಂದ್ರ ಸರ್ಕಾರ ಚಾತುರ್ವರ್ಣ ಪದ್ಧತಿ ವೈಭವೀಕರಣದ ದಿನವಾಗಿ ಆಚರಿಸಲು ಹೊರಟಿದೆ ಎಂದು ಆರೋಪಿಸಿ ದಲಿತ ಸಂಘರ್ಷ ಸಮಿತಿ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಪುರಭವನ ಆವರಣದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅಂಗಳದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ನ.26ರ ಸಂವಿಧಾನ ಸಮರ್ಪಣಾ ದಿನವನ್ನು ಬ್ರಾಹ್ಮಣ ಶ್ರೇಷ್ಠತೆ ಪ್ರತಿಪಾದಿಸುವ ಚಾತುರ್ವರ್ಣ ಪದ್ಧತಿ ದಿನವಾಗಿ ಆಚರಿಸಲು ಕೇಂದ್ರ ಸರ್ಕಾರ ಹೊರಟಿದೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರದ ಸದರಿ ಸುತ್ತೋಲೆ ಹಾಗೂ ಇದಕ್ಕೆ ಸಂಬಂಧಿಸಿದ ಭಾರತೀಯ ಇತಿಹಾಸ ಮತ್ತು ಅನುಸಂಧಾನ ಪರಿಷತ್ (ಐಸಿಹೆಚ್‌ಆರ್) ಟಿಪ್ಪಣಿಯಲ್ಲಿ ಒಮ್ಮೆಯೂ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ನೆನೆಯದೇ ಅವಮಾನಿಸಲಾಗಿದೆ. ಇದಲ್ಲದೆ, ವೇದಗಳ ಕಾಲದಲ್ಲಿಯೇ ಪ್ರಜಾಪ್ರಭುತ್ವ ಇತ್ತು. ಭಗವದ್ಗೀತೆಯು ಪ್ರಜಾತಂತ್ರದ ಭಾಗವಾಗಿತ್ತು ಎಂದು ಉಲ್ಲೇಖಿಸಲಾಗಿದ್ದು, ಇದು ಸರಿಯಲ್ಲ. ಇಡೀ ಸುತ್ತೋಲೆಯಲ್ಲಿ ಸುಳ್ಳಿನ ಸರಮಾಲೆಯನ್ನೇ ಪೋಣಿಸಲಾಗಿದೆ ಎಂದು ದೂರಿದರು.

ಇದೇ ವೇಳೆ ಸದರಿ ಸುತ್ತೋಲೆ ಮತ್ತು ಟಿಪ್ಪಣಿ ಹರಿದು ಆಕ್ರೋಶ ವ್ಯಕ್ತಪಡಿಸಿದರು. ಸಂಘಟನೆಯ ಜಿಲ್ಲಾ ಸಂಚಾಲಕರಾದ ಬೆಟ್ಟಯ್ಯ ಕೋಟೆ, ಚುಂಚನಹಳ್ಳಿ ಮಲ್ಲೇಶ್, ಭುಗತಗಳ್ಳಿ ಕೆ.ಮಣಿಯಯ್ಯ, ಆಲಗೂಡು ಶಿವಕುಮಾರ್, ಕಾರ್ಯ ಬಸವಣ್ಣ, ಬನ್ನಹಳ್ಳಿ ಸೋಮಣ್ಣ, ಮುಖಂಡರಾದ ಮಲ್ಲಹಳ್ಳಿ ನಾರಾಯಣ್, ಶಿವಕುಮಾರ್, ವರದಯ್ಯ, ಬಾಲಾಜಿ, ಕಲ್ಲಹಳ್ಳಿ ಕುಮಾರ್, ಮಂಜುನಾಥ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರು ನಗರ ಕಸಾಪ ನೂತನ ಅಧ್ಯಕ್ಷ ಕೆ.ಎಸ್.ಶಿವರಾಮು, ಸುತ್ತೂರು ಶ್ರೀಗಳ ಆಶೀರ್ವಾದ ಪಡೆದರು. ಈ ವೇಳೆ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಚಂದ್ರಶೇಖರ್ ಇದ್ದಾರೆ.

ಟ್ರಿಪಲ್ ರೈಡಿಂಗ್; 537 ಪ್ರಕರಣ ದಾಖಲು

ಮೈಸೂರು, ನ.26(ಎಂಕೆ)– ಟ್ರಿಪಲ್ ರೈಡಿಂಗ್ ವಿಶೇಷ ಕಾರ್ಯಾಚರಣೆ ಮುಂದುವರೆಸಿರುವ ಮೈಸೂರು ನಗರ ಸಂಚಾರ ಪೊಲೀಸರು ಕಳೆದ 7 ದಿನಗಳಲ್ಲಿ 537 ಟ್ರಿಪಲ್ ರೈಡಿಂಗ್ ಪ್ರಕರಣಗಳನ್ನು ದಾಖಲಿಸಿದ್ದಾರೆ.

ಟ್ರಿಪಲ್ ರೈಡಿಂಗ್‌ನಿಂದ ಆಗಬಹುದಾದ ರಸ್ತೆ ಅಪಘಾತಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಟ್ರಿಪಲ್ ರೈಡಿಂಗ್ ವಿಶೇಷ ಕಾರ್ಯಾಚರಣೆ ಹಮ್ಮಿಕೊಂಡಿದ್ದು, ಟ್ರಿಪಲ್ ರೈಡಿಂಗ್ ಸೇರಿದಂತೆ ಇತರೆ ಸಂಚಾರ ನಿಯಮಗಳನ್ನು ಉಲ್ಲಂಘಿಸಿದವರ ವಿರುದ್ಧ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗುವುದು. ಆದ್ದರಿಂದ ಸಾರ್ವಜನಿಕರು ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಮೈಸೂರು ನಗರ ಪೊಲೀಸ್ ಆಯುಕ್ತರು ಸೂಚಿಸಿದ್ದಾರೆ.

PUBLIC NOTICE

In the Court of the Hon'ble VII Addl. Senior Civil Judge and JMFC at Mysore
O.S.No.1260 of 2021

Plaintiffs : Smt. Jayashree and others
V/s
Defendants : Sri. Ramakrishnegowda and others
Defendant No. 1 : Sri Ramakrishnegowda, Aged about 60 years, Father's name not known, Advocate and Notary, Byraveshwara Nilaya, Gowri koppal Main Road, Vidya Nagar, Hassan - 573202.

Take notice, that the Plaintiffs have preferred the above original suit against the Defendants seeking for the relief of partition and separate possession of the suit schedule properties. This notice is caused to intimate the Defendant No.1 that the above suit is posted for appearance of the Defendant No.1 on 17-12-2022 at 11.00 a.m.


In the event of failure of the Defendant No.1 to appear on the said date, the matter will be heard in your absence.

By Order of the Court,
Sd/- Sheristedar,
Court of VII Addl. Sr. Civil Judge,
Mysore.

Sd/- J.M.Aiyanna
Adv for Plaintiff
Date: 18-11-2022









ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಎನ್ ರಮೇಶ್‌ರವರ ಧರ್ಮ ಪತ್ನಿ ಶ್ರೀಮತಿ ರಾಜೇಶ್ವರಿರವರು ಸದರಿ ಷೆಡ್ಯೂಲ್ ಸ್ವತ್ತನ್ನು ನಮ್ಮ ಕಕ್ಷಿದಾರರಾದ ಶ್ರೀ. ಶ್ರೀಕಾಂತ್ ಎಂ.ಎಸ್. ರವರಿಗೆ ಮಾರಾಟ ಮಾಡಲು ಒಪ್ಪಿರುತ್ತಾರೆ ಆದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾವುದೇ ವ್ಯಕ್ತಿ ಅಥವಾ ಸರ್ಕಾರಿ/ಸಹಕಾರಿ/ ಕಾರ್ಪೋರೇಟ್ ಸಂಸ್ಥೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿ ಕಾರ, ಹಿತಾಸಕ್ತಿ , ಆಕ್ಷೇಪಣೆ ಸಿವಿಲ್ ವ್ಯಾಜ್ಯತಂಟೆ ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 10 ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿ ಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಯಾವುದೇ ಸ್ವಭಾವದ ಎಲ್ಲಾ ರೀತಿಯ ಹೊರೆಯಿಂದ ಮುಕ್ತವಾಗಿದೆಎಂದು ಭಾವಿಸುತ್ತ ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ , ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ , ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಲಿಸಲಾಗಿದೆ

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರ್ ಸಿಟಿ, ದೇವರಾಜ ಮೊಹಲ್ಲಾ , ಹೆಬ್ಬಾಳು 1ನೆ ಹಂತ ,ಸುಭಾಸ್ ನಗರ ಬಡಾವಣೆ ಸ್ವತ್ತಿನ ನಂ 192/ಬಿ , ನಿವೇಶನ ನಂ 6, ಹಳೆ ಮನೆ ನಂಬರ್ 475, ಹೊಸ ನಂ 794 ಸ್ವತ್ತಿಗೆ ಚೆಕ್ಕುಬಂದಿ ;– ಪೂರ್ವಕ್ಕೆ : 07 ನೇ ನಂಬರುಳ್ಳ ಬೋರೇಗೌಡರವರ ಮನೆ ಪಶ್ಚಿಮಕ್ಕೆ : 05 ನೇ ನಂಬರುಳ್ಳ ನಾಗರಾಜ ಮೂರ್ತಿರವರ ಮನೆ ಉತ್ತರಕ್ಕೆ ; ರಸ್ತೆ, ದಕ್ಷಿಣಕ್ಕೆ : ಬೇರೆಯವರ ಸ್ವತ್ತು ಈ ಮಧ್ಯೆದಲ್ಲಿರುವ ಪೂರ್ವ– ಪಶ್ಚಿಮ 35 ಅಡಿ , ಉತ್ತರ-ದಕ್ಷಿಣಕ್ಕೆ 50 ಅಡಿಗಳುಳ್ಳ ನಿವೇಶನ ಮತ್ತು ಇದರಲ್ಲಿ ಕಟ್ಟಿರುವ 8.50 ಚದರ ಮೀಟರ್‌ಗಳುಳ್ಳ ನೆಲ ಅಂತಸ್ತಿನ ಆರ್.ಸಿ.ಸಿ. ವಾಸದ ಮನೆ, ವಿದ್ಯುತ್, ನೀರು ಹಾಗೂ ಸ್ಯಾನಿಟರಿ ಸೌಲಭ್ಯಗಳನ್ನೊಳಗೊಂಡ ಪೂರ್ತಾ ಸ್ವತ್ತಾಗಿರುತ್ತದೆ

ಜಿ.ಆರ್.ನವೀನ, ವಕೀಲರು, ನಂ 187/ಬಿ,
ಅಶೋಕಪುರಂ ಪೊಲೀಸ್‌ಠಾಣೆ ಮುಂಭಾಗ,
ಕುವೆಂಪುನಗರ, ಮೈಸೂರು –23. 9964496789.

ಸಾರ್ವಜನಿಕರ ಗಮನಕ್ಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ **ಶ್ರೀಮತಿ. ಬಿ.ಮಹಾಲಕ್ಷ್ಮಿ** ಇವರು ಮೈಸೂರು ಸಿಟಿ, ವಿದ್ಯಾರಣ್ಯಪುರಂ, 7ನೇ ಕ್ರಾಸ್, 1ನೇ ಮೇನ್, ಮನೆ ನಂ. 1063–93 ರಲ್ಲಿ ವಾಸವಾಗಿರುವ ಶ್ರೀ. ಜಿ. ಮಂಜು ರವರಿಗೆ ಸೇರಿದ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತನ್ನು ಖರೀದಿಸಲು ಒಪ್ಪಿರುತ್ತಾರೆ.

ಈ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾರಿಗಾದರೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರ ಇದ್ದಲ್ಲಿ ಅವರುಗಳು ನಮಗೆ ಲಿಖಿತ ನೋಂದಾಯಿತ ಅಂಚೆಯ ಮೂಲಕ ಮೂಲ ದಾಖಲಾತಿಗಳ ಸಹಿತ ಷೆಡ್ಯೂಲ್ ಸ್ವತ್ತಿನ ಮೇಲೆ ಅವರಿಗೆ ಇರುವ ಹಕ್ಕು ಅಥವಾ ಅಧಿಕಾರದ ಸ್ವರೂಪವನ್ನು ಈ ಪ್ರಕಟಣೆಯಾದ ಏಳು **(07)** ದಿನಗಳೊಳಗೆ ಲಿಖಿತ ಹೇಳಿಕೆ ಮೂಲಕ ಈ ಕೆಳಕಂಡವರಿಗೆ ತಿಳಿಸಬಹುದು. ಏಳು ದಿನಗಳೊಳಗೆ ಯಾವುದೇ ರೀತಿಯ ದೂರು ಬರದಿದ್ದಲ್ಲಿ, ನಮ್ಮ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಮುಂದುವರಿಯುತ್ತಾರೆ. ನಂತರ ಬಂದ ಯಾವುದೇ ರೀತಿಯ ದೂರುಗಳನ್ನು ಪರಿಗಣಿಸಲಾಗುದಿಲ್ಲ.

ಷೆಡ್ಯೂಲ್

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಯರಗನಹಳ್ಳಿ ಗ್ರಾಮದ ಸರ್ವೆ ನಂ. 18/1,2,3, 19/1,2,3, 20/4,2,3,4, 21, 22 / 1,2,3,4,5, 6,7,23,24,25 & 26 ರ ಜಮೀನಿನಲ್ಲಿ "ಬಿರ್ಡ್ ಟೀಚರ್ಸ್ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ (ನಿ) ರವರು ನಿರ್ಮಿಸಿರುವ ಮೌಲೀಂ ನಗರ ಬಡಾವಣೆಯಲ್ಲಿನ 388 ನೇ ನಂಬರ್ ಸ್ವತ್ತಿಗೆ ಚಕ್ಕುಬಂದಿ:– ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಖಾಸಗಿ ಸ್ವತ್ತು, ಉತ್ತರಕ್ಕೆ : 389 ನೇ ನಂಬರ್ ಸ್ವತ್ತು, ದಕ್ಷಿಣಕ್ಕೆ : 387 ನೇ ನಂಬರ್ ಸ್ವತ್ತು, ಈ ಮಧ್ಯೆ ಇರುವ ಪೂರ್ವ ಪಶ್ಚಿಮಕ್ಕೆ 12.30 ಮೀಟರ್‌ಗಳು, ದಕ್ಷಿಣೋತ್ತರ 9.00 ಮೀಟರ್‌ಗಳಲ್ಲಿ ಕಟ್ಟಿರುವ 65.80 ಚದರ ಮೀಟರ್‌ನ ನೆಲ ಅಂತಸ್ತು, 65.80 ಚದರ ಮೀಟರ್‌ನ ಒಂದನೇ ಅಂತಸ್ತು ಮತ್ತು 55.02 ಚದರ ಮೀಟರ್‌ನ ಎರಡನೇ ಅಂತಸ್ತಿನ ವಿದ್ಯುತ್, ನೀರು ಮತ್ತು ಸ್ಯಾನಿಟರಿ ಸೌಲಭ್ಯವುಳ್ಳ ಮೊಸಾಯಿಕ್ ನೆಲದಿಂದ ಕೂಡಿದ ನೆಲ, ಒಂದನೇ ಮತ್ತು ಎರಡನೇ ಅಂತಸ್ತಿನ ಆರ್.ಸಿ.ಸಿ. ಮನೆ ಸ್ವತ್ತಾಗಿರುತ್ತದೆ.

ಸಹಿ/–J. Srinivas, B.Com, LLB, P.G.D.B.T,
Advocate , Near Barma Bazar, Behind Katta Meeta, Dhanvanthri Road Cross, Mysore-570001. Cell: 9844136362
ದಿನಾಂಕ : 25/11/2022, ಸ್ಥಳ : ಮೈಸೂರು

ಸಾರ್ವಜನಿಕ ತಿಳುವಳಿಕೆ ಪತ್ರ

ನನ್ನ ಕಕ್ಷಿದಾರರು, ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಡಾ.ಲೋಕೇಶ.ಹೆಚ್.ಎಂ ಬಿನ್ ಮಾಯಣ್ಣ ಹೆಚ್.ಸಿ. ವಾಸ # ಮನೆ ನಂ.225, 8ನೇ ಮುಖ್ಯ ರಸ್ತೆ, 'ಎ' ಬ್ಲಾಕ್ ವಿಜಯನಗರ 3ನೇ ಹಂತ, ಮೈಸೂರು ರವರಿಂದ ಖರೀದಿಸುವ ಈರಾದೆಯನ್ನು ಹೊಂದಿ ಕ್ರಯದ ಕರಾರನ್ನು ಮಾಡಿಕೊಂಡಿರುವುದು ಸರಿಯಷ್ಟೆ. ಡಾ. ಲೋಕೇಶ.ಹೆಚ್.ಎಂ ರವರು ಮಾತ್ರ ಮಾಲೀಕರಾಗಿ ಅನುಸೂಚಿ ಸ್ವತ್ತಿನ ಮೇಲೆ ಹಕ್ಕು, ಆಸಕ್ತಿ ಮತ್ತು ಸೌಮ್ಯಂಗಳಿಗೂ ಒಳಪಟ್ಟು ಸ್ವಾಧೀನದಲ್ಲಿದ್ದು ಅವರು ವಿಕ್ರಯಿಸಲು, ಪರಭಾರೆ ಮಾಡಲು ಸಂಪೂರ್ಣ ಸ್ವತಂತ್ರರಾಗಿಯೂ ಮತ್ತು ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಇರುತ್ತೇವೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಅನುಸೂಚಿ ಸ್ವತ್ತು ಯಾವುದೇ ಬ್ಯಾಂಕಿಗೆ, ಹಣಕಾಸು ಸಂಸ್ಥೆಗೆ ಅಥವಾ ಯಾವುದೇ ಸಂಘ, ಸಂಸ್ಥೆಗೆ, ನ್ಯಾಸ (ಟ್ರಸ್ಟ್) ಮತ್ತು ಯಾವುದೇ ವ್ಯಕ್ತಿಗೆ ಸಮ್ಮತವಾದ ಮತ್ತು ಕಾನೂನು ಬದ್ಧವಾದ ಹಕ್ಕು ಆಸಕ್ತಿ ಅಂದರೆ, ಆಧಾರ, ಭೋಗ್ಯ, ಗೇಣಿ, ಕ್ರಯ, ದಾನ, ರಿಲೀಸ್, ವ್ಯವಸ್ಥಾ, ಹಿಸ್ಸೆ, ಜೀವನಾಂಶ, ಭಾಗಾಂಶ, ಮೈನರ್ ಹಕ್ಕು, ವಾರಸು ಹಕ್ಕು, ರಹದಾರಿ, ನಿರಂತರವಾಗಿ ಬಳಸಿರುವ (ಹಾದಿ) ಹಕ್ಕು, ಡಿಮಾಂಡ್ ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್‌ಮೆಂಟ್, ದಾವಾ, ಡಿಕ್ರಿ, ಜಪ್ತಿ, ಜಾಮೀನು, ನಿರ್ದಿಷ್ಟ ಪರಿಹಾರ ಸಾಲ ಬಾಕಿ, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಇದ್ದಲ್ಲಿ ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 7 (ಏಳು) ದಿನಗಳ ಸೂಕ್ತ ದಾಖಲೆಗಳೊಂದಿಗೆ ಒಳಗೆ ಕೆಳಕಂಡ ನನ್ನ ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ನಿವೇಶನಗಳ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಸೌಮ್ಯ, ಕ್ಲೈಮ್, ಆಧಾರ, ಸಾಲ ಬಾಕಿ, ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತು / ಜಮೀನಿನ ಸಂಬಂಧ ಕ್ರಯದ ಕ್ರಯಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು. ಆನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ವಿಜಯನಗರ 2ನೇ ಹಂತ, ನಿವೇಶನ ಸಂಖ್ಯೆ 3112, ಇದರ ವಿಸ್ತೀರ್ಣ, ಪೂರ್ವ – ಪಶ್ಚಿಮ : 12.00 ಮೀಟರ್, ಉತ್ತರ – ದಕ್ಷಿಣ : 18.00, ಒಟ್ಟು 216.00 ಚದರ ಮೀಟರ್‌ಗಳುಳ್ಳ ಸ್ವತ್ತಿಗೆ ಚಕ್ಕುಬಂದಿ:
ಪೂರ್ವಕ್ಕೆ : ನಿವೇಶನ ಸಂಖ್ಯೆ : 3113, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ : 3111, ಉತ್ತರಕ್ಕೆ : ನಿವೇಶನ ಸಂಖ್ಯೆ : 3145, ದಕ್ಷಿಣಕ್ಕೆ : ರಸ್ತೆ.

ಸಹಿ/– **ಮೋಹನ ಸಿ**, ವಕೀಲರು,
ನಂ.1164, 1ನೇ ಮಹಡಿ, ನಂಜುಂಡೇಶ್ವರ ಕಾಂಪ್ಲೆಕ್ಸ್, ನಾರಾಯಣ ಶಾಸ್ತ್ರಿ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು – 04.
ಮೊ.: 9448448407
ದಿನಾಂಕ: 24/11/2022
ಸ್ಥಳ: ಮೈಸೂರು

IN THE COURT OF VI ADDL. CIVIL JUDGE & JMFC AT MYSURU
P & SC NO. 26/2022

Petitioners:
1. Dr. Anand Rekha W/o Late Raj G Pal @ Rajagopal, Aged about 66 years.
2. Kruparaj, D/o. Late Raj G Pal @ Rajagopal, Aged about 39 years
3. Kishanraj S/o Late Raj G Pal @ Rajagopal, Aged about 34 years

All are resident of Door no. 43 2nd Main,10th Cross, Vidyaranyapuram, Mysuru

-V/S-

Respondent: Nil

PUBLIC NOTICE

The Petitioners have filed the above petition under section 372 of Indian Succession Act for grant of Succession Certificate in respect of the schedule property.
If any person having any claim, interest or objections in granting Succession Certificate in favour of the Petitioner', may appear before this Hon'ble Court on 02-01-2023 at 11.00 AM. Either in person or through Counsel duly instructed. Failing which, the matter will be heard and decided in accordance with law.

SCHEDULE

Particulars	Details of Share Certificate	Ref. Letters
Unit: UPL Limited		
Certificate No. 10588 20430	Start Dist. No. 16884566, 438701618; End Dist. No. 16885165, 438702217; Total Certificate Nos. 02	Link Intime Date: 15-03-2018 Re. No. TM501135 Outward No. OB284
Unit : UNIPHOS Enterprises Limited		
Certificate No. 274551	Start Dist. No. 27040537; End Dist. No. 27040656; Total Certificate Nos. 01	Link Intime Date: 15-03-2018 Re. No. TM500020 Outward No. OB53
Unit: UPL Limited		
Folio No. R07983; Share Cert. No. 26409	No. of Equity Shares held on 03rd July 2019: 1200 [Record Date] Distinctive Nos. From 543034452 To 543035051	No. of Bonus Equity Shares allotted [Ishare for every 2 shares held] Full Shares 600
Unit: Kotak Mahindra Bank Limited		
Certificate No. 805644	No. of Shares : 150 Shares of Rs. 5/- FV	KFIN Technologies Private Limited, Karvy House 46, Avenue 4, Street No. 1, Banjara Hills, Hyderabad - 500034 Ref. No. KFPL/RIS/ KMBL/122923AB Date: 02-01-2020
Unit: ACC Limited — Transmission of Shares		
Folio :- R31589, R25650, R25664, R21768, R21976, R34095, R21768 R21609	No of Shares: 124 shares of 10/- FV	ACC Limited, Cement House, No. 121, Maharshi Karve Road, Mumbai — 400 020 Ref. No. SHR/ED/TR/ Inw No. 101580 Date: 12th December 2018

Given under my hand and seal of this Hon'ble court on this the 24th day of November 2022.

Sd/- By order of the court, Chief Ministerial Officer, Civil Judge and JMFC, Mysore
Sd/- By order of the court, Chief Administrative Office, The Hon'ble Court of VI Addl. Civil Judge and JMFC, Mysore
Sd/- **Sri. Latha Dixit,** BBM, LLB, Advocate, SLD Law Firm, 1458/A, N.S. Road, Mysore.

ರಾಷ್ಟ್ರ ಮಟ್ಟಕ್ಕೆ ಆಯ್ಕೆ



ಮಡಿಕೇರಿ,ನ.26– ಮಡಿಕೇರಿಯಲ್ಲಿ ನಡೆದ ರಾಜ್ಯ ಮಟ್ಟದ ಪ್ರಾಥಮಿಕ ವಿಭಾಗದ 14 ವರ್ಷದ ಬಾಲಕಿಯರ ಹಾಕಿ ಪಂದ್ಯಾವಳಿಯಲ್ಲಿ ಬೆಳಗಾವಿ ತಂಡವನ್ನು 4–0 ಗೋಲುಗಳಿಂದ ಸೋಲಿಸುವ ಮೂಲಕ ಕೊಡಗು ತಂಡದ ಟಿ.ಶೆಟ್ಟಿಗೇರಿ ರೂಟ್ಸ್ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಾದ 6ನೇ ತರಗತಿಯ ನೀನಾ ಕರುಂಬಯ್ಯ ಹಾಗೂ 7ನೇ ತರಗತಿಯ ಜಾಗೃತಿ ಕರುಂಬಯ್ಯ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಇವರು ನೆಮ್ಮಲೆ ಗ್ರಾಮದ ಚಟ್ಟಂಗಡ ರಂಜು ಕರುಂಬಯ್ಯ ಹಾಗೂ ರಶ್ಮಿ ಕರುಂಬಯ್ಯ ದಂಪತಿ ಪುತ್ರಿಯರಾಗಿದ್ದಾರೆ.

ಡಿ.21ರಿಂದ 'ಅಂತಾರಾಷ್ಟ್ರೀಯ ಮಟ್ಟದ ಸಾಂಸ್ಕೃತಿಕ ಜಾಂಬೂರಿ'

50 ಸಾವಿರ ಮಂದಿ ವಿದ್ಯಾರ್ಥಿಗಳು, ಶಿಕ್ಷಕವರ್ಗ ಭಾಗಿ

ಮಡಿಕೇರಿ, ನ.26– ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಿಂದ ಇದೇ ಪ್ರಥಮ ಬಾರಿಗೆ ದಕ್ಷಿಣ ಕನ್ನಡದ ಮೂಡುಬಿದರೆಯ ಆಳ್ವಾಸ್ ವಿದ್ಯಾಸಂಸ್ಥೆಯಲ್ಲಿ ಡಿ.21ರಿಂದ 28ರವರೆಗೆ 'ಅಂತಾರಾಷ್ಟ್ರೀಯ ಮಟ್ಟದ ಸಾಂಸ್ಕೃತಿಕ ಜಾಂಬೂರಿ'ಯನ್ನು ಆಯೋಜಿಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತರಾದ ಪಿ.ಜಿ.ಆರ್.ಸಿಂಧ್ಯಾ ಈ ಬಗ್ಗೆ ಮಾಹಿತಿ ನೀಡಿ, ಆಳ್ವಾಸ್ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ನಡೆಯುವ ಅಂತಾರಾಷ್ಟ್ರೀಯ ಮಟ್ಟದ ಜಾಂಬೂರಿ ಸಮಾವೇಶದಲ್ಲಿ 50 ಸಾವಿರ ಮಂದಿ ವಿದ್ಯಾರ್ಥಿಗಳು ಮತ್ತು ಶಿಕ್ಷಕ ವರ್ಗ ಪಾಲ್ಗೊಳ್ಳಲಿದ್ದಾರೆ ಈಗಾಗಲೇ ರಾಜ್ಯಾದ್ಯಂತ



ದಿಂದ ಸಮಾವೇಶದಲ್ಲಿ ಪಾಲ್ಗೊಳ್ಳಲು 41 ಸಾವಿರ ಮಕ್ಕಳು, 4 ಸಾವಿರ ಶಿಕ್ಷಕರು, ಉತ್ತರ ಭಾರತದ ಒಡಿಸ್ಸಾ ಸೇರಿದಂತೆ ವಿವಿಧ ರಾಜ್ಯಗಳ ಸುಮಾರು 8 ಸಾವಿರ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿರುವುದಾಗಿ ಮಾಹಿತಿ ನೀಡಿದರು. ಕೋವಿಡ್ ಹಿನ್ನೆಲೆ 2019–20ನೇ ಸಾಲಿನಿಂದ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಿಗೆ ಹಿನ್ನಡೆಯಾಗಿತ್ತು.

ಈ ಬಾರಿ ಹೆಚ್ಚಿನ ಹುಮ್ಮಸ್ಸಿನೊಂದಿಗೆ ಅಭೂತಪೂರ್ವವಾದ ಅಂತಾರಾಷ್ಟ್ರೀಯ ಮಟ್ಟದ ಜಾಂಬೂರಿಯನ್ನು ಆಯೋಜಿಸಲಾಗಿದ್ದು, ಅಗತ್ಯ ಸಿದ್ಧತೆಗಳನ್ನು ನಡೆಸಲಾಗಿದೆ ಎಂದರು.

ಕೊಡಗಿನಿಂದ 600 ಮಂದಿ: ಜಾಂಬೂರಿ ಸಮಾವೇಶದಲ್ಲಿ ಕೊಡಗಿನ 600 ಮಂದಿ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಪಾಲ್ಗೊಳ್ಳ ಲಿದ್ದಾರೆ. ಅದರಲ್ಲೂ ಕೊಡಗಿನ 100 ಮಂದಿ ಗಿರಿಜನ ಮಕ್ಕಳಿಂದ ಅವರ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕಾರ್ಯಕ್ರಮ ಜಾಂಬೂರಿಯಲ್ಲಿ ಪ್ರದರ್ಶನಗೊಳ್ಳಲಿದ್ದು, ಇದಕ್ಕಾಗಿ ಪೂರ್ವ ಸಿದ್ಧತೆಗಳು ನಡೆಯುತ್ತಿದೆ ಎಂದರು.

ಜಾಂಬೂರಿ ಸಮಾವೇಶದಲ್ಲಿ ಪ್ರತಿನಿತ್ಯ ಬೆಳಗ್ಗೆ 6.30ರಿಂದ 8 ಗಂಟೆಯವರೆಗೆ ವಿದ್ಯಾರ್ಥಿಗಳಿಗೆ ಯೋಗ, ಧ್ಯಾನ ಕಾರ್ಯಕ್ರಮ, ಬೆಳಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಸಾಮೂಹಿಕ ಮತ್ತು ವೈಯಕ್ತಿಕ ಕಾರ್ಯಕ್ರಮಗಳು ಪ್ರದರ್ಶನಗೊಳ್ಳಲಿದೆ. ಇದರೊಂದಿಗೆ ಪ್ರತಿ ಜಿಲ್ಲೆಯ ವಸ್ತು ಪ್ರದರ್ಶನ ಗಮನ ಸೆಳೆಯಲಿದೆ. ಈ ಜಾಂಬೂರಿ ಸಮಾವೇಶವನ್ನು ಸಾರ್ವಜನಿಕರು ತೆರಳಿ ವೀಕ್ಷಿಸಬಹುದಾಗಿದೆ ಎಂದು ತಿಳಿಸಿದರು.

ಶಿಕ್ಷಣ ನೀತಿಯಲ್ಲಿ ಸ್ಕೌಟ್ಸ್–ಗೈಡ್ಸ್: ಕೇಂದ್ರ ಸರ್ಕಾರದ ನೂತನ ಶಿಕ್ಷಣ ನೀತಿಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ನ ರೋವರ್ಸ್ ಮತ್ತು ರೇಂಜರ್ಸ್ ವಿಭಾಗವನ್ನು ಕಡ್ಡಾಯಗೊಳಿಸಲಾಗಿದೆ ಎಂದು ಪಿಜಿಆರ್. ಸಿಂಧ್ಯಾ ಮಾಹಿತಿ ನೀಡಿದರು. ಪೂರ್ವ ಪ್ರಾಥಮಿಕ ಮಕ್ಕಳಿಗೆ ಸ್ವಚ್ಛತೆಯ ಪರಿಕಲ್ಪನೆ, ಆರೋಗ್ಯದ ವಿಚಾರಗಳ ಮೌಲ್ಯಪಾಠವನ್ನು ಹೇಳಿಕೊಡುವ ಉದ್ದೇಶದಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವತಿಯಿಂದ 'ಬನ್ನಿಸ್' ವಿಭಾಗ ಆರಂಭವಾಗಲಿದೆ. ಈಗಾಗಲೆ ಇದಕ್ಕೆ ಸಂಬಂಧಿಸಿದಂತೆ ಜಿಲ್ಲೆಯ 132 ಅಂಗನವಾಡಿ ಕಾರ್ಯಕರ್ತರು ಮತ್ತು ರಾಜ್ಯದ 10 ಸಾವಿರ ಅಂಗನವಾಡಿ ಕಾರ್ಯಕರ್ತರಿಗೆ ತರಬೇತಿಯನ್ನು ನೀಡಲಾಗಿದೆ ಎಂದು ವಿವರಿಸಿದರು.

ಸ್ಕೌಟ್ಸ್–ಗೈಡ್ಸ್ ಮೀಸಲಾತಿ: ಪ್ರಶ್ನೆಯೊಂದಕ್ಕೆ ಉತ್ತರಿಸಿದ ಪಿ.ಜಿ.ಆರ್. ಸಿಂಧ್ಯಾ, ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ತೊಡಗಿಸಿಕೊಂಡ ವಿದ್ಯಾರ್ಥಿಗಳಿಗೆ ಈ ಹಿಂದಿನಿಂದಲೂ ರೈಲ್ವೇಸ್ ನೇಮಕಾತಿಯಲ್ಲಿ ಮೀಸಲಾತಿಯನ್ನು ಒದಗಿಸಲಾಗಿದೆ ಮುಂದಿನ ದಿನಗಳಲ್ಲಿ ಫೈರ್ ಫೋರ್ಸ್, ಚಾಲಕರು, ನಿರ್ವಾಹಕರು, ಪೊಲೀಸ್ ನೇಮಕಾತಿಯಲ್ಲಿ, ಬಿಇಡಿ ಮೊದಲಾದ ಶೈಕ್ಷಣಿಕ ವಿಭಾಗಗಳಲ್ಲಿ ಮೀಸಲಾತಿ ನೀಡಬೇಕೆನ್ನುವ ಒತ್ತಾಯ ತಮ್ಮದಾಗಿದೆ ಎಂದು ಸ್ಪಷ್ಟಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಪ್ರಧಾನ ಆಯುಕ್ತ ಕೆ.ಟಿ. ಬೇಬಿ ಮ್ಯಾಥ್ಯು, ಸ್ಥಾಪಕ ಆಯುಕ್ತ ಹೆಚ್.ಆರ್. ಮುತ್ತಪ್ಪ, ತರಬೇತಿ ಆಯುಕ್ತರಾದ ಮೈತ್ರಿ ರಾಣಿ, ಜಿಲ್ಲಾ ಖಜಾಂಚಿ ಪುಷ್ಪವೇಣಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತಿ ಉಪಸ್ಥಿತರಿದ್ದರು.



ಶ್ರೀ ಬನಶಂಕರಿ ದೇವಿಯ ಅದ್ದೂರಿ ವಾರ್ಷಿಕ ಉತ್ಸವ

ಕುಶಾಲನಗರ, ನ.26– ಜಿಲ್ಲೆಯ ಗಡಿ ಗ್ರಾಮ ಅರೆ ಮಲೆನಾಡು ಪ್ರದೇಶವಾದ ಹೆಬ್ಬಾಲೆ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಗ್ರಾಮ ದೇವತೆ ಶ್ರೀ ಬನಶಂಕರಿ ಅಮ್ಮನವರ ವಾರ್ಷಿಕ ಹಬ್ಬ ಹಾಗೂ ಜಾತ್ರೋತ್ಸವವು ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ಶ್ರದ್ಧಾಭಕ್ತಿಯೊಂದಿಗೆ ಅದ್ದೂರಿಯಾಗಿ ನಡೆಯಿತು.

ಅಮ್ಮನವರ ಸನ್ನಿಧಿಯಲ್ಲಿ ಬೆಳಿಗ್ಗೆ 7 ಘಂಟೆಯಿಂದ ಗಣಪತಿ ಪೂಜೆ, ಪುಣ್ಯಾಹ ರಕ್ಷಾಬಂಧನ, ದ್ವಜಾರೋಹಣ, ನವಗ್ರಹ ಸ್ನಾನ, ನವಗ್ರಹ ಪೂಜೆ, ಮಹಾ ಮಂಗಳಾರತಿ ಸೇರಿದಂತೆ ಇನ್ನಿತರ ಪೂಜಾ ಕೈಂಕರ್ಯಗಳು ದೇವಾಲಯದ ಪ್ರಧಾನ ಅರ್ಚಕ ಕೃಷ್ಣಮೂರ್ತಿ ನೇತೃತ್ವದಲ್ಲಿ ನೆರವೇರಿದವು. ದೇವಿಯ ವಾರ್ಷಿಕ ಹಬ್ಬದ ಅಂಗವಾಗಿ ಪವಿತ್ರ ಬನದಲ್ಲಿ ಬನಶಂಕರಿ ದೇವಸ್ಥಾನದಲ್ಲಿ ಬೆಳಿಗ್ಗೆ ಕಳಶ ಸ್ಥಾಪಿಸುವುದರೊಂದಿಗೆ ವಿವಿಧ ಪೂಜಾ ಕೈಂಕರ್ಯಗಳು ದೇವಸ್ಥಾನ ಸಮಿತಿ ಅಧ್ಯಕ್ಷ ಯಜಮಾನ್ ಎಚ್.ಎನ್.ಬಸವರಾಜು ಹಾಗೂ ಕಾರ್ಯದರ್ಶಿ ಎಚ್.ಪಿ.ರಾಜು ಹಾಗೂ ಸಮಿತಿ ಸದಸ್ಯರ ನೇತೃತ್ವದಲ್ಲಿ ನಡೆದವು. ಹಬ್ಬದ ಅಂಗವಾಗಿ ಜರುಗಿದ ದೇವರ ಉತ್ಸವದಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು. ಜಾತ್ರೆಯ ಅಂಗವಾಗಿ ದೇವಸ್ಥಾನ ಸಮಿತಿ ವತಿಯಿಂದ ಗ್ರಾಮದ ಬಸವೇಶ್ವರ ದೇವಸ್ಥಾನದ ಬಳಿಯಿಂದ ರಾತ್ರಿ ವಿದ್ಯುತ್ ಅಲಂಕೃತ ಮಂಟಪದಲ್ಲಿ ಬನಶಂಕರಿ ಶೃಂಗರಿಸಿ ಉತ್ಸವ ಮಂಟಪದಲ್ಲಿ ಮೆರವಣಿಗೆ ಮೂಲಕ ಪವಿತ್ರ ಬನಕ್ಕೆ ಕೊಂಡೊಯ್ಯಲಾಯಿತು.

9 ದಿವಸ ಉಪವಾಸ ವ್ರತ ಆಚರಿಸಿದ ಹರಕೆ ಹೊತ್ತ ಭಕ್ತಾದಿಗಳು ಉತ್ಸವಗಳೊಂದಿಗೆ ಮೆರವಣಿಗೆಯಲ್ಲಿ ತಾಯಿಯ ಬನಕ್ಕೆ ಬಂದು ದೇವಸ್ಥಾನದ ಮುಂದೆ ಹಾಕಿರುವ ಅಗ್ನಿಕುಂಡವನ್ನು ಹಾಯ್ದು ದೇವಿಯ ದರ್ಶನ ಪಡೆದು ಪುನೀತರಾದರು. ದೇವಿಯ ಉತ್ಸವದೊಂದಿಗೆ ಗ್ರಾಮದ ಇತರೆ ಭಾಗಗಳಿಂದ ಹೊರಟ ಉತ್ಸವ ಮಂಟಪಗಳ ಕೋಲಾಟ ಯಾತ್ರೆಯು ಹಬ್ಬಕ್ಕೆ ಮೆರುಗು ನೀಡಿತ್ತು. ಮೆರವಣಿಗೆ ಸಂದರ್ಭ ಗ್ರಾಮದ ಬಸ್ ನಿಲ್ದಾಣದ ಬಳಿ ಬಣ್ಣ ಬಣ್ಣದ ಆಕರ್ಷಕ ಮದ್ದುಗುಂಡುಗಳ ಪ್ರದರ್ಶನ ಹಾಗೂ ಬಾಣ ಬಿರುಸುಗಳ ಚಿತ್ತಾರ ನೋಡುಗರ ಕಣ್ಮನ ಸೆಳೆದವು. ಈ ಹಬ್ಬಕ್ಕೆ ಮೈಸೂರು, ಹಾಸನ ಜಿಲ್ಲೆಗಳ ಗಡಿಭಾಗದ ಜನರು ಹಾಗೂ ಸುತ್ತಮುತ್ತಲ ಗ್ರಾಮಗಳಿಂದ ಸಾವಿರಾರೂ ಮಂದಿ ಭಕ್ತಾರ ಪಾಲ್ಗೊಂಡು ದೇವಿ ದರ್ಶನ ಪಡೆದರು. ಕ್ಷೇತ್ರದ ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಅವರು ಶುಕ್ರವಾರ ರಾತ್ರಿ ಶ್ರೀ ಬನಶಂಕರಿ ದೇವಾಲಯ ಭೇಟಿ ದೇವರ ದರ್ಶನ ಪಡೆದು ಪುನೀತರಾದರು.

ರಸ್ತೆ ಅಭಿವೃದ್ಧಿಗೆ ಜಾಗ ಬಿಟ್ಟು ಸಹಕರಿಸಲು ಶಾಸಕರ ಮನವಿ

ವಿರಾಜಪೇಟೆ, ನ.26– ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿ ಕಾಮಗಾರಿ ನಡೆಯುವ ಸಂದರ್ಭದಲ್ಲಿ ಅಕ್ಕ–ಪಕ್ಕದ ರಸ್ತೆಗೆ ಹೊಂದಿಕೊಂಡಿರುವ ತೋಟದ ಮಾಲೀಕರು ರಸ್ತೆಗೆ ಜಾಗ ಬಿಟ್ಟುಕೊಡುವ ಮೂಲಕ ಅಭಿವೃದ್ಧಿ ಕಾರ್ಯಗಳಿಗೆ ಸಹಕಾರ ನೀಡುವಂತಾಗಬೇಕು ಎಂದು ಶಾಸಕ ಕೆ.ಜಿ.ಬೋಪಯ್ಯ ಮನವಿ ಮಾಡಿದ್ದಾರೆ.



ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಈ ಹಿಂದೆ ಜಿಲ್ಲಾ ಪಂಚಾಯಿತಿಗೆ ಸೇರಿದ ಈ ರಸ್ತೆಯನ್ನು ಮೇಲ್ದರ್ಜೆಗೆ ಏರಿಸಲಾಗಿದ್ದು ಲೋಕೋಪಯೋಗಿ ಇಲಾಖೆಯಿಂದ ಈ ಕಾಮಗಾರಿ ನಡೆಸಲಾಗುತ್ತಿದೆ ಎಂದರು.

ವಿರಾಜಪೇಟೆ ಸಮೀಪದ ಕೆದಮುಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ 2 ಕೋಟಿ ರೂ. ಅನುದಾನದಲ್ಲಿ ನಡೆಯುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಜಿಪಂ ಮಾಜಿ ಸದಸ್ಯ ಅಚ್ಚಪಂಡ ಮಹೇಶ್ ಗಣಪತಿ, ಗ್ರಾಪಂ ಅಧ್ಯಕ್ಷೆ ಶೀಲಾ ಮೇದಪ್ಪ, ಗ್ರಾಪಂ ಸದಸ್ಯರಾದ ಪಡಿಯಂಡ ಕಿರಿಯಮ್ಮಯ್ಯ, ಸಾಬು ಮುತ್ತಪ್ಪ, ಕೈತಾಯಿಮಾಡ ಪ್ರಶಾಂತ್ ಉತ್ತಪ್ಪ, ಮಾಜಿ ಸದಸ್ಯ ಚೋಟು ಬಿದ್ದಪ್ಪ, ಬಿ.ಕಿರಣ್, ಜಿಲ್ಲಾ ಡಿಸಿಸಿ ಬ್ಯಾಂಕ್ ನಿರ್ದೇಶಕ ಪಟ್ಟಡಂಡ ರಘು ನಾಣಯ್ಯ, ಶಕ್ತಿ ಕೇಂದ್ರದ ಅಧ್ಯಕ್ಷ ರತ್ನ ಅಯ್ಯಣ್ಣ, ವಿಎಸ್ಎಸ್‌ಎನ್ ಅಧ್ಯಕ್ಷ ಮಾಚಿಮಾಡ ಮಾಜಿ ಅಧ್ಯಕ್ಷ ಮಣಿ ಮಾಚಯ್ಯ, ಗುತ್ತಿಗೆದಾರ ಕೆಯು. ತಿಮ್ಮಯ್ಯ ವೈ.ಎಸ್. ಸಿದ್ದೇಗೌಡ, ಗ್ರಾಮದ ಕುಟೆಯಂಡ ಗಣೇಶ್, ಮಾಳೆಟಿರ ಬೋಪಣ್ಣ ಮತ್ತಿತರರು ಉಪಸ್ಥಿತರಿದ್ದರು.

ಪಾಂಡವಪುರದಲ್ಲಿ ಪುನೀತೋತ್ಸವ ಸಂಭ್ರಮಕ್ಕೆ ಚಾಲನೆ





ಪಾಂಡವಪುರ, ನ26– ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ಅವರ ನೇತೃತ್ವದಲ್ಲಿ ನಡೆಯುತ್ತಿರುವ ಮೂರು ದಿನಗಳ ನಡೆಯುತ್ತಿರುವ 'ಪುನೀತೋತ್ಸವ' ಕಾರ್ಯಕ್ರಮಕ್ಕೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ, ಚಿತ್ರನಟ ನಿಖಿಲ್ ಕುಮಾರಸ್ವಾಮಿ ಚಾಲನೆ ನೀಡಿದರು.

ದಿವಂಗತ ಡಾ.ಅಂಬರೀಶ್ ಹಾಗೂ ಡಾ. ಪುನೀತ್ ರಾಜ್‌ಕುಮಾರ್ ಅವರು ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಪುನೀತೋತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಿದರು.

ರಾಜ್ಯ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಅವರಿಗೆ ತವರಿನ ಸನ್ಮಾನ ಸಲ್ಲಿಸಲಾಯಿತು. ಕಾರ್ಯಕ್ರಮದ ಆರಂಭದಲ್ಲಿ ಪಟ್ಟಣದ ಬಾಲಕಿಯರ ಪದವಿ ಕಾಲೇಜಿನ 1200 ವಿದ್ಯಾರ್ಥಿನಿಯರು ವೇದಿಕೆಯ ಮೇಲೆ ಏಕಕಾಲದಲ್ಲಿ ಪುನೀತ್ ರಾಜ್‌ಕುಮಾರ್ ಕುರಿತು ಹಾಡುವ ಮೂಲಕ ದಾಖಲೆ ನಿರ್ಮಿಸಿದರು.

ನಿಖಿಲ್ ಕುಮಾರಸ್ವಾಮಿ ಮಾತನಾಡಿ, ಕನ್ನಡದ ಮೇರುನಟ ಡಾ.ಪುನೀತ್ ರಾಜ್‌ಕುಮಾರ್ ಅವರನ್ನು ನಾವೆಂದೂ ಮರೆಯಲು ಸಾಧ್ಯವಿಲ್ಲ. ಪುನೀತ್ ರಾಜ್‌ಕುಮಾರ್ ಅವರು ಚಿತ್ರರಂಗ, ನಾಡಿಗೆ ಕೊಟ್ಟಿರುವ ಕೊಡುಗೆ ಅಪಾರವಾಗಿದೆ. ಅವರು ಒಂದು ಕೈಯಲ್ಲಿ ಮಾಡಿದ ಸಹಾಯವನ್ನು ಮತ್ತೊಂದು ಕೈಗೆ ತಿಳಿಯುತ್ತಿರಲಿಲ್ಲ. ಅಷ್ಟೊಂದು ಹೃದಯ ಶ್ರೀಮಂತಿಗೆ ಹೊಂದಿದ್ದ ನಾಯಕ ಅಂತಹ ನಾಯಕರನ್ನು ಕಳೆದುಕೊಂಡಿದಕ್ಕೆ ಸಾಕಷ್ಟು ನೋವುಂಟಾಗಿದೆ. ಅದೇ ರೀತಿ ಮಂಡ್ಯದ ಗಂಡು ಅಂಬರೀಶ್ ಅವರು ತಾಯಿ ಹೃದಯ ಹೊಂದಿದ್ದರು. ಅಂಬರೀಶ್ ಅಣ್ಣ ಜಿಲ್ಲೆಯ ಜನರಿಗೆ ಕೊಟ್ಟ ಪ್ರೀತಿ, ಜಿಲ್ಲೆಯ ಜನ ಅಂಬರೀಶ್ ಅವರಿಗೆಕೊಟ್ಟ ಪ್ರೀತಿ ಬಹಳ ದೊಡ್ಡದು ಎಂದರು. ಇದು ಚುನಾವಣೆಯ ಸಂದರ್ಭ ಹಾಗಾಗಿ ನನ್ನ ಪಕ್ಷಕ್ಕೆ ನನ್ನ ಅವಶ್ಯಕತೆ ಇದೆ. ಚುನಾವಣೆ ಮುಗಿದ ಬಳಿಕ ಮತ್ತೆ ಸಿನಿಮಾ ಮಾಡ್ತೀನಿ ಎಂದರು.

ಪ್ರೊ.ಎಂ.ಕೃಷ್ಣೇಗೌಡ ಮಾತನಾಡಿ, ಶಾಸಕ ಪುಟ್ಟರಾಜು ಅವರದು ನನ್ನದು ರಾಜಕೀಯಕ್ಕೆ ಮೀರಿದ ಸಂಬಂಧ, ರಾಜ್ಯೋತ್ಸವ ಪ್ರಶಸ್ತಿ ದೊರೆತ್ತಿದ್ದಕ್ಕೆ ನನ್ನ ಕರೆಸಿ ಇಷ್ಟೊಂದು ಪ್ರೀತಿಯಿಂದ ಸನ್ಮಾನಿಸಿದಕ್ಕೆ ಧನ್ಯವಾದಗಳು. ಸನ್ಮಾನದಿಂದ ಯೋಗ್ಯತೆ ಬರೋದಿಲ್ಲ. ವಿದ್ಯೆಯಿಂದ ಅಧಿಕಾರ ಬರೋದಿಲ್ಲ. ಜನರ ಪ್ರೀತಿ ವಿಶ್ವಾಸದ ಮುಂದೆ ಎಲ್ಲವೂ ಚಿಕ್ಕದು ಎಂದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿದರು, ಕಾರ್ಯಕ್ರಮದಲ್ಲಿ ಕಿರುತೆರೆ ನಟಿಯರಾದ ಶ್ವೇತ ಪ್ರಸಾದ್, ಸೋನು ಗೌಡ, ಪ್ರಿಯಾಂಕ, ನಮ್ರತ ಗೌಡ ಅವರಿಂದ ನೃತ್ಯ ಪ್ರದರ್ಶನ ಮೂಡಿಬಂತು. ಹಾಸ್ಯನಟ ಸಂತೋಷ ಮತ್ತು ತಂಡದ ಹಾಸ್ಯ ಪ್ರದರ್ಶನ ಗಮನ ಸೆಳೆಯಿತು.

ನೃತ್ಯ ಹಾಗೂ ಹಾಸ್ಯ ಕಾರ್ಯಕ್ರಮಕಂಡು ನೆರೆದಿದ್ದ ಪ್ರೇಕ್ಷಕರು ಶಿಳ್ಳೆಚಪ್ಪಾಳೆ ತಟ್ಟಿ ಸಂಭ್ರಮಿಸಿದರು. 50 ಸಾವಿರಕ್ಕೂ ಅಧಿಕ ಮಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಶ್ರೀ ಶಂಭುಲಿಂಗೇಶ್ವರ ಜಾತ್ರಾ ಮಹೋತ್ಸವ ಪ್ರಯುಕ್ತ ಕುಸ್ತಿ ಪಂದ್ಯಾವಳಿ



ಶ್ರೀರಂಗಪಟ್ಟಣ, ನ.26– ತಾಲೂಕಿನ ಪಾಲಹಳ್ಳಿ ಗ್ರಾಮದಲ್ಲಿ ಶ್ರೀ ಶಂಭುಲಿಂಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ 30 ಜೊತೆ ಕುಸ್ತಿ ಪಂದ್ಯಾವಳಿ ಯಶಸ್ವಿಯಾಗಿ ನಡೆಯಿತು. ಈ ಪಂದ್ಯಕ್ಕೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಕುಸ್ತಿ ಪಟುಗಳು ಬಂದಿದ್ದರು.

ಪಂದ್ಯಾವಳಿಯನ್ನು ಗ್ರಾಪಂ ಅಧ್ಯಕ್ಷೆ ರೇಖಾ ಉದ್ಘಾಟಿಸಿದರು.ಪೈಲ್ವಾನ್ ರಘು, ಪಿ.ಎಚ್.ನಾಗರಾಜು, ಪೈಲ್ವಾನ್ ಮುಕುಂದ, ಅಭಿ, ಗಣೇಶ್ ಬಿ, ದಿಲೀಪ್, ಅಜಯ್, ಪೈಲ್ವಾನ್ ರವಿ, ಸುರೇಶ್, ಹಲವು ಪಕ್ಷಗಳ ಮುಖಂಡರು, ಗ್ರಾಪಂ ಸದಸ್ಯರು ಉಪಸ್ಥಿತರಿದ್ದರು.

ಅಣ್ಣೂರಲ್ಲಿ ಚರ್ಮಗಂಟು ರೋಗ: ಹಸು ಸಾವು

ಭಾರತೀನಗರ, ನ.26– ಚರ್ಮಗಂಟು ರೋಗ ಕಾಣಿಸಿಕೊಂಡು ನಾಟಿ ಹಸುವೊಂದು ಸಾವನ್ನಪ್ಪಿರುವ ಘಟನೆ ಸಮೀಪದ ಅಣ್ಣೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಕೃಷ್ಣಪ್ಪ(ಗುಡ್ಡಪ್ಪ) ಎಂಬುವವರಿಗೆ ಸೇರಿದ ನಾಟಿ ಹಸುವಿಗೆ ಕಳೆದ 10 ದಿನಗಳಿಂದ ಚರ್ಮಗಂಟು ರೋಗ ಕಾಣಿಸಿಕೊಂಡಿತು. ಚಿಕಿತ್ಸೆ ಕೊಡಿಸಿದರೂ ಫಲಕಾರಿಯಾಗದೆ ಶನಿವಾರ ಮೃತಪಟ್ಟಿದೆ. ಸ್ಥಳಕ್ಕೆ ಕೆ.ಎಂ.ದೊಡ್ಡಿ ಪಶುವೈದ್ಯಾಧಿಕಾರಿ ಡಾ.ಶಿವಶಂಕರ್, ಪಶುವೈದ್ಯ ಪರೀಕ್ಷಕ ಚನ್ನಪ್ಪ ಭೇಟಿ ನೀಡಿ ಪರಿಶೀಲಿಸಿ ಸರ್ಕಾರದಿಂದ ಸಿಗುವ ಪರಿಹಾರ ಒದಗಿಸುವ ಭರವಸೆ ನೀಡಿದರು.

ಜಾತಿ ವ್ಯವಸ್ಥೆ ವಿರುದ್ಧ ಮಾಚಿದೇವರ ಹೋರಾಟ ಅನನ್ಯ

ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ ಅಭಿಮತ

ಮಂಡ್ಯ: 12ನೇ ಶತಮಾನದಲ್ಲಿಯೇ ಜಾತಿ ವ್ಯವಸ್ಥೆ ವಿರುದ್ಧ ಶಿವಶರಣರೊಂದಿಗೆ ಮಡಿವಾಳ ಮಾಚಿದೇವರು ಹೋರಾಟ ನಡೆಸಿದ್ದು ಸಾದಾರಣ ವಿಚಾರವಲ್ಲ ಎಂದು ಮೈಸೂರಿನ ಅರಗು ಮತ್ತು ಬಣ್ಣ ಕಾರ್ಖಾನೆ ಅಧ್ಯಕ್ಷ ರಘು ಕೌಟಿಲ್ಯ ಹೇಳಿದರು.

ನಗರದ ಕರ್ನಾಟಕ ಸಂಘದಲ್ಲಿ ಜಿಲ್ಲಾ ಮಡಿವಾಳ ಮಾಚಿದೇವರ ಸಂಘ ಕನ್ನಡ ರಾಜ್ಯೋತ್ಸವ ಅಂಗವಾಗಿ ಆಯೋಜಿಸಿದ್ದ ರಾಜ್ಯಮಟ್ಟದ ಶ್ರೀ ಮಡಿವಾಳ ಮಾಚಿದೇವರ ವಚನ ಗಾಯನೋತ್ಸವ ಸ್ಪರ್ಧೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಇಂದಿನ ಆಧುನಿಕತೆ, ಶಿಕ್ಷಣ ಕಾಲಘಟ್ಟದಲ್ಲೂ ಜಾತಿ ವ್ಯವಸ್ಥೆ ವಿಪರೀತವಾಗಿದೆ, ಅಂತದ್ದರಲ್ಲಿ 12ನೇ ಶತಮಾನದಲ್ಲಿ ಇನ್ನಷ್ಟು ಹೆಚ್ಚಳವಾಗಿತ್ತು. ಹೋರಾಟಕ್ಕೆ ಎಷ್ಟು ಅಡ್ಡಿ–ತೊಂದರೆ, ಸಮಸಮಾಜ ನಿರ್ಮಾಣಕ್ಕೆ ಸಾಕ್ಷಿಯಾಗಿದೆ ಎಂಬುದ ಊಹಿಸಿ ಎಂದು ನುಡಿದರು.



ವೀರ ಮಡಿವಾಳ ಮಾಚಿದೇವರ ಹೋರಾಟ ಅವಿಸ್ಮರಣೀಯವಾಗಿದೆ, ವಚನ ಸಾಹಿತ್ಯ ಮನುಷ್ಯರನ್ನು ಬದಲಾವಣೆಯತ್ತ ಸಾಗಿಸುತ್ತದೆ. ಎಲ್ಲಾ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ ಎಂದು ತಿಳಿಸಿದರು. ಶ್ರೀ ಮಡಿವಾಳ ಮಾಚಿದೇವರ ವಚನ ಗಾಯನೋತ್ಸವ ಸ್ಪರ್ಧೆ ಮಾಡುತ್ತಿರುವುದು ಶ್ಲಾಘನೀಯ, ರಾಜ್ಯದ ವಿವಿಧ ಜಿಲ್ಲೆಗಳಿಂದ ಸ್ಪರ್ಧಾರ್ಥಿಗಳು ಬಂದಿದ್ದು, ಅವರು ವಚನ ಸಾಹಿತ್ಯದ ಮೇಲೆ ಸಾಧನೆ ಮಾಡಿದವರೇ ಆಗಿರುತ್ತಾರೆ, ಜಿಲ್ಲೆಯ ಜಿಲ್ಲಾ ಮಡಿವಾಳ ಮಾಚಿದೇವರ ಸಂಘದ ಅಧ್ಯಕ್ಷ ವೆಂಕಟೇಶ್ ಅವರ ಶ್ರಮ, ಆಲೋಚನೆಗೆ ಎಲ್ಲರೂ ಶಕ್ತಿ ತುಂಬೋಣ ಎಂದು ಹೇಳಿದರು.

ಶ್ರೀ ಮಡಿವಾಳ ಮಾಚಿದೇವರ ವಚನ ಗಾಯನೋತ್ಸವ ಸ್ಪರ್ಧಾ ವಿಜೇತರಿಗೆ ಬಹುಮಾನ ನೀಡಲಾಯಿತು

ಮನ್‌ಮುಲ್ ನಿರ್ದೇಶಕ ಶಿವಕುಮಾರ್ ಉಮ್ಮಡಹಳ್ಳಿ, ಜಿಲ್ಲಾ ಮಡಿವಾಳ ಮಾಚಿದೇವರ ಸಂಘದ ವೆಂಕಟೇಶ್ ಹಳವಾಡಿ, ಜಿಲ್ಲಾ ಜಗಜ್ಯೋತಿ ಬಸವೇಶ್ವರ ಪತ್ತಿನ ಸಹಕಾರ ಬ್ಯಾಂಕ್ ಅಧ್ಯಕ್ಷ ನಾಗರಾಜು, ಹಾಪ್‌ಕಾಮ್ಸ್ ಸಂಸ್ಥೆಯ ನಿರ್ದೇಶಕ ಡಿ.ನಾಗೇಶ್ ಹೊಸಹಳ್ಳಿ, ನಗರಸಭೆ ಸದಸ್ಯ ನಾಗೇಶ್, ನೌಕರರ ಸಹಕಾರ ಸಂಘದ ಸದಸ್ಯ ಸಂತೋಷ್, ಕಾರ್ಯಕ್ರಮ ಸಂಯೋಜಕ ಸೋಮಶೇಖರ್, ಜಾನಪದ–ತತ್ವಪದ ಗಾಯಕ ಗೊರವಾಲೆ ಚಂದ್ರಶೇಖರ್, ತೀರ್ಪುಗಾರರಾದ ಭೀಮಶಂಕರ್, ರವಿಕುಮಾರ್, ಪ್ರತೀಮಾ ಇತರರಿದ್ದರು.

ಜಿಪಂ ಮಾಜಿ ಸದಸ್ಯ ಮರಿಯಪ್ಪ ನಿಧನ



ಶ್ರೀರಂಗಪಟ್ಟಣ, ನ.26– ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಮರಿಯಪ್ಪ(55)ನವರು ಶನಿವಾರ ನಿಧನರಾದರು. ಬಾಬುರಾಯನಕೊಪ್ಪಲು ಗ್ರಾಮದಲ್ಲಿ ವಾಸವಿದ್ದ ಇವರು ಪತ್ನಿ ಸುಜಾತ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮುಂಡುಗದೊರೆ(ದೊಡ್ಡಪಾಳ್ಯ ಹತ್ತಿರ) ಗ್ರಾಮದಲ್ಲಿರುವ ಜಮೀನಿನಲ್ಲಿ ಭಾನುವಾರ(ನ.27) ಮಧ್ಯಾಹ್ನ 12ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಹಾಗೂ ಹಲವು ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.



ಸಿ.ಆರ್.ದೀಪು

ಪಾಂಡವಪುರ, ನ26– ಚಿನಕುರಳಿ ಗ್ರಾಮದಲ್ಲಿ ಆರ್.ಪಿ.ಜಿ. ಕುಟುಂಬದ ರಾಮಕೃಷ್ಣೇಗೌಡರ ಪುತ್ರ ಸಿ.ಆರ್.ದೀಪು(ಪ್ರದೀಪ್)35 ಇಂದು ಅನಾರೋಗ್ಯದಿಂದ ನಿಧನರಾದರು. ಇಂದು ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು. ಇವರು ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

ಕುಸಿದಿರುವ ರಸ್ತೆ ದುರಸ್ತಿಗೆ ಶಾಸಕರ ಸೂಚನೆ



ಗುಂಡ್ಲುಪೇಟೆ, ನ.26– ತಾಲೂಕಿನ ಅರೇಪುರ ತೊಂಡವಾಡಿ ಸಮೀಪದ ಸೇತುವೆ ಬಳಿ ಕುಸಿದಿರುವ ರಸ್ತೆಯನ್ನು ಕೂಡಲೇ ಸರಿಪಡಿಸುವಂತೆ ಶಾಸಕ ಸಿ.ಎಸ್.ನಿರಂಜನ ಕುಮಾರ್ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಆಯೋಜಿಸಿದ್ದ ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ಲೋಕೋಪಯೋಗಿ ಇಲಾಖೆಯ ಎಇಇ ಸಿದ್ದಪ್ಪ ಅವರಿಗೆ ಈ ಸೂಚನೆ ನೀಡಿದರು.

ತೆರಕಣಾಂಬಿ ಹೋಬಳಿಯ ಚಿರಕನಹಳ್ಳಿ, ಬೊಮ್ಮನಹಳ್ಳಿ ಮುಂತಾದ ಗ್ರಾಮಗಳಲ್ಲಿ ಮಳೆಗೆ ಮನೆಗೋಡೆಗಳು ನೆಲಕ್ಕುರುಳಿ ತಿಂಗಳಾದರೂ ಇನ್ನೂ ಪರಿಹಾರ ನೀಡಿಲ್ಲ ಎಂದು ಸಂತ್ರಸ್ತರು ದೂರುತ್ತಿದ್ದಾರೆ. ಇಲ್ಲದ ದಾಖಲಾತಿಗಳನ್ನು ಕೇಳದೆ ಅನಗತ್ಯವಾಗಿ ವಿಳಂಬ ಮಾಡದೆ ಕೂಡಲೇ ಪರಿಹಾರ ನೀಡಿ, ಹಕ್ಕಲಪುರ, ಬನ್ನಿತಾಳಪುರ ಮುಂತಾದ ಗ್ರಾಮಗಳ ರೈತರು ಕಳೆದ 40 ವರ್ಷಗಳಿಂದ ಸರ್ಕಾರಿ ಭೂಮಿ ಉಳುಮೆ ಮಾಡುತ್ತಿದ್ದರೂ ತಾಂತ್ರಿಕ ಕಾರಣದಿಂದ ಹಕ್ಕುಪತ್ರ ನೀಡಲಾಗುತ್ತಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಸರಿಪಡಿಸಿ ಎಂದು ತಹಸೀಲ್ದಾರ್ ರವಿಶಂಕರ್ ಅವರಿಗೆ ಸೂಚಿಸಿದರು.

ಸಭೆಯಲ್ಲಿ ಬಿಇಒ ಎಸ್.ಸಿ.ಶಿವಮೂರ್ತಿ, ಸೆಸ್ಕ್ ಎಇಇ ಕೆ.ಎಂ.ಸಿದ್ದಲಿಂಗಪ್ಪ, ಪುರಸಭೆ ಮುಖ್ಯಾಧಿಕಾರಿ ಆರ್.ಹೇಮಂತಕುಮಾರ್, ಬಗರ್ ಹುಕುಂ ಸಮಿತಿಯ ಉಪಾಧ್ಯಕ್ಷ ನಿಟ್ರೆ ನಾಗರಾಜಪ್ಪ, ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಕೆ.ಆರ್.ಲೋಕೇಶ್, ಪಿಕಾರ್ಡ್ ಬ್ಯಾಂಕ್‌ಅಧ್ಯಕ್ಷ ಹೊರೆಯಾಲ ಮಹೇಶ್ ಹಾಗೂ ಇತರರುಇದ್ದರು.

ಹರದನಹಳ್ಳಿಯಲ್ಲಿಂದು ಕಣ್ಣಿನ ತಪಾಸಣಾ ಶಿಬಿರ

ಚಾಮರಾಜನಗರ, ನ.26– ಜೆಎಸ್‌ಎಸ್ ಆಸ್ಪತ್ರೆ ಮೈಸೂರು ಹಾಗೂ ಡಾ. ಬಾಬು ಸೋಷಿಯಲ್ ವೆಲ್‌ಫೇರ್ ಅಂಡ್ ಚಾರಿಟಬಲ್ ಟ್ರಸ್ಟ್ ಮತ್ತು ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆಯ ಸುಯುಕ್ತಾಶ್ರಯದಲ್ಲಿ ನ.27 ರಂದು ಭಾನುವಾರ ತಾಲೂಕಿನ ಹರದನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಬೃಹತ್ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಅಯೋಜಿಸಲಾಗಿದೆ.

ಬೆಳಗ್ಗೆ 9 ರಿಂದ 1 ಗಂಟೆಯವರಗೆ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಕಣ್ಣಿನಪೊರೆ, ಕಣ್ಣಿನಲ್ಲಿ ಗೀಜು ಬರುವುದು, ವಾರೆಕಣ್ಣು, ಗ್ಲಾಕೋಮ, ನೀರು ಸೋರುವಿಕೆ, ಹತ್ತಿರ ಮತ್ತು ದೂರದೃಷ್ಟಿ ದೋಷ, ರಾತ್ರಿ ಕುರುಡತನ, ಕಣ್ಣಿನಲ್ಲಿ ಬಿರುಕು ಉಂಟಾಗುವುದು ಈ ಸಮಸ್ಯೆಗಳ ಬಗ್ಗೆ ಪರೀಕ್ಷಿಸಲಾಗುವುದು.

ಕೊಳ್ಳೇಗಾಲದಲ್ಲಿ ಅಂಬೇಡ್ಕರ್ ಪ್ರತಿಮೆ ಸ್ಥಾಪನೆ

ಕೊಳ್ಳೇಗಾಲ, ನ.26– ಕೊಳ್ಳೇಗಾಲ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ರಸ್ತೆಯಲ್ಲಿರುವ ಸರ್ಕಾರಿ ಆಸ್ಪತ್ರೆ ಸಮೀಪದ ವೃತ್ತದಲ್ಲಿ ಶನಿವಾರ ಸಂಜೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಕಂಚಿನ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಯಿತು.

ಕೊಳ್ಳೇಗಾಲದ ಗುತ್ತಿಗೆದಾರ ವಾಲೆ ಮಹದೇವ್ ಅವರು ಒಂದು ಕೋಟಿಗೂ ಹೆಚ್ಚು ಹಣ ವೆಚ್ಚ ಮಾಡಿ ಆಕರ್ಷಕ ವೃತ್ತ ನಿರ್ಮಿಸಿದ್ದಲ್ಲದೆ, ಪ್ರತಿಮೆಯನ್ನು ಕೂಡ ಅವರೇ ವೈಯಕ್ತಿಕ ಹಣದಲ್ಲಿ ಮಾಡಿಸಿದ್ದರು.

ಬೆಂಗಳೂರಿನಿಂದ ಪ್ರತಿಮೆ ತಾಲೂಕಿನ ಗಡಿ ಸತ್ತೇಗಾಲ ಹ್ಯಾಂಡ್‌ಪೋಸ್ಟ್‌ಗೆ ಆಗಮಿಸಿದ್ದಂತೆಯೇ ಹನೂರು ಶಾಸಕ ಆರ್.



ನರೇಂದ್ರ ಅವರು ಪ್ರತಿಮೆಗೆ ಪುಷ್ಪಮಾಲೆ ಹಾಕುವ ಮೂಲಕ ಸ್ವಾಗತಿಸಿದರು. ಬಳಿಕ ಸತ್ತೇಗಾಲ, ಧನಗೆರೆ, ಸರಗೂರು, ನರೀಪುರ, ಹೊಸ ಅಣಗಳ್ಳಿ ಮೂಲಕ ಸಾವಿರಾರು ಮಂದಿ ವಿವಿಧ ಜನಾಂಗಗಳ ಮುಖಂಡರ ಮೆರವಣಿಗೆಯೊಂದಿಗೆ ಪ್ರತಿಮೆಯನ್ನು ಕೊಳ್ಳೇಗಾಲ ಪಟ್ಟಣಕ್ಕೆ ತಂದು ಪ್ರತಿಷ್ಠಾಪನೆ ಮಾಡಲಾಯಿತು. ಮೆರವಣಿಗೆ ಮಾರ್ಗದುದ್ದಕ್ಕೂ ಜಾತ್ಯತೀತವಾಗಿ ಸಹಸ್ರಾರು ಜನರು ಪ್ರತಿಮೆಗೆ ಹಾರ ಹಾಕಿ ಅಭೂತಪೂರ್ವವಾಗಿ ಸ್ವಾಗತ ಕೋರಿದರು.

ಚಿಕಲ್ಲೂರು ಮಠದ ಧರ್ಮಾಧಿಕಾರಿ ಭರತ್‌ರಾಜೇ ಅರಸ್, ಮಾಜಿ ಶಾಸಕರಾದ ಎಸ್.ಜಯಣ್ಣ, ಎಸ್.ಬಾಲರಾಜು, ನಗರಸಭೆ ಅಧ್ಯಕ್ಷರು, ಸದಸ್ಯರು, ವಿವಿಧ ಜನಾಂಗಗಳ ಮುಖಂಡರು, ಸರ್ವಪಕ್ಷದ ರಾಜಕಾರಣಿಗಳು ಹಾಜರಿದ್ದರು.

ನ.30, ಉದ್ಯೋಗ ಮೇಳ

ಚಾಮರಾಜನಗರ, ನ.26– ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ರಾಷ್ಟ್ರೀಯ ವೃತ್ತಿ ಸೇವಾ ಯೋಜನೆ (ಎನ್.ಸಿ.ಎಸ್.ಪಿ)ಯಡಿ ಜಿಲ್ಲಾ ಮಟ್ಟದ ಉದ್ಯೋಗ ಮೇಳ ಕಾರ್ಯಕ್ರಮವನ್ನು ನ.30ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ದೂ.ಸಂ. 08226–224430, ಮೊ.ಸಂ.8884865299, 9902496059 ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗಾಧಿಕಾರಿ ಎ. ಮಹಮ್ಮದ್ ಅಕ್ಬರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಅವಕಾಶ: ಜಿಲ್ಲಾ ನ್ಯಾಯಾಧೀಶರಾದ ಭಾರತಿ

ಚಾಮರಾಜನಗರ, ನ.26– ದೇಶದಲ್ಲಿ ಎಲ್ಲಾ ವರ್ಗದವರಿಗೂ ಸಂವಿಧಾನದಲ್ಲಿ ಸಮಾನ ಅವಕಾಶಗಳನ್ನು ಕಲ್ಪಿಸಲಾಗಿದ್ದು, ಈ ಅವಕಾಶ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಜಿಲ್ಲಾ ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಅವರು ತಿಳಿಸಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿಂದು ನೆಹರು ಯುವ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ರಂಗವಾಹಿನಿ ಸಂಸ್ಥೆ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.


ಸಂವಿಧಾನದ ಅರಿವು ಪ್ರತಿಯೊಬ್ಬರಿಗೂ ಅವಶ್ಯವಾಗಿದೆ. ಸಂವಿಧಾನದಲ್ಲಿ ಎಲ್ಲಾ ಸಮುದಾಯಗಳಿಗೂ ಸಮಾನ ಅವಕಾಶ ಕಲ್ಪಿಸಲಾಗಿದೆ. ಸಂವಿಧಾನದಡಿ ಸರ್ಕಾರಗಳು ಹಲವು ಸೌಲಭ್ಯ, ಸವಲತ್ತುಗಳನ್ನು ನೀಡುತ್ತಿವೆ ಎಂದರು.

ಡಾ.ಬಿ.ಆರ್. ಅಂಬೇಡ್ಕರ್ ಅವರ ಪರಿಶ್ರಮದಿಂದ ಸಂವಿಧಾನ ರಚನೆಯಾಗಿದೆ. ಅಂಬೇಡ್ಕರ್ ಅವರು ಸಂವಿಧಾನ ರಚನೆಯ ಕರಡು ಸಮಿತಿ ಅಧ್ಯಕ್ಷರಾಗಿ ಸಂವಿಧಾನ ರಚನೆಯ ಮುಂದಾಳತ್ವ ವಹಿಸಿದ್ದರು. 1949ರ ನ.26ರಂದು ಸಂವಿಧಾನವನ್ನು ದೇಶವು ಅಂಗೀಕರಿಸಿದ್ದು, 1950 ಜನವರಿ 26ರಂದು ಜಾರಿಗೊಂಡಿತು ಎಂದರು.

ಭಾರತಕ್ಕೆ ಉತ್ತಮ ಸಂವಿಧಾನವನ್ನು ಕೊಡುಗೆಯಾಗಿ ನೀಡಿದ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಪ್ರತಿಯೊಬ್ಬರು ಸ್ಮರಿಸಬೇಕು. ಸಂವಿಧಾನದ ಜಾಗೃತಿ ಎಲ್ಲರಿಗೂ ಅಗತ್ಯವಾಗಿದೆ. ಸಂವಿಧಾನದಲ್ಲಿ ನೀಡಿರುವ ಹಕ್ಕುಗಳನ್ನು ಸದುಪಯೋಗ ಮಾಡಿಕೊಳ್ಳುವುದರ ಜೊತೆಗೆ ಕರ್ತವ್ಯಗಳನ್ನು ಸರಿಯಾಗಿ ಪಾಲಿಸಲೇಬೇಕು ಎಂದು ಅವರು ತಿಳಿಸಿದರು.

ಇದೇ ವೇಳೆ ಗಣ್ಯರು ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಪಿ.ದೇವರಾಜು ಅಧ್ಯಕ್ಷತೆ ವಹಿಸಿದ್ದರು.

ಮೈಸೂರು ಮಹಾರಾಜ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ.ವಿ. ಷಣ್ಮುಗಂ, ರಂಗವಾಹಿನಿ ಸಂಸ್ಥೆಯ ಅಧ್ಯಕ್ಷ ಸಿ.ಎಂ.ನರಸಿಂಹ ಮೂರ್ತಿ ಇತರರು ಕಾರ್ಯಕ್ರಮದಲ್ಲಿ ಇದ್ದರು.



ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು.

ಡಾ.ಅಂಬೇಡ್ಕರ್ ಸಂಶೋಧನಾ, ವಿಸ್ತರಣಾ ಕೇಂದ್ರದಲ್ಲಿ ಸಂವಿಧಾನ ದಿನಾಚರಣೆ

ಸರ್ವಕಾಲಕ್ಕೂ ಸಲ್ಲುವಂಥ ಭಾರತೀಯ ಸಂವಿಧಾನ: ಪ್ರೊ.ಬಾಬು ಮ್ಯಾಥ್ಯು ಅಭಿಮತ



ಮೈಸೂರು, ನ.26(ಆರ್‌ಕೆಬಿ)–ಭಾರತೀಯ ಸಂವಿಧಾನ ಸರ್ವಕಾಲಕ್ಕೂ ಸಲ್ಲುವಂಥದ್ದು ಎಂದು ರಾಷ್ಟ್ರೀಯ ಕಾನೂನು ಶಾಲೆಯ ಪ್ರೊ.ಬಾಬು ಮ್ಯಾಥ್ಯು ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸಗಂಗೋತ್ರಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ ಶನಿವಾರ ಸಂವಿಧಾನ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ 'ಭಾರತೀಯ ಸಂವಿಧಾನ ಮತ್ತು ಸಾಮಾಜಿಕ ಪರಿವರ್ತನೆ' ಕುರಿತು ಅವರು ಮಾತನಾಡಿದರು. ವಿವಿಧ ದೇಶಗಳ ಸಂವಿಧಾನ ಬದಲಾಗಿದ್ದರೂ, ಭಾರತ ಸಂವಿಧಾನ ಮಾತ್ರ ಎಲ್ಲ ಕಾಲಕ್ಕೂ ಸಲ್ಲುವಂತಹ ರಚನೆಯಾಗಿದೆ. ಅದಕ್ಕೆ ಕಾರಣ ಶಾಸನ ಸಭೆ. ಸ್ವಾತಂತ್ರ್ಯ ಹೋರಾಟಗಾರರು, ವಿವಿಧ ಸಿದ್ಧಾಂತಗಳ ಹಿನ್ನೆಲೆಯಿಂದ ಬಂದವರು ಶಾಸನಸಭೆಯಲ್ಲಿ ನಡೆಸಿದ ಸಂವಾದ ಹಾಗೂ ಪ್ರಸ್ತಾವಗಳಿಗೆ ಡಾ.ಬಿ.ಆರ್.ಅಂಬೇಡ್ಕರ್ ನೀಡಿದ ಪ್ರೌಢಿಮೆಯ ಸಾಂವಿಧಾನಿಕ ಚೌಕಟ್ಟುಗಳು ಸಾರ್ವಕಾಲಿಕವಾಗಿಸಿವೆ ಎಂದು ತಿಳಿಸಿದರು. ಭಾರತೀಯ ಸಂವಿಧಾನವು ದಕ್ಷಿಣ ಆಫ್ರಿಕಾ, ಬ್ರೆಜಿಲ್ ಸೇರಿದಂತೆ ವಿಶ್ವದ ವಿವಿಧ ದೇಶದ ಸಂವಿಧಾನಗಳಿಗೆ ಮಾರ್ಗದರ್ಶಿ ಸೂತ್ರಗಳನ್ನು ನೀಡಿದೆ. ಈಗಿನ 300 ಮಂದಿ ಬುದ್ಧಿಜೀವಿಗಳು ಕುಳಿತು ರಚಿಸಿದರೂ ಸರ್ವಶ್ರೇಷ್ಠ ಸಂವಿಧಾನ ಹೊರಹೊಮ್ಮುವುದಿಲ್ಲ. ಬಹುತ್ವದ ಭಾರತಕ್ಕೆ ಅಂಬೇಡ್ಕರ್ ಅವರ ಸಂವಿಧಾನವೇ ರಕ್ಷಾ ಕವಚವಾಗಿದೆ ಎಂದು ಹೇಳಿದರು. ನೆಹರೂ ಜನಪ್ರಿಯತೆಯಲ್ಲಿ ಸಂವಿಧಾನದ ಪಾತ್ರವೂ ಇತ್ತು. ನೆಹರೂ ವೈಜ್ಞಾನಿಕ ಸಮಾಜವಾದ ಒಪ್ಪಲಿಲ್ಲ. ದೇಶದ ಅಭಿವೃದ್ಧಿಗೆ ಖಾಸಗಿಯವರೂ ಅಗತ್ಯವೆಂದಿದ್ದರು. ಸಮಾಜವಾದಿ ರಾಷ್ಟ್ರೀಯ ಬಂಡವಾಳಗಾರರ ನಾಯಕರಾಗಿದ್ದರು. ಆದರೆ, ಈಗಿನ ಸರ್ಕಾರವು ಇಸ್ರೋ ಸಹಿತ ಎಲ್ಲ ಲಾಭದಾಯಕ ಸಾರ್ವಜನಿಕ ಉದ್ಯಮಗಳನ್ನು ಖಾಸಗಿಯವರಿಗೆ ವಹಿಸುತ್ತಿದೆ. ಸಂವಿಧಾನದ ಆಶಯಗಳಾದ ಸ್ವಾವಲಂಬನೆ, ಸಮಾಜವಾದ ಮರೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ.ಎಚ್.ರಾಜಶೇಖರ್, ಕೇಂದ್ರದ ನಿರ್ದೇಶಕ ಪ್ರೊ.ಎಸ್.ನರೇಂದ್ರಕುಮಾರ್, ಪ್ರೊ.ಆರ್.ಇಂದಿರಾ, ಪ್ರೊ.ವಿಜಯ್ ಶೇಷಾದ್ರಿ, ಪ್ರೊ.ಜೆ.ಸೋಮಶೇಖರ್ ಉಪಸ್ಥಿತರಿದ್ದರು.

ಇಂದು ವಿವಿಧೆಡೆ ಜಿ.ಟಿ.ದೇವೇಗೌಡರ ಹುಟ್ಟುಹಬ್ಬ ಆಚರಣೆ

ಮೈಸೂರು, ನ.26–ಚಾಮುಂಡೇಶ್ವರಿ ಕ್ಷೇತ್ರದ ಹಾಲಿ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅಭಿಮಾನಿಗಳು ಹಾಗೂ ಜೆಡಿಎಸ್ ಕಾರ್ಯಕರ್ತರು ನಾಳೆ ಮೈಸೂರು ಹೊರ ವಲಯದ ಪೊಲೀಸ್ ಲೇಔಟ್, ಮಾನಸೀನಗರ ಬಿ–ಜೋನ್ ಹಾಗೂ ಕೂರ್ಗಳ್ಳಿಯಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದಾರೆ.

ಈ ವೇಳೆ ಜಿ.ಟಿ.ದೇವೇಗೌಡರನ್ನು ಅಭಿನಂದಿಸುವುದರ ಜೊತೆ ತಮ್ಮ ಅಭಿಮಾನವನ್ನು ಮೆರೆಯಲಿದ್ದಾರೆ. ಕಳೆದ ಎರಡು ದಿನಗಳಿಂದ ಮೈಸೂರು ನಗರವೂ ಸೇರಿದಂತೆ ವಿವಿಧೆಡೆ ಜಿ.ಟಿ.ದೇವೇಗೌಡರ ಹುಟ್ಟುಹಬ್ಬವನ್ನು ಸಂಭ್ರಮದಿಂದ ಅವರ ಅಭಿಮಾನಿಗಳು ಹಾಗೂ ಜೆಡಿಎಸ್ ಮುಖಂಡರು ಆಚರಿಸುತ್ತಿದ್ದಾರೆ.

ಸಿಟಿ ಬಸ್ ಹತ್ತುವಾಗ ಗೃಹಿಣಿಯಿಂದ ಚಿನ್ನಾಭರಣ ಕಳವು

ಮೈಸೂರು, ನ.26–ಸಿಟಿ ಬಸ್ ಹತ್ತುವ ವೇಳೆ ಗೃಹಿಣಿಯ ವ್ಯಾನಿಟಿಬ್ಯಾಗ್‌ನಲ್ಲಿ ಇದ್ದ ಚಿನ್ನಾಭರಣ ದೋಚಿದ ಘಟನೆ ಮೈಸೂರಿನ ನಗರ ಬಸ್ ನಿಲ್ದಾಣದಲ್ಲಿ ನಡೆದಿದೆ. ತಿ.ನರಸೀಪುರ ತಾಲೂಕು ಮಾವಿನಹಳ್ಳಿ ಗ್ರಾಮದ ಗೃಹಿಣಿ ಸೌಮ್ಯಾ(27) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರ ತವರು ಮನೆ ಮೈಸೂರಿನ ನಿಮಿಷಾಂಬ ನಗರದಲ್ಲಿ ಇದ್ದು, ಅವರು ತಮ್ಮ ಮಗಳನ್ನು ಅಲ್ಲಿನ ಖಾಸಗಿ ಶಾಲೆಗೆ ಸೇರಿಸಿದ್ದಾರೆ. ನ.24ರಂದು ಮಾವಿನಹಳ್ಳಿಯಿಂದ ಮೈಸೂರಿಗೆ ಮಗಳನ್ನು ಕರೆದುಕೊಂಡು ಬಂದಿದ್ದ ಅವರು, ನಿಮಿಷಾಂಬನಗರಕ್ಕೆ ಹೋಗುವ ಸಲುವಾಗಿ ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವ ವೇಳೆ ಇವರ ವ್ಯಾನಿಟಿಬ್ಯಾಗ್‌ನಲ್ಲಿ ಇದ್ದ 20 ಗ್ರಾಂ ತೂಕದ ಚಿನ್ನದ ಸರ ಮತ್ತು 500 ರೂ. ನಗದು ಇದ್ದ ಚಿಕ್ಕ ಪರ್ಸ್ ಅನ್ನು ಕಳವು ಮಾಡಲಾಗಿದೆ. ಈ ಸಂಬಂಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕಲಿ ದಾಖಲೆ ಸೃಷ್ಟಿಸಿ ವೃದ್ಧರ ನಿವೇಶನ ಮಾರಾಟ

ಮೈಸೂರು, ನ.26–ವಯೋವೃದ್ಧರೊಬ್ಬರಿಗೆ ಸೇರಿದ ನಿವೇಶನವನ್ನು ನಕಲಿ ದಾಖಲೆ ಸೃಷ್ಟಿಸಿ ಮಾರಾಟ ಮಾಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ವಿವರ: ಮೈಸೂರಿನ ಜೆ.ಪಿ.ನಗರ ನಿವಾಸಿ ಕೆ.ಎನ್.ಶಿವಶಂಕರ ರಾವ್(83) ಎಂಬುವರಿಗೆ 1977ರ ಮೇ 13ರಂದು ಅಂದಿನ ಸಿಐಟಿಬಿಯಿಂದ ಕೆಸರೆ 2ನೇ ಹಂತದ ನಿವೇಶನ ಸಂಖ್ಯೆ 412 (40X60 ಅಡಿ ವಿಸ್ತೀರ್ಣ) ಮಂಜೂರಾಗಿತ್ತು. ಈ ನಿವೇಶನಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಅವರು ಇಂದಿನ ಮುಡಾದಿಂದ ಪಡೆದಿದ್ದಾರೆ. ವಯೋಸಹಜ ಅನಾರೋಗ್ಯದಿಂದಾಗಿ ಅವರು ನಿವೇಶನದ ಬಗ್ಗೆ ಹೆಚ್ಚು ಗಮನ ನೀಡಿರಲಿಲ್ಲ. ಇತ್ತೀಚೆಗೆ ತಮ್ಮ ಪುತ್ರ ಸುಬ್ಬುಕೃಷ್ಣ ಅವರಿಗೆ ನಿವೇಶನವನ್ನು ನೋಂದಾಯಿಸಿಕೊಳ್ಳಲು ಸಬ್ ರಿಜಿಸ್ಟ್ರಾರ್ ಕಚೇರಿಗೆ ಅವರು ಹೋದಾಗ ಸದರಿ ನಿವೇಶನವನ್ನು ಗೌಸಿಯಾ ನಗರ ನಿವಾಸಿ ಮಾವತ್ ತಬ್ರೇಜ್ ಎಂಬಾತ ತಾನು ಜಿಪಿಎ ಹೋಲ್ಡರ್ ಎಂದು ಹೇಳಿಕೊಂಡು ವಾಗ್ದೇವಿನಗರ ನಿವಾಸಿ ಹೆಚ್.ಸಿ.ರಾಧಾ ಎಂಬುವರಿಗೆ ಮಾರಾಟ ಮಾಡಿದ್ದಾನೆ. ಈ ವೇಳೆ ಟಿ.ಕೆ.ಲೇಔಟ್‌ನ ಕೆ.ಎನ್.ಶಿವಶಂಕರ್(77) ಎಂಬಾತ, ತಾನೇ ನಿವೇಶನದ ಮಾಲೀಕ ಶಿವಶಂಕರ ರಾವ್ ಎಂದು ವ್ಯಕ್ತಿಯೋರ್ವ ಕಾರ್ಯನಿರ್ವಹಿಸಿದ್ದಾನೆ ಎಂದು ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮೂರನೇ ಪುಟದಿಂದ

ಕೆಆರ್‌ಎಸ್ ಬೃಂದಾವನ ಬಂದ್



ಗಂಭೀರ ಪ್ರಯತ್ನ ನಡೆದಿಲ್ಲ. ಪ್ರವಾಸಿಗರ ನಿರ್ಬಂಧದಿಂದಾಗಿ ಕಾವೇರಿ ನೀರಾವರಿ ನಿಗಮಕ್ಕೆ ಒಂದು ಕೋಟಿಗೂ ಹೆಚ್ಚು ಆದಾಯ ನಷ್ಟವಾಗಿದೆ ಎಂದು ಹೇಳಲಾಗಿದೆ.

ಚಿರತೆ ಬದಲು ಬೀದಿ ನಾಯಿ ಸೆರೆ: ಚಿರತೆ ಸೆರೆ ಹಿಡಿಯಬೇಕಾದ ಅರಣ್ಯ ಇಲಾಖೆ ಸಿಬ್ಬಂದಿ ಕೆಆರ್‌ಎಸ್ ಸುತ್ತಮುತ್ತಲಿನ ಬೀದಿನಾಯಿಗಳನ್ನು ಸೆರೆ ಹಿಡಿಯುವ ಕಾರ್ಯಕ್ಕೆ ಮುಂದಾಗಿದ್ದಾರೆ. ಈವರೆಗೂ 20ಕ್ಕೂ ಹೆಚ್ಚು ಬೀದಿ ನಾಯಿಗಳ ಸೆರೆ ಹಿಡಿದು ಬೇರೆಡೆಗೆ ಸಾಗಿಸಲಾಗಿದೆ ಎಂದು ಸ್ಥಳೀಯರು ಅಪಹಾಸ್ಯ ಮಾಡಿದ್ದಾರೆ. ಚಿರತೆಗಳಿಗೆ ನಾಯಿಗಳು ಪ್ರಿಯವಾದ ಆಹಾರವಾಗಿದ್ದು, ಚಿರತೆ ಸೆರೆ ಹಿಡಿಯಲು ಅಳವಡಿಸಿರುವ ಬೋನ್‌ಗಳಲ್ಲಿ ಅಧಿಕಾರಿಗಳು ನಾಯಿಗಳನ್ನು ಕಟ್ಟಿಹಾಕಿದ್ದಾರೆ. ಆದರೆ, ಚಿರತೆ ಈವರೆವಿಗೂ ಬೋನ್‌ಗೆ ಬಿದ್ದಿಲ್ಲ. ಕೆಆರ್‌ಎಸ್ ಸುತ್ತಮುತ್ತ ಬೀದಿನಾಯಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಚಿರತೆ ಅದನ್ನು ಬೇಟೆಯಾಡುತ್ತಿದೆಯೇ ಹೊರತು, ಬೋನ್‌ನಲ್ಲಿರುವ ನಾಯಿಯತ್ತ ಸುಳಿಯುತ್ತಲೇ ಇಲ್ಲ. ಹೀಗಾಗಿ ಕೆಆರ್‌ಎಸ್ ಸುತ್ತಮುತ್ತ ಬೀದಿ ನಾಯಿಗಳು ಇಲ್ಲದಿದ್ದರೆ ಆಹಾರಕ್ಕಾಗಿ ಚಿರತೆ ಬೋನ್‌ನಲ್ಲಿ ಕಟ್ಟಿಹಾಕಿರುವ ನಾಯಿ ಬೇಟೆಗೆ ಬಂದು ಬೋನ್‌ನಲ್ಲಿ ಸಿಲುಕಿಕೊಳ್ಳುತ್ತದೆ ಎಂದು ಕಾವೇರಿ ನೀರಾವರಿ ನಿಗಮ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳ ಲೆಕ್ಕಾಚಾರ ಎಂದು ಹೇಳಲಾಗುತ್ತಿದೆ. ಈ ಕಾರಣದಿಂದಲೇ ಬೀದಿ ನಾಯಿಗಳ ಸೆರೆಗೆ ಅರಣ್ಯ ಇಲಾಖೆ ಸಿಬ್ಬಂದಿ ಮುಂದಾಗಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.

'ಘನತೆಗೆ ಧಕ್ಕೆ'!

ಆದರೂ ಕೂಡ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಹಾಗೂ ಜಿಲ್ಲೆಯವರೇ ಆದ ಶಾಸಕ ಕೆ.ಸಿ.ನಾರಾಯಣಗೌಡ ಇದರ ಬಗ್ಗೆ ತಲೆಕೆಡಿಸಿಕೊಳ್ಳದೇ ತಮಗೂ ಇದಕ್ಕೂ ಸಂಬಂಧವೇ ಇಲ್ಲವೆಂಬಂತೆ ವರ್ತಿಸುತ್ತಿರುವುದು ದೊಡ್ಡ ದುರಂತ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಹೇಳಿದರು. ಸಚಿವರು ಮಾತ್ರವಲ್ಲದೇ ಹಿರಿಯ ಅಧಿಕಾರಿಗಳೂ ಕೂಡ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ. ಕೇವಲ ತಾಲೂಕು ಮಟ್ಟದ ಅಧಿಕಾರಿಗಳು ಮಾತ್ರ ಚಿರತೆ ಸೆರೆ ಬಗ್ಗೆ ಗಮನಹರಿಸುತ್ತಿದ್ದಾರೆ. ಅದು ಪರಿಣಾಮಕಾರಿಯಾಗುತ್ತಿಲ್ಲ. ಕಾವೇರಿ ನೀರಾವರಿ ನಿಗಮ ಮತ್ತು ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ಇತ್ತ ಗಮನಹರಿಸ ಬೇಕು. ತಜ್ಞರ ಸಲಹೆ ಪಡೆದು ಶೀಘ್ರದಲ್ಲೇ ಚಿರತೆ ಸೆರೆ ಹಿಡಿದು ಕೆಆರ್‌ಎಸ್ ಬೃಂದಾವನವನ್ನು ಪ್ರವಾಸಿಗರಿಗೆ ಮುಕ್ತಗೊಳಿಸಬೇಕು. ಈ ಸಂಬಂಧ ತಾವು ಸೋಮವಾರ ಕೆಆರ್‌ಎಸ್‌ಗೆ ತೆರಳಿ ಅಧಿಕಾರಿಗಳೊಂದಿಗೆ ಚರ್ಚಿಸುವುದಾಗಿ ತಿಳಿಸಿದರು.

ಮೈಸೂರು ಪೇಂಟ್ & ವಾರ್ನಿಷ್ ಲಿಮಿಟೆಡ್ ಅಮೃತ ಮಹೋತ್ಸವ

ಮುಖ್ಯಮಂತ್ರಿಗಳಿಂದ ನಾಳೆ ಉದ್ಘಾಟನೆ

ಸುದ್ದಿಗೋಷ್ಠಿಯಲ್ಲಿ ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ ವಿವರಣೆ



ಮೈಸೂರು, ನ.26(ಆರ್‌ಕೆಬಿ)– ಮೈಸೂರಿನ ಬನ್ನಿಮಂಟಪದಲ್ಲಿರುವ ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್ (ಮೈಲ್ಯಾಕ್) 75 ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ ನ.28ರಂದು ಮಧ್ಯಾಹ್ನ 3 ಗಂಟೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 75ನೇ ವರ್ಷದ ಅಮೃತ ಮಹೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

ಮೈಲ್ಯಾಕ್ ಅಧ್ಯಕ್ಷ ಕೌಟಿಲ್ಯ ರಘು ಅವರು ಶನಿವಾರ ಬೆಳಗ್ಗೆ ಮೈಲ್ಯಾಕ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಪತ್ರಕರ್ತರಿಗೆ ಕಾರ್ಯಕ್ರಮದ ಮಾಹಿತಿ ನೀಡಿದರು. ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಕಲಾಮಂದಿರದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ, ಪೌರಾಡಳಿತ, ಸಣ್ಣ ಕೈಗಾರಿಕೆ ಸಾರ್ವಜನಿಕ ಉದ್ಯಮಗಳ ಸಚಿವ ಎನ್.ನಾಗರಾಜ್ (ಎಂಟಿಬಿ ನಾಗರಾಜ್), ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್, ಸಂಸದರಾದ ಪ್ರತಾಪ್‌ಸಿಂಹ, ವಿ.ಶ್ರೀನಿವಾಸಪ್ರಸಾದ್, ಸುಮಲತಾ ಅಂಬರೀಶ್, ಮೇಯರ್ ಶಿವಕುಮಾರ್ ಇನ್ನಿತರರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್‌ನ ಪ್ರಯಾಣವನ್ನು ಸ್ಮರಿಸಿದ ಅವರು, ಮೈಸೂರಿನ ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1937ರಲ್ಲಿ ಬನ್ನಿಮಂಟಪದಲ್ಲಿ ಮೈಸೂರು ಬಣ್ಣದ ಕಾರ್ಖಾನೆಯನ್ನು ಸ್ಥಾಪಿಸಿದರು. ನಂತರ ಅದು 1947ರಲ್ಲಿ ಆಗಿನ ಮೈಸೂರು ಸರ್ಕಾರದ ನಿಯಂತ್ರಣಕ್ಕೆ ಬಂದಿತು. ಇದನ್ನು ಮೈಸೂರು ಲ್ಯಾಕ್ ಅಂಡ್ ಪೇಂಟ್ಸ್ ಲಿಮಿಟೆಡ್ ಎಂದು ಹೆಸರಿಸಲಾಯಿತು.

1989ರಲ್ಲಿ ವಾರ್ನಿಷ್ ತಯಾರಿಕೆಯನ್ನು ಪ್ರಾರಂಭಿಸಿದಾಗ ಕಾರ್ಖಾನೆಯನ್ನು ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್ (ಎಂಪಿವಿಎಲ್) ಎಂದು ಮರುನಾಮಕರಣ ಮಾಡಲಾಯಿತು. ಅಳಿಸಲಾಗದ ಶಾಯಿ ತಯಾರಿಕೆ ಪ್ರಕ್ರಿಯೆ ಜೊತೆಗೆ ರಾಷ್ಟ್ರೀಯ ಭೌತಿಕ ಪ್ರಯೋಗಾಲಯ ರೂಪಿಸಿದ ರಾಸಾಯನಿಕ ಸೂತ್ರವನ್ನು ಆಧರಿಸಿದೆ ಎಂದರು. ಆಗಿನ ಮೈಲ್ಯಾಕ್ ಅನ್ನು ಅಳಿಸ ಲಾಗದ ಶಾಯಿಯ ತಯಾರಿಕೆಗಾಗಿ ಭಾರತ ಸರ್ಕಾರವು ಆಯ್ಕೆ ಮಾಡಿತು. ಈ ಶಾಯಿಯನ್ನು ಮೊದಲು ಭಾರತದ ಮೂರನೇ ಸಾರ್ವತ್ರಿಕ ಚುನಾವಣೆಯಲ್ಲಿ ಬಳಸಲಾಯಿತು. ದೇಶದಲ್ಲಿ ಅಳಿಸಲಾಗದ ಶಾಯಿ ಯನ್ನು ಉತ್ಪಾದಿಸುವ ಏಕೈಕ ಸಂಸ್ಥೆ ಇದಾಗಿದೆ. ಥೈಲ್ಯಾಂಡ್, ಮಲೇಷ್ಯಾ, ಸಿಂಗಾಪುರ್, ಕಾಂಬೋಡಿಯಾ, ನೈಜೀರಿಯಾ, ದಕ್ಷಿಣ ಆಫ್ರಿಕಾ, ಅಫ್ಘಾನಿಸ್ತಾನ ಸೇರಿದಂತೆ ಹಲವಾರು ದೇಶಗಳಲ್ಲಿ ಚುನಾವಣೆಯ ಅಗತ್ಯ ಶಾಯಿಗಳನ್ನು ಪೂರೈಸುತ್ತಿದೆ. ಈ ಅಳಿಸಲಾಗದ ಶಾಯಿಯನ್ನು ಹೊಂದಿರುವ ಮಾರ್ಕರ್ ಪೆನ್‌ಗಳ, ರಾಸಾಯನಿಕ–ನಿರೋಧಕ ಬಣ್ಣಗಳು, ಎನಾಮೆಲ್‌ಗಳು ಪ್ರೈಮರ್‌ಗಳು, ಡಿಸ್ಟೆಂಪರ್‌ಗಳು, ಸೀಲಿಂಗ್ ವ್ಯಾಕ್ಸ್ ಮತ್ತು ಪಾಲಿಶ್‌ಗಳನ್ನು ಸಹ ತಯಾರಿಸುತ್ತದೆ. ಸೀಲಿಂಗ್ ವ್ಯಾಕ್ಸ್ ಅನ್ನು ಭಾರತೀಯ ಅಂಚೆ ಮತ್ತು ಚುನಾವಣಾ ಆಯೋಗವು ಮತಪೆಟ್ಟಿಗೆಗಳನ್ನು ಮುಚ್ಚಲು ಬಳಸುತ್ತದೆ ಎಂದು ತಿಳಿಸಿದರು.



ಷೇರು ಬಂಡವಾಳ: ಪ್ರಸ್ತುತ ಕರ್ನಾಟಕ ಸರ್ಕಾರವು ಶೇ 91.39 ರಷ್ಟು ಷೇರುಗಳನ್ನು (ಷೇರಿನ ಮೌಲ್ಯ ರೂ 94,73,000) ಮತ್ತು ಸಾಮಾನ್ಯ ಸಾರ್ವಜನಿಕರು ಶೇ 8.61 (ಷೇರಿನ ಮೌಲ್ಯ ರೂ 8,87,500) ಹೊಂದಿದೆ ಎಂದ ಅವರು, ಸಂಸ್ಥೆಯು 2021–22ನೇ ಸಾಲಿನಲ್ಲಿ 32ಕೋಟಿ ರೂ. ವಹಿವಾಟು ನಡೆಸಿದ್ದು, 6.80 ಕೋಟಿಯಷ್ಟು ಲಾಭ ಗಳಿಸಿತು. 2021–22ನೇ ಸಾಲಿನಲ್ಲಿ ಷೇರುದಾರರಿಗೆ ಶೇ.30ರಷ್ಟು ಲಾಭಾಂಶವನ್ನು ಘೋಷಿಸಿದ್ದು, ಈ ಪೈಕಿ ಸರ್ಕಾರದ ಪಾಲು ರೂ. 28.40 ಲಕ್ಷಗಳನ್ನು ಸರ್ಕಾರಕ್ಕೆ ನೀಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಕುಮಾರಸ್ವಾಮಿ ಉಪಸ್ಥಿತರಿದ್ದರು.

ಕಂಪನಿಯ ಭವಿಷ್ಯದ ಯೋಜನೆಗಳು: 75ನೇ ವರ್ಷಾಚರಣೆ (ಅಮೃತ ಮಹೋತ್ಸವ) ಸಂದರ್ಭದಲ್ಲಿ ಕಂಪನಿಯು ಉನ್ನತೀಕರಣ ಮತ್ತು ಆಧುನೀಕರಣಗೊಳಿಸಲು ಉದ್ದೇಶಿಸಿದೆ. ಸರ್ಕಾರದ ಸಂಸ್ಥೆಗಳೊಡನೆ ಇ–ಮಾರ್ಕೆಟ್ ಮಾಡಲು ಇರುವ GeM (governments e-marketplace) ಎಂಬ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಲಾಗಿದೆ. ಕಂಪನಿಯಲ್ಲಿ ಪ್ರತ್ಯೇಕ 'ಸಂಶೋಧನೆ ಮತ್ತು ಅಭಿ ವೃದ್ಧಿ' ಕೇಂದ್ರ ಸ್ಥಾಪನೆಗೆ ಕ್ರಮ ವಹಿಸಲಾಗುತ್ತಿದೆ. ಕಂಪನಿಯ ಉತ್ಪನ್ನಗಳಿಗೆ ಐಎಸ್ಐ ಮುದ್ರೆ ಪಡೆಯುವುದು, ಭಾರತೀಯ ರೈಲ್ವೆ ಇಲಾಖೆಯ ಸಂಶೋಧನಾ ವಿನ್ಯಾಸ ಮತ್ತು ಸಂಸ್ಥೆಯ ಪ್ರಮಾಣಪತ್ರವನ್ನು, ಕಂಪನಿಯ ಉತ್ಪನ್ನಗಳಿಗೆ ಪಡೆಯುವುದು ಮತ್ತು ನವದೆಹಲಿಯಲ್ಲಿರುವ ASRTU (Association of State Road Transport Undertakings) ಸಂಸ್ಥೆಯಲ್ಲಿ ಕಂಪನಿಯ ಹೆಸರನ್ನು ನೋಂದಾಯಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಕೌಟಿಲ್ಯ ರಘು ತಿಳಿಸಿದರು.

ನಾಳೆ ನಂಜನಗೂಡಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಸಿಎಂ ಬೊಮ್ಮಾಯಿ ಚಾಲನೆ



ಮೈಸೂರು, ನ.26(ಎಂಟಿವೈ)– ನಂಜನಗೂಡು ತಾಲೂಕಲ್ಲಿ ಕೈಗೊಂಡಿರುವ ವಿವಿಧ ಅಭಿವೃದ್ಧಿಯ ಕಾಮಗಾರಿಗಳಿಗೆ ನ.28ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಹಿಂದೆ ನಂಜನಗೂಡು ಕ್ಷೇತ್ರ ಪ್ರತಿನಿಧಿಸಿದ್ದವರು ಕ್ಷೇತ್ರದ ಅಭಿವೃದ್ಧಿಗೆ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಚುನಾವಣಾ ಕಾರಣದಿಂದ ಕೇವಲ ಆಶ್ವಾಸನೆ ನೀಡುತ್ತಿದ್ದರು. ಆದರೆ ತಾವು ಬದ್ಧತೆಯಿಂದ ಕೆಲಸ ಮಾಡುತ್ತಿರುವ ಕಾರಣ ಹಲವಾರು ಯೋಜನೆ ಜಾರಿಗೊಂಡಿವೆ. ನ.28ರಂದು ಬೆಳಗ್ಗೆ 10.30ಕ್ಕೆ ನಂಜನಗೂಡಿನ ಶ್ರೀಶ್ರೀಕಂಠೇಶ್ವರ ದೇವಸ್ಥಾನಕ್ಕೆ ಸರ್ಕಾರದಿಂದ ಮಂಜೂರಾಗಿರುವ ವಿವಿಧ ಕಾಮಗಾರಿಗಳ ಗುದ್ದಲಿ ಪೂಜೆ, ನುಗು ಏತ ನೀರಾವರಿ ಯೋಜನೆಗೆ ಚಾಲನೆ ಹಾಗೂ ಯಡಿಯಾಲ ಭಾಗದ 13 ಕೆರೆಗಳಿಗೆ ನೀರು ತುಂಬಿಸುವ ಯೋಜನೆ, ಗೋಳೂರು (ಗೀಕಹಳ್ಳಿ) ಗ್ರಾಮದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ವಿದ್ಯುತ್ ಉಪ ಕೇಂದ್ರಗಳ ಶಂಕುಸ್ಥಾಪನೆ, ನಗರೋತ್ಥಾನ ಹಂತ–4 ರಲ್ಲಿ ನಂಜನಗೂಡು ನಗರಸಭಾ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ, ನಗರೋತ್ಥಾನ ಹಂತ–3ರಲ್ಲಿ ಗೌರಿಘಟ್ಟದ ಬೀದಿಯಲ್ಲಿರುವ ನಾಯಕ ಸಮುದಾಯ ಭವನ ಹಾಗೂ ತಾಲೂಕು ಮಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಸಮುದಾಯ ಭವನದ ಉದ್ಘಾಟನಾ ಸಮಾರಂಭ ನೆರವೇರಿಸಲಿದ್ದಾರೆ ಎಂದರು. ಶ್ರೀಕಂಠೇಶ್ವರ ದೇವಸ್ಥಾನದ ಆವರಣದಲ್ಲಿ ಈ ಎಲ್ಲಾ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನಾ ಕಾರ್ಯಕ್ರಮ ಆಯೋಜಿಸಲಾಗಿದೆ. ಶಾಸಕ ಬಿ.ಹರ್ಷವರ್ಧನ್ ಅಧ್ಯಕ್ಷತೆ ವಹಿಸಲಿರುವ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ. ಸಂಸದ ವಿ.ಶ್ರೀನಿವಾಸ ಪ್ರಸಾದ್ ಹಾಗೂ ಸಚಿವರುಗಳು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನಗರಸಭೆ ಅಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ ಶಂಕ್ರಪ್ಪ, ಶ್ರೀನಿವಾಸರೆಡ್ಡಿ ಹಾಗೂ ಮಹೇಶ್ ಇದ್ದರು.

ವಿಭಿನ್ನ ಮನರಂಜನೆ ಕಾರ್ಯಕ್ರಮ



ಮೈಸೂರು, ನ.26– ಮೈಲಾಕ್ ಅಮೃತ ಮಹೋತ್ಸವದ ಅಂಗವಾಗಿ ವಿಭಿನ್ನ ಮನರಂಜನ ಕಾರ್ಯಕ್ರಮ ಆಯೋಜಿಸಲಾಗಿದ್ದು, ರಾಘವೇಂದ್ರ ಆಚಾರ್ಯ ಅವರಿಂದ ಹಾಸ್ಯ, ರಘುಲೀಲಾ ಸಂಗೀತ ಶಾಲೆಯ ಸುನೀತಾ ಚಂದ್ರಕುಮಾರ್ ತಂಡದವರಿಂದ ಗೀತ ನಮನ, ಖ್ಯಾತ ಗಾಯಕ ರಾಮಚಂದ್ರ ಹಡಪದ ಅವರಿಂದ ಸುಗಮ ಸಂಗೀತ, ನೃತ್ಯ ಗಿರಿ ಶಾಲೆಯ ಕೃಪಾ ಫಡ್ಕೆ ತಂಡದವರಿಂದ ನೃತ್ಯ ರೂಪಕ ಹಾಗೂ ಖ್ಯಾತ ಗಾಯಕಿ ಶುಭಾ ರಾಘವೇಂದ್ರ ತಂಡದವರಿಂದ ಗೀತ ರಂಜನೆ ಪ್ರಸ್ತುತಗೊಳ್ಳಲಿದೆ.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ



ಮೈಸೂರು,ನ.26(ಎಂಟಿವೈ)–ನಾಯಕ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಾಯಕ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳ ಸನ್ಮಾನಿಸಲಾಯಿತು. ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿ ಗಳಾದ ಸಿಂಚನ ಹಾಗೂ ರಕ್ಷಿತಾ, ಸಾಹಿತಿ ಕಳಲೆ ಜವರನಾಯಕ ಮತ್ತು ಜಿಲ್ಲಾ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿದ ಪಡುವಾರಹಳ್ಳಿ ರಾಮಕೃಷ್ಣ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಕನ್ನಡಪರ ಹೋರಾಟಗಾರ ಶಿವಶಂಕರ್, ಮುಖಂಡರಾದ ಸುರೇಶ್, ಪಿ. ನಾಗಲಿಂಗಪ್ಪ, ಕೆಂಚೇಗೌಡ, ಸುರೇಶ್ ಉಪಸ್ಥಿತರಿದ್ದರು.

ಐಎನ್‌ಟಿಯುಸಿ ಪದಾಧಿಕಾರಿಗಳ ಪದಗ್ರಹಣ



ಮೈಸೂರು, ನ.26(ಎಸ್‌ಪಿಎನ್)– ಇಂಡಿಯನ್ ನ್ಯಾಷನಲ್ ಟ್ರೇಡ್ ಯುನಿಯನ್ ಕಾಂಗ್ರೆಸ್ (ಐಎನ್‌ಟಿಯುಸಿ) ಮೈಸೂರು ಘಟಕದ ಜಿಲ್ಲಾಧ್ಯಕ್ಷರಾಗಿ ಡಿ. ಡೇರಿಕ್ ಮೆಲ್ವಿನ್, ರಾಜ್ಯ ಉಪಾಧ್ಯಕ್ಷರಾಗಿ ನಾಗರಾಜು ಸೇರಿದಂತೆ 30ಕ್ಕೂ ಹೆಚ್ಚು ಪದಾಧಿಕಾರಿಗಳು ಕಾಂಗ್ರೆಸ್ ಧ್ವಜ ಹಿಡಿದು ಶನಿವಾರ ಪದಗ್ರಹಣ ಮಾಡಿದರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಇಂಡಿಯನ್ ನ್ಯಾಷನಲ್ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಫಾರಸ್ಟ್ ಮತ್ತು ವುಡ್ ವರ್ಕರ್ಸ್ ಫೆಡರೇಷನ್ ವತಿಯಿಂದ ಆಯೋಜಿಸಿದ್ದ ಪದಗ್ರಹಣ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ನೂತನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ಪಕ್ಷದ ಧ್ವಜ ನೀಡಿ, ಅಧಿಕಾರ ಹಸ್ತಾಂತರಿಸಿದರು.

ಇಂದು ದೇಶಾದ್ಯಂತ 'ಸಂವಿಧಾನ ದಿನಾಚರಣೆ'ಯನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಈ ದಿನವನ್ನು ಕಾಂಗ್ರೆಸ್ ನಾಯಕರು, ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ ಹಾಗೂ ಸಂವಿಧಾನ ಪ್ರಸ್ತಾವನೆ ಪ್ರತಿ ಪೋಸ್ಟ್ ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಜನತೆಗೆ ಶುಭಾ ಹಾರೈಸಿದರೆ, ಬಿಜೆಪಿಯ ಕೆಲ ನಾಯಕರು ಬರೀ ಸಂವಿಧಾನದ ಪ್ರಸ್ತಾವನೆ ಪ್ರತಿ ಪೋಸ್ಟ್ ಹಾಕಿ ಶುಭಾಶಯ ಕೋರಿದ್ದರು. ಇದು ಸಣ್ಣ ವಿಷಯವಾದರೂ ನಮ್ಮ ಪಕ್ಷದ ಸಿದ್ಧಾಂತ ಇದರಲ್ಲೇ ತೋರುತ್ತದೆ. ಇದರ ಬಗ್ಗೆ ಕಾರ್ಯಕರ್ತರು ಗಮನಹರಿಸಿ, ಜನತೆಗೆ ತಿಳಿಸುವ ಕೆಲಸ ಮಾಡಬೇಕು ಎಂದರು. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಕೇಂದ್ರದ ಮಾಜಿ ಸಚಿವ ಜಾರ್ಜ್ ಫರ್ನಾಂಡಿಸ್ ಸೇರಿದಂತೆ ಇತರೆ ಮುಖಂಡರು, ಕಳೆದ 40 ವರ್ಷಗಳ ಹಿಂದೆ ಕಾರ್ಮಿಕರ ಪರವಾಗಿ ಬೃಹತ್ ಹೋರಾಟ ಮಾಡಿದ್ದರು. ಇದರ ಫಲವಾಗಿ ಕಾಂಗ್ರೆಸ್ ಪಕ್ಷದ ಅಧಿಕಾರಾವಧಿಯಲ್ಲಿ ಕಾರ್ಮಿಕರ ಪರವಾಗಿ ಅನೇಕ ಯೋಜನೆಗಳನ್ನು ಜಾರಿಗೆ ತರಲಾಯಿತು.

ಈ ವೇಳೆ ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಐಎನ್‌ಬಿ ಡಬ್ಲ್ಯೂಎಫ್ ರಾಜ್ಯಾಧ್ಯಕ್ಷ ಜಿ.ಆರ್.ದಿನೇಶ್, ನಗರ ಪಾಲಿಕೆ ಸದಸ್ಯ ಪ್ರದೀಪ್ ಕುಮಾರ್, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಮೈಸೂರು ನಗರ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್, ಅಖಿಲ ಕರ್ನಾಟಕ ಮಲ್ಲಿಕಾರ್ಜುನ ಖರ್ಗೆ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಸಿ.ನರೇಂದ್ರ, ಮೈಸೂರು ನಗರ ಕಾಂಗ್ರೆಸ್ ಸಮಿತಿಯ (ಶಿಕ್ಷಕ ಮತ್ತು ಪದವೀಧರ ಘಟಕ) ಅಧ್ಯಕ್ಷ ಆರ್.ರಾಘವೇಂದ್ರ, ಯುವ ಘಟಕದ ಅಧ್ಯಕ್ಷ ದೊನಾಲ್ಡ್, ನಗರಾಧ್ಯಕ್ಷ ಮೊಹಮ್ಮದ್ ಹ್ಯಾರಿಸ್, ವಿದ್ಯಾರ್ಥಿ ಘಟಕದ ಅಧ್ಯಕ್ಷ ಮನೋಜ್ ಹಾಜರಿದ್ದರು.

ಮುಖ್ಯಮಂತ್ರಿಗಳಲ್ಲಿರುವ ಹಣಕಾಸು ಇಲಾಖೆಯಲ್ಲಿ

ಭಾರೀ ಭ್ರಷ್ಟಾಚಾರ ನಡೆಯುತ್ತಿದೆ

- ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಆರೋಪ
- ಕೂಡಲೇ ಪ್ರತ್ಯೇಕ ಸಚಿವರ ನಿಯೋಜನೆಗೆ ಆಗ್ರಹ

ಮೈಸೂರು,ನ.26(ಎಂಟಿವೈ)– ಮುಖ್ಯಮಂತ್ರಿಗಳ ಬಳಿಯೇ ಇರುವ ಹಣಕಾಸು ಇಲಾಖೆಯಲ್ಲಿ ದೊಡ್ಡ ಭ್ರಷ್ಟಾಚಾರವೇ ನಡೆಯುತ್ತಿರುವ ಹಿನ್ನೆಲೆಯಲ್ಲಿ ಕೂಡಲೇ ಪ್ರತ್ಯೇಕ ಸಚಿವರನ್ನು ನಿಯೋಜಿಸುವಂತೆ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಒತ್ತಾಯಿಸಿದ್ದಾರೆ. ಮೈಸೂರಿನ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಣಕಾಸು ಇಲಾಖೆಯಲ್ಲಿ, ಮುಖ್ಯಮಂತ್ರಿಗಳ ಮೂಗಿನ ಕೆಳಗೆ ಭ್ರಷ್ಟಾಚಾರ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ತಮ್ಮ ಬಳಿ ಇರುವ ಹಣಕಾಸು ಖಾತೆಯನ್ನು ಬೇರೊಬ್ಬರಿಗೆ ನೀಡಬೇಕು. ವಿನಿಯೋಗದ ಪವರ್ ಇಟ್ಟುಕೊಂಡರೂ ಸಂಪನ್ಮೂಲ ಕ್ರೋಢಿಕರಣದ ಮೇಲೆ ನಿಗಾ ಇಡಲು ಬೇರೆಯವರಿಗೆ ವಹಿಸುವ ಅನಿವಾರ್ಯತೆ ಇದೆ. ರಾಜ್ಯದ ಹಣಕಾಸು ಇಲಾಖೆ 1.20 ಲಕ್ಷ ಕೋಟಿ ರೂ. ಆದಾಯ ಸಂಗ್ರಹವಾಗುವ ಇಲಾಖೆಯಾಗಿದೆ. ಆದರೆ, ಸಂಪನ್ಮೂಲ ಸಂಗ್ರಹಿಸುವ ಇಲಾಖೆಯಲ್ಲೇ ದೊಡ್ಡ ಭ್ರಷ್ಟಾಚಾರ ನಡೆಯುತ್ತಿದೆ. ಹಣಕಾಸು ಇಲಾಖೆಯ ಪ್ರಗತಿ ಪರಿಶೀಲನೆ ಮಾಡಲು ಸಾಧ್ಯವಾಗದೇ ಇರುವುದರಿಂದ ಆದಾಯ ಸೋರಿಕೆಯಾಗುತ್ತಿದೆ. ಮುಖ್ಯಮಂತ್ರಿಗಳ ಅಧೀನದಲ್ಲಿ ಏಳೆಂಟು ಇಲಾಖೆಗಳಿವೆ. ಇವುಗಳನ್ನು ನಿರ್ವಹಿಸಲು ಸಾಧ್ಯವಾಗದೆ ಅವೆಲ್ಲವೂ ಸತ್ತು ಹೋಗಿವೆ. ಹಾಗಾಗಿ, ಪ್ರತ್ಯೇಕ ಸಚಿವರನ್ನು ನೇಮಕ ಮಾಡುವುದು ಅನಿವಾರ್ಯ ಎಂದು ಆಗ್ರಹಿಸಿದರು.

ಜಿಎಸ್‌ಟಿಗೆ ವಿರೋಧ: ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರಾಷ್ಟ್ರಪಿತ ಮಹಾತ್ಮಗಾಂಧೀಜಿ ಉಪ್ಪಿನ ಮೇಲೆ ತೆರಿಗೆ ವಿಧಿಸುವುದನ್ನು ವಿರೋಧಿಸಿದ್ದರು. ಆದರೆ, ಈಗ ಉಪ್ಪಿಗೂ ಜಿಎಸ್‌ಟಿ ವಿಧಿಸಲಾಗುತ್ತಿದೆ. ತಂಬಾಕು ಉತ್ಪನ್ನಗಳ ಮೇಲೆ ಶೇ.28ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. 100 ಕೋಟಿ ರೂ.ಗೆ 70 ಕೋಟಿ ರೂ. ಜಿಎಸ್‌ಟಿ ಆಗುತ್ತಿರುವ ಕಾರಣ ಕಳ್ಳದಾರಿಯಲ್ಲಿ ಸಾಗಿಸಲಾಗುತ್ತಿದೆ. ತಮಿಳುನಾಡು, ಆಂಧ್ರ ಪ್ರದೇಶದಲ್ಲಿ ನಿಷೇಧ ಹೇರಿರುವ ಕಾರಣ ಕರ್ನಾಟಕದಲ್ಲಿ ಭಾರೀ ಬೇಡಿಕೆಯಾಗಿದೆ. ಹಾಗಾಗಿ, ಕಳ್ಳದಾರಿಯಲ್ಲಿ ಸಾಗಿಸಲು ಅಧಿಕಾರಿಗಳೇ ದಾರಿ ತೋರಿಸುತ್ತಿದ್ದಾರೆ. ಆದಾಯ ಸಂಗ್ರಹವಾಗುವ ವಾಣಿಜ್ಯ ತೆರಿಗೆ ಇಲಾಖೆಯಲ್ಲೇ ಭ್ರಷ್ಟಾಚಾರ ನಡೆಯುತ್ತಿರುವುದು ಆತಂಕದ ವಿಚಾರ ಎಂದರು.



ಸಿಂಡಿಕೇಟ್ ವರ್ಗಾವಣೆ: ಅರಣ್ಯ ಇಲಾಖೆಯಲ್ಲಿ ಅಧಿಕಾರಿಗಳ ವರ್ಗಾ ವಣೆಗೆ ಸಿಂಡಿಕೇಟ್ ಮಾಡಿಕೊಂಡಿದ್ದನ್ನು ಈ ಹಿಂದೆ ಸಚಿವನಾಗಿದ್ದ ವೇಳೆ ನಾನೇ ರದ್ದು ಮಾಡಿದ್ದೆ. ಈಗ ಸಾರಿಗೆ, ವಾಣಿಜ್ಯ ಇಲಾಖೆಗಳಲ್ಲಿ ಸಿಂಡಿ ಕೇಟ್ ಮಾಡಿಕೊಂಡು ತಮ್ಮ ಹಿಡಿತದಲ್ಲಿಟ್ಟು ಕೊಂಡಿದ್ದಾರೆ. ಅಧಿಕಾರದಲ್ಲಿರುವಾಗ ಸಚಿವರು, ಮುಖ್ಯಮಂತ್ರಿ ಸುಳ್ಳು ಹೇಳಬಾರದು. ಆದರೆ, ಅಧಿಕಾರಿ ಗಳು ತಾವು ಸುಳ್ಳು ಹೇಳುವುದರೊಂದಿಗೆ ಸಚಿವರಿಂದಲೂ ಸುಳ್ಳು ಹೇಳಿಸುತ್ತಿದ್ದಾರೆ ಎಂದು ಟೀಕಿಸಿದರಲ್ಲದೆ, ಬಡವರಿಗೆ ತೆರಿಗೆ ವಿಧಿಸುವ ಸರ್ಕಾರ ಅದಾನಿ, ಅಂಬಾನಿಗೂ ವಿಧಿಸಬೇಕು. ಆದರೆ, ಅವರೇ ಸರ್ಕಾರ ನಡೆಸುತ್ತಿರುವ ಕಾರಣ ಅವರಿಗೆ ಯಾರು ಟ್ಯಾಕ್ಸ್ ಹಾಕುತ್ತಾರೆ ಹೇಳಿ ಎಂದು ಪ್ರಶ್ನಿಸಿದರು.

ಶಿಕ್ಷಣ ಕೇಸರೀಕರಣ: ಪ್ರಾಥಮಿಕ ಮತ್ತು ಕಾಲೇಜು ಶಿಕ್ಷಣವನ್ನು ಹರಣ ಮಾಡಲಾಗುತ್ತಿದೆ. ಮಾಜಿ ಸಿಎಂ ಎಸ್.ಎಂ.ಕೃಷ್ಣ ಅವರ ಸರ್ಕಾರದಲ್ಲಿ ಸಮುದಾಯದತ್ತ ಶಾಲಾ ಕಾರ್ಯಕ್ರಮವನ್ನು ತಂದಿದ್ದಾಗ ಇಡೀ ಅಧಿಕಾರಿಗಳು ಒಂದು ಊರಿನಲ್ಲಿ ವಾಸ್ತವ್ಯ ಹೂಡುತ್ತಿದ್ದರು. ಈಗ ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ಕೇಸರಿಮಯ ಮಾಡಲು ಬಣ್ಣ ಬಳಿಯಲಾಗುತ್ತಿದೆ. ಪಕ್ಷದ ತತ್ವ ಸಿದ್ಧಾಂತವನ್ನು ಮಕ್ಕಳ ಮನಸ್ಸಿನ ಮೇಲೆ ಹೇರುವಂತಹ ಕೆಲಸ ಮಾಡಲಾಗುತ್ತಿದೆ. ವಿವೇಕ, ವಿವೇಚನೆ ಮತ್ತು ದೂರದೃಷ್ಟಿತ್ವದಿಂದ ಕೆಲಸ ಮಾಡುವ ಬದಲಿಗೆ ಪ್ರಾಥಮಿಕ ಶಿಕ್ಷಣ ವ್ಯವಸ್ಥೆ ಯನ್ನು ಹಾಳುಗೆಡವಲಾಗುತ್ತಿದೆ. ಮೊದಲು ಇದಕ್ಕೆ ಕಡಿವಾಣ ಹಾಕಬೇಕು ಎಂದರು.

ನಕಲಿ ಪಿಹೆಚ್.ಡಿ: ವಿವಿಗಳನ್ನು ವಿಭಜನೆ ಮಾಡಿ ಮತ್ತೆ ಒಂಬತ್ತು ವಿವಿಗಳನ್ನು ಸ್ಥಾಪಿಸಲಾಗುತ್ತಿದೆ. ಈ ವೇಳೆ ಒಬ್ಬರ ಪಿಹೆಚ್.ಡಿ ಪದವಿ ಪ್ರಮಾಣ ಪತ್ರ ನಕಲು ಎಂದು ತಿರಸ್ಕರಿಸಿದ್ದರೂ ಅವರನ್ನೇ ಕುಲಪತಿಯನ್ನಾಗಿ ನೇಮಿಸಲಾಗಿದೆ. ಐದು ಕೋಟಿ ರೂ.ಕೊಟ್ಟವರನ್ನು ಕುಲಪತಿಯನ್ನಾಗಿ ನೇಮಿಸಲಾಗುತ್ತಿದೆ. ವಿವಿಗಳಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಕ್ಕೆ ಅಧಿಕಾರವನ್ನು ಕುಲಪತಿಗಳಿಂದ ವಾಪಸ್ ಪಡೆದು, ಪ್ರತ್ಯೇಕ ಮಂಡಳಿ ರಚನೆ ಮಾಡಬೇಕು. ಐದಾರು ಕೋಟಿ ರೂ. ಕೊಟ್ಟು ಕುಲಪತಿಯಾಗಿ ಬರುವವರು ಜನರನ್ನು ತುಂಬಿ ಹಣ ವಸೂಲಿ ಮಾಡುವಂತಾಗಿದೆ ಎಂದು ಟೀಕಿಸಿದರು.

ಮತದಾರರನ್ನು ನೆನಪಿಸಿಕೊಳ್ಳಿ: ರಾಜ್ಯದಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ಬರುತ್ತೇವೆಂದು ಅಂಕಿ ಸಂಖ್ಯೆಗಳನ್ನು ಹೇಳುತ್ತಿರುವ ಮುಖಂಡರು, ಮೊದಲು ಮತದಾರರನ್ನು ನೆನಪಿಸಿಕೊಳ್ಳಿ ಎಂದು ವಿಶ್ವನಾಥ್ ಟಾಂಗ್ ಕೊಟ್ಟರು. ಬಿಜೆಪಿಯವರು ಮಿಷನ್ 150 ಅಂದರೆ, ಕಾಂಗ್ರೆಸ್ ನಾಯಕರು 140ಪ್ಲಸ್ ಎನ್ನುತ್ತಿದ್ದಾರೆ. ಜಾ.ದಳದವರು 123 ಸ್ಥಾನಗಳನ್ನು ಗೆಲ್ಲುತ್ತೇವೆ ಅಂತಿದ್ದಾರೆ. ಆದರೆ, ಮತದಾರರಿಂದ ನಮಗೆ ಇಷ್ಟು ಸ್ಥಾನಗಳು ಬರಲಿವೆ ಎನ್ನುವ ಮಾತನ್ನಾಡುತ್ತಿಲ್ಲ ಎಂದು ಟೀಕಿಸಿದರು.

ಸಿದ್ದರಾಮಯ್ಯ ಯಾವುದೇ ಕ್ಷೇತ್ರದಲ್ಲಿ ನಿಂತರೂ ಗೆಲ್ತಾರೆ

ಮೈಸೂರು, ನ.26(ಎಂಟಿವೈ)–ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ಕ್ಷೇತ್ರದಲ್ಲಿ ಸ್ಪರ್ಧಿಸಿದರೂ ಗೆದ್ದೇ ಗೆಲ್ಲುತ್ತಾರೆ. ಕೋಲಾರದಲ್ಲಿ ಸ್ಪರ್ಧಿಸುವ ವಿಚಾರ ತಿಳಿದು ಕೆಲವರು ಸಿದ್ದರಾಮಯ್ಯ ವಿರುದ್ಧ ಅ... ಆ... ಇ... ಈ.... ಪ್ರಾರಂಭಿಸಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ವ್ಯಂಗ್ಯವಾಡಿದ್ದಾರೆ.


ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಚಾಮುಂಡೇಶ್ವರಿಯಲ್ಲಿ ಸೋಲಿಸಿದ ಹಾಗೆ ತಂತ್ರ ರೂಪಿಸುವ ಕಾರ್ಯ ಈಗೀಗ ಪ್ರಾರಂಭವಾಗುತ್ತಿದೆ. ಆದರೆ ಸಿದ್ದರಾಮಯ್ಯ ಯಾವುದೇ ಕ್ಷೇತ್ರದಲ್ಲಿ ನಿಂತರೂ ಗೆಲ್ಲುತ್ತಾರೆ. ಕೋಲಾರ ಅಥವಾ ವರುಣಾದಲ್ಲಿ ಸ್ಪರ್ಧಿಸಿದರೂ ಗೆಲ್ಲಲಿದ್ದಾರೆ. ಅದರಲ್ಲಿ ಏನು ವಿಶೇಷವಿಲ್ಲ ಎಂದು ಹೇಳುವ ಮೂಲಕ ಸಿದ್ದರಾಮಯ್ಯ ಬಗ್ಗೆ ಸಾಫ್ಟ್ ಕಾರ್ನರ್ ಬಿಂಬಿಸಿ, ಆಶ್ಚರ್ಯವನ್ನುಂಟು ಮಾಡಿದರು.

ನಮ್ಮೂರಿನವರು ಎದುರಿಗೆ ಸಿಕ್ಕಿದ್ದಾಗ ಚೆನ್ನಾಗಿದ್ದೀಯಾ ಅಂತ ಕೇಳಿದರೆ, ಚೆನ್ನಾಗಿಲ್ಲ ಎನ್ನಲು ಸಾಧ್ಯವೇ. ಸಿದ್ದರಾಮಯ್ಯ ಗೆಲ್ಲುತ್ತಾರೆ ಅಂತ ಹೇಳಿದರೆ ತಪ್ಪೇನೂ ಇಲ್ಲ. ಮಲ್ಲಿಕಾರ್ಜುನ ಖರ್ಗೆ ಹಿರಿಯ ನಾಯಕರು. ಅದೇ ರೀತಿ ಸಿದ್ದರಾಮಯ್ಯ, ಡಾ. ಜಿ.ಪರಮೇಶ್ವರ್ ಕೂಡ ಸ್ನೇಹಿತರೇ ಆಗಿದ್ದಾರೆ. ಹಾಗೆಂದ ಮಾತ್ರಕ್ಕೆ ಕಾಂಗ್ರೆಸ್ ಸೇರುತ್ತೇನೆಂದು ಹೇಳುವವರಿಗೆ ಏನಂಥ ಹೇಳಬೇಕು ಎಂದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ
ಭಾನುವಾರ
27-11-2022





ಲೈಕ್ ಬರೀ ಮಾಯೆ

ಒಂದಂತೂ ಸತ್ಯ ಈಗ ನಿಮ್ಮ ಬಳಿಗೆ ನಾನು ತಲುಪುತ್ತಿರುವುದು ಈ ಸಮೂಹ ಮಾಧ್ಯಮದಿಂದಲೇ ಎಂದು ಮೊದಲೇ ಹೇಳಿ ಬಿಡುತ್ತಿದ್ದೇವೆ. ಏಕೆಂದರೆ ನೀತಿ ಹೇಳುವವರು ಎಂದೂ ನೀತಿ ಮೀರಬಾರದು. ಅದಕ್ಕಾಗಿ ಕ್ಷಮಾಪಣೆಯಲ್ಲಿಯೇ ಈ ಲೇಖನವನ್ನು ಸಾದರಪಡಿಸಲು ನಿಮ್ಮ ಮುಂದೆ ಬಂದು ನಿಂತು ಒಂದಷ್ಟು ವಿಚಾರವನ್ನು ವಿಹಂಗಮವಾಗಿ ವಿವರಿಸುವ ಹಂಚಿಕೊಳ್ಳುವ ಸಣ್ಣ ಪ್ರಯತ್ನ ಮಾಡುತ್ತಿದ್ದೇನೆ.

ಆಧುನಿಕ ಜಗತ್ತಿನಲ್ಲಿ ಹರಿದಾಡುತ್ತಿರುವ ಸಾಮಾನ್ಯ ವಿಚಾರ ಅಥವಾ ಪದವೆಂದರೆ ಲೈಕ್. ಇದೇನು ಕೇವಲ ಒಂದು ಪದಕೋಸ್ಕರ ಒಂದು ಲೇಖನ ಬರೆಯುವುದು ಸಾಧ್ಯವೇ ಎಂಬ ಪ್ರಶ್ನೆ ನಿಮ್ಮಲ್ಲಿ ಉದ್ಭವಿಸಿದರೆ, ಅದಕ್ಕೆ ಉತ್ತರ ಹೌದು ಇವತ್ತಿನ ಯುಗಮಾನಕ್ಕೆ ಖಂಡಿತ ಸಾಧ್ಯವಿದೆ ಎಂದು ಧೈರ್ಯವಾಗಿ ಹೇಳುತ್ತೇನೆ.

ಏಕೆಂದರೆ ಮನುಷ್ಯನಾದವನು ಮಾತ್ರವೇ ಪ್ರಚಾರದ ಬೆನ್ನು ಹತ್ತಿ ತಾನು ತನ್ನ ಇರುವಂತಿಕೆಯ ಚಿರ ಮುದ್ರೆಯನ್ನು ಒತ್ತಲು ಹೇಗೆಲ್ಲ ಸಾಧ್ಯವೋ ಆ ಮಟ್ಟದಲ್ಲಿ ಸಾವಕಾಶವನ್ನು ಪಡೆದು ಅಲ್ಲೆಲ್ಲ ನುಸುಳಲು ಪ್ರಯತ್ನಿಸುತ್ತಾನೆ. ಅಂತೆಯೇ ಆಧುನಿಕ ಸಮೂಹ ಮಾಧ್ಯಮಗಳ ಹಾವಳಿ ಆದ ಮೇಲಂತೂ ಈ ಪ್ರಚಾರದ ಗೀಳು ಇನ್ನೂ ಹೆಚ್ಚಾಗಿ ಹುಚ್ಚಿನಂತಾಗಿದೆ. ತಾವು ಯಾವುದೋ ಸಂದರ್ಭದಲ್ಲಿ ಕ್ಲಿಕ್ಕಿಸಿದ ಫೋಟೋವನ್ನೋ, ಅಗತ್ಯ ಮಾಹಿತಿಯಾಗಿದ್ದರೂ ಸರಿಯೇ ಅನಗತ್ಯ ಮಾಹಿತಿಯಾಗಿದ್ದರೂ ಸರಿಯೇ ಅದರ ಒಂದು ತುಣುಕನ್ನು ಪೋಸ್ಟ್ ಮಾಡಿ ಎಷ್ಟು ಲೈಕ್ಸ್ ಬಂದಿವೆ, ಎಷ್ಟು ಜನ ನೋಡಿದ್ದಾರೆ ಎಂಬುದನ್ನು ತಿಳಿದುಕೊಳ್ಳುವ ಕಾತರತೆ ವ್ಯಕ್ತಿಯ ಮನವನ್ನು ಹೊಕ್ಕಿರುವುದು ಇವತ್ತಿನ ಸಂದರ್ಭದಲ್ಲಿ ಸರ್ವೆ ಸಾಮಾನ್ಯವಾದ ಸಂಗತಿಯಾಗಿದೆ.

ಯಾವುದೋ ಹೋಟೆಲಿಗೆ ಹೋಗಿ ಯಾವುದಾದರೂ ಆಹಾರ ಸೇವಿಸಿದರೆ ಒಂದು ಫೋಟೋ, ಗಿಡ ನೆಟ್ಟರೆ, ಅಪರೂಪಕ್ಕೆ ಜಮೀನಿಗೆ ತೆರಳಿದ್ದು ಕೃತಕವಾಗಿಯೂ, ನಾಮಕಾವಸ್ಥೆಗೆ ಗುದ್ದಲಿ ಹಿಡಿದು ಕೆಲಸ ಮಾಡುತ್ತಿರುವುದರ ಒಂದು ಫೋಟೋ, ವಿಶೇಷ ಖಾದ್ಯ ತಯಾರಿಸಿದಾಗಲೊಂದು ಫೋಟೋ, ಕೆಮ್ಮಿದಾಗ, ಕ್ಯಾಕರಿಸಿದಾಗ, ಮದುವೆ ಮನೆಗಳಲ್ಲಂತೂ ಈ ಫೋಟೋಗಳ ಹಾವಳಿ ಸಾಕಷ್ಟು, ಪರೀಕ್ಷೆಗಳಲ್ಲಿ ಪಾಸಾದರೆ ಒಂದು ಫೋಟೋ, ನಪಾಸಾದರೆ ಒಂದು ಫೋಟೋ, ತಾವು ಹೀರೋ ಎಂದು ಮಾದರಿಯಾಗಿಟ್ಟುಕೊಂಡಿರುವ ನಾಯಕ ನಟ/ನಟಿಯೊಂದಿಗಿನ ಫೋಟೋ, ತಾವಿರುವ ನೈಜ ರೂಪಕ್ಕಿಂತ ಆಕರ್ಷಣೆಯಾಗಿ ಕಾಣುವ ಭಂಗಿಯಲ್ಲಿ ತರಾವರಿ ಕಾಣುವಂತೆ ಸೆಳೆಯುವ ಯುವಕ ಮತ್ತು ಯುವತಿಯರ ರೂಪವನ್ನು ವಿರೂಪಗೊಳಿಸಿಯಾದರೂ ಇಲ್ಲವೇ ವಿಜೃಂಭಣೆಗೊಳಿಸಿಯಾದರೊಂದು ಛಾಯಾಚಿತ್ರವನ್ನು ಪರದೆಗೆ ಸೇರ್ಪಡೆಗೊಳಿಸುವ ಚಟಕೆ ಬಿದ್ದಿರುವುದು ಈ ಜಗತ್ತಿನ ಪ್ರಸ್ತುತ ಪ್ರತಿಷ್ಠೆಯ ಕಣವಾಗಿದೆ.

'ಐ ಲೈಕ್ ಯು; 'ಪುಟ್ಟ ನಿನ್ನನ್ನು ತುಂಬಾ ಇಷ್ಟ ಪಡುತ್ತಿದ್ದೇನೆ' ಎಂದು ಹೇಳಲು ನೂರು ಬಾರಿ ಯೋಚಿಸಿ ಹೇಳಬೇಕಾದ ಮಾತು. ಹಾಗೆ ಹೇಳಲು ನಾಲಿಗೆಯಿಂದ ಪದಗಳು ಹೊರಗೆ ಕಡೆಯದೆ ಮುಜುಗರ ಮತ್ತು ಹಿಂಜರಿಕೆಯಿಂದ ಹಿಂದೆ ಸರಿಸಿದ ಇಲ್ಲವೇ ಗಂಟಲಲ್ಲೇ ಸತ್ತು ಹೋದ ಎಷ್ಟೋ ಉದಾಹರಣೆಗಳು ಸಿಗಬಹುದು. ಆದರೆ ಇಂದು ಯಾವುದೇ ಮುಜುಗರ ಸಂಕೋಚವಿಲ್ಲದೆ ಅನರ್ಥದಲ್ಲು ಅರ್ಥಹೀನವಾಗಿ ಲೈಕನ್ನು ಲೈಕ್ ಮಾಡಿರುವುದನ್ನು ಕಾಣುತ್ತೇವೆ. ಆದ್ದರಿಂದ ಇಂದು ನಮ್ಮೆಲ್ಲರನ್ನು ಆಕರ್ಷಕ ಮತ್ತು ರೋಮಾಂಚನಕ್ಕೆ ಒಳಪಡಿಸಿರುವ ಪದವೇ ಲೈಕ್. ಆಧುನಿಕ ಜಗತ್ತಿನಲ್ಲಿ ಬ್ರಹ್ಮಾಂಡವೇ ಅಣು ಗಾತ್ರವಾಗಿರುವಾಗ ಬೆರಳ ತುದಿಯಲ್ಲಿ ಲೋಕವನ್ನೇ ಕುಣಿಸುತಾ ತಾನು ಕೂಡ ಉನ್ಮತ್ತ ನಾಟ್ಯದಲ್ಲಿ ಕುಣಿದು ಕುಪ್ಪಳಿಸಿ ಒಕ್ಕಲೆಬ್ಬಿಸುವ ಆಟದಲ್ಲಿ ಮನಸ್ಥಿತಿಗಳು ಕಾರ್ಯ ಪ್ರವೃತ್ತವಾಗಿವೆ. ಈಗಿನ ಪೀಳಿಗೆ ವಿಪರೀತ ತೋರಿಕೆಯ ಗೀಳಿಗೆ ಬಿದ್ದು ಒದ್ದಾಡುವಂತಾಗಿದೆ. ಪ್ರಚಾರ, ಲೈಕ್, ಶೇರ್, ಕಮೆಂಟ್ ಈ ಬಗೆಯ ಪದಗಳು ಎಲ್ಲಾ ಕಡೆಗಳಲ್ಲು ತಲೆ ತಿರುಗಿ ಮೆರೆಯುತ್ತಿವೆ. ಸಮೂಹ ಮಾಧ್ಯಮದ ಗೀಳಿನಲ್ಲಿ ಒಂದಷ್ಟು ಮಾಹಿತಿಯ ಹಂಚಿಕೆಯೊಂದಿಗೆ ಇನ್ನು ಉಳಿದಂತೆ ಕಸವನ್ನೇ ತುರುಕುವ, ಮನವನ್ನು ರಾಡಿ ಮಾಡುವ ವಿಷಪೂರಿತ ಬೀಜವನ್ನು ಬಿತ್ತಿ ಹೃದಯದ ನೆಮ್ಮದಿಯನ್ನು ಕದಡುವ, ಮೆದುಳನ್ನು ಕಲುಷಿತಗೊಳಿಸುವ ಪ್ರಯತ್ನ ಮೇರೆ ಮೀರಿ ನಡೆದು ಬಲೆಗೆ ಸಿಲುಕಿದ ಮೃಗದಂತೆ ಬಾಳು ಹಳ್ಳ ಹಿಡಿಯುತ್ತಿದೆ. ಒಂದಂತೂ ಸತ್ಯ ಈಗ ನಿಮ್ಮ ಬಳಿಗೆ ನಾನು ತಲುಪುತ್ತಿರುವುದು ಈ ಸಮೂಹ ಮಾಧ್ಯಮದಿಂದಲೇ ಎಂದು ಮೊದಲೇ ಹೇಳಿ ಬಿಡುತ್ತಿದ್ದೇವೆ. ಏಕೆಂದರೆ ನೀತಿ ಹೇಳುವವರು ಎಂದೂ ನೀತಿ ಮೀರ ಬಾರದು. ಅದಕ್ಕಾಗಿ ಕ್ಷಮಾಪಣೆಯಲ್ಲಿಯೇ ಈ ಲೇಖನವನ್ನು ಸಾದರಪಡಿಸಲು ನಿಮ್ಮ ಮುಂದೆ ಬಂದು ನಿಂತು ಒಂದಷ್ಟು ವಿಚಾರವನ್ನು ವಿಹಂಗಮವಾಗಿ ವಿವರಿಸುವ ಹಂಚಿಕೊಳ್ಳುವ ಸಣ್ಣ ಪ್ರಯತ್ನ ಮಾಡುತ್ತಿದ್ದೇನೆ.

ಇಂದು ಪ್ರತಿಯೊಬ್ಬರು ಒಂದಲ್ಲ ಒಂದು ಬಗೆಯಲ್ಲಿ ತಾನು ಏನು, ಏನು ಮಾಡುತ್ತಿರುವೆ, ಎಲ್ಲಿರುವೆ ಮತ್ತು ಹೇಗೆ ಇರುವೆ ಎಂದು ಜಗತ್ತಿಗೆ ತೋರಿಸುವ, ಪ್ರವಾಸಕ್ಕೆ ತೆರಳಿದಾಗ ತುತ್ತ ತುದಿ ಇಲ್ಲವೇ ಇರುವಂತಹ ಅಲ್ಲಿನ ವಸ್ತು ವಿಶೇಷಗಳೊಂದಿಗೆ ಗುರುತಿಸಿಕೊಳ್ಳುವ, ಟಿಕ್ ಟಾಕ್ ಎಂಬುದರಲ್ಲಿ ವಿಕಟವಾಗಿ ನಗುವ, ಮನೆಯ ಪಾತ್ರೆಗಳೊಂದಿಗೆ ಕಾದಾಡುವ, ಕಂದಮ್ಮನ ನಗುವಿನ ಅಲೆಯಲ್ಲಿ ಅಲೆದಾಡುವ ಹೀಗೆ ಸದ್ಯಕಿದು ಹುಚ್ಚರ ಸಂತೆ ಎಂಬಂತೆ ಪ್ರಚಾರದ ಹಂಬಲ ಬೆಳೆದು ಅದನ್ನು ಸಮೂಹ ಮಾಧ್ಯಮದ ವಿವಿಧ ಬಗೆಯ ಪ್ರಚಾರದ ಹೊಣೆ ಹೊತ್ತಿರುವ ರೂವಾರಿಗಳ ಮೂಲಕ ಹಂಚಿಕೊಂಡು ಒಂದಾದರೂ ಬೆಂಬಲ ಪಡೆಯುವ ಸ್ಪರ್ಧೆಯ ಗೀಳಿಗೆ ಬಿದ್ದಿದ್ದೇವೆ.

ಚಿಕ್ಕ ಚಿಕ್ಕ ಕೆಲಸಗಳು, ಯಾವುದೋ ಒಂದು ಮಾಹಿತಿಯ ವಿಚಾರವನ್ನು ವಾಟ್ಸ್ಆಪ್‌ನ ಸ್ಟೇಟಸ್ ಇಲ್ಲವೇ ಮುಖಪುಸ್ತಕ ಇಲ್ಲವೇ ಇಸ್ಟಾಗ್ರಾಮ್ ಇಲ್ಲವೇ ಟೆಲಿಗ್ರಾಮ್ ಅಲ್ಲಿ ಒಂದು ಪೋಸ್ಟ್ ಮಾಡಿದ್ದರೆ ಪ್ರತಿ ಕ್ಷಣಕ್ಕೂ ಅದನ್ನೇ ನೋಡುತ್ತಿರುವುದು, ತಾನು ಸ್ಟೇಟಸ್‌ಗೆ ಹಾಕಿರುವ ಮಾಹಿತಿ ಅಥವಾ ಪೋಸ್ಟನ್ನು ಎಷ್ಟು ಜನ ನೋಡಿದ್ದಾರೆ, ಎಷ್ಟು ಜನ ಇಷ್ಟ ಪಟ್ಟಿದ್ದಾರೆ ಎಂದು ಕಾದು ನೋಡುವ ಪ್ರವೃತ್ತಿ ಗಣನೀಯವಾಗಿ ಹೆಚ್ಚಾಗುತ್ತಿದೆ. ಈ ಎಲ್ಲ ಬಗೆಯ ಪ್ರಚಾರದ ತೋರಿಕೆಯನ್ನು ಹಂಚಿಕೆಯಲ್ಲಿ ಇರುವ ಸಂಗತಿ ಏನು ಎಂದು ನಮ್ಮನ್ನು ನಾವೇ ನೋಡಿಕೊಂಡರೆ, ಪ್ರಶ್ನಿಸಿಕೊಂಡರೆ ಪ್ರಸ್ತುತದಲ್ಲಿ ಮಾದರಿಯಾಗಿ ಸ್ವೀಕರಿಸಿರುವ ಸಿನಿಮಾ ನಟ-ನಟಿಯರು, ಕ್ರಿಕೆಟಿಗರು, ರಾಜಕಾರಣಿಗಳು, ರೌಡಿಗಳು ಇವರೆಲ್ಲ ಪ್ರಚಾರಪ್ರಿಯತೆಯನ್ನು ಪೋಷಿಸುತ್ತಿದ್ದಾರೆ. ನಾವು ಅದಕ್ಕೆ ಇಲ್ಲ ಸಲ್ಲದ ವಿಚಾರಗಳಿಗೆಲ್ಲ ಗದ್ದಲವನ್ನು ಹುಟ್ಟಿಹಾಕಿ ಈ ಜಗತ್ತಿಗೆ ಸೇರಿಸಿ ಮನ ಬಂದಂತೆ ಕುಣಿಸುತ್ತಿದ್ದಾರೆ. ಇಂದಿನ ಯುವ ಮನಸ್ಸುಗಳು ಕೂಡ ಇಂಥವರನ್ನೇ ಮಾದರಿಯಾಗಿ ಸ್ವೀಕರಿಸಿ ಮೌಢ್ಯದಲ್ಲಿ ಕುರುಡು ಕುರುಡಾಗಿ ಅನುಕರಿಸುವ ಹೀನ ಪ್ರವೃತ್ತಿಯೊಂದು ಕವಲೊಡೆದಿದೆ. ಟ್ವಿಟರ್ ಪ್ರಾರಂಭವಾದಾಗ ಫೇವರೇಟ್ ಅನ್ನುವ ಒಂದು ಪದ ಇಂದು ತನ್ನ ಅಸ್ತಿತ್ವವನ್ನು ಕಳೆದುಕೊಂಡು ವಿಸ್ತಾರತೆಯಲ್ಲಿ ಅಲ್ಲಿಯವರು ಆ ಪದವನ್ನು ಕೂಡ ಲೈಕ್ ಅನ್ನೋದನ್ನೇ ಮಾಡಿ ಬಿಟ್ಟಿದ್ದಾರೆ,

ಒಂದು ರೀತಿಯಲ್ಲಿ ನಾವೆಲ್ಲರೂ ಪ್ರಚಾರದ ರಾಯಭಾರಿಗಳಂತೆ ಆಗಿದ್ದೇವೆ. ಸಹಜವಾಗಿ ಬದುಕುವ ಬದುಕು ಎಂದೋ ದೂರವಾದಂತೆ ಅನ್ನಿಸುತ್ತಿದೆ. ಮತ್ತೊಬ್ಬರಂತೆ ಜೀವಿಸುವ, ಮತ್ತೊಬ್ಬರಿಗಾಗಿ ಜೀವಿಸುವ ಕೊಟ್ಟಿದ್ದು ಅಲ್ಪವಾದರೂ ಅದನ್ನೇ ವಿಪರೀತವಂತೆ ಪ್ರಚಾರಕ್ಕೆ ಗುರಿಪಡಿಸುವ ಚಾಳಿ ಅವ್ಯಾಹತವಾಗಿ ನಡೆಯುತ್ತಲೇ ಇದೆ ಈ ಬಗೆಯ ಮನುಷ್ಯರನ್ನು ಕಂಡೇ ಡಿವಿಜಿ ಅವರು ಹೀಗೆ ಹೇಳುತ್ತಾರೆ.

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ,
ಫಲ ಮಾಗುವಂದು ತುತ್ತೂರಿ ದನಿಯಿಲ್ಲ
ಬೆಳಕೀವ ಸೂರ್ಯಚಂದ್ರದೊಂದು ಸದ್ದಿಲ್ಲ
ಹೊಲಿ ನಿನ್ನ ತುಟಿಗಳನು– ಮಂಕುತಿಮ್ಮ

ಈ ಕಗ್ಗವು ಮನುಷ್ಯನ ಪ್ರಚಾರದ ಬಗೆಗೆ ಕಡಿವಾಣ ಹಾಕಲೇಬೇಕು ಎಂದು ಹೇಳುವಂತಿದೆ. ಭೂವಿಂದ ಮೊಳಕೆಯು ಮೇಲೆದ್ದು ಬರುವಾಗ ತಮಟೆಯ ಸದ್ದಿಲ್ಲ, ಹಣ್ಣು ಮಾಗಿ ಪಕ್ವವಾಗುವಾಗ ಯಾವ ತುತ್ತೂರಿಯನ್ನು ಊದುವುದಿಲ್ಲ, ಬೆಳಕನ್ನು ನೀಡುವ ಸೂರ್ಯ-ಚಂದ್ರರು ಸಹ ಯಾವ ಸದ್ದೂ ಮಾಡುವುದಿಲ್ಲ, ಆದ್ದರಿಂದ ಪ್ರಕೃತಿಯಲ್ಲಿ ಘಟಿಸುವ ಈ ಎಲ್ಲವೂ ನಿರಂತರವಾಗಿ ಸಹಜತೆಯಲ್ಲಿ ನಡೆದೇ ಹೋಗುತ್ತಿರುವಾಗ ಮಾನವ ಮಾತ್ರ ತನ್ನ ನಾಮ, ಇಲ್ಲವೇ ಕೀರ್ತಿ, ಇಲ್ಲವೇ ಗೌರವ ಅಲ್ಲದೇ ಹೋದರೂ ಪರವಾಗಿಲ್ಲ ಒಂದಷ್ಟು ಮನಸ್ಸುಗಳು ನನ್ನನ್ನು ಗುರುತಿಸಬೇಕು, ಒಂದಷ್ಟು ಮನಸ್ಸುಗಳನ್ನು ನಾನಾ ರೀತಿಯಲ್ಲಾದರೂ ಗಮನಿಸಬೇಕು, ಅದಕ್ಕಾಗಿಯಾದರೂ ಏನಾದರೂ ಮಾಡಬೇಕು. ಒಟ್ಟಿನಲ್ಲಿ ಒಂದಲ್ಲ ಒಂದು ಬಗೆಯಲ್ಲಿ ತಮ್ಮನ್ನು ತೋರಿಸಿಕೊಳ್ಳುವ ಪ್ರವೃತ್ತಿಗೆ ಬಿದ್ದು ಒದ್ದಾಡುವಂತಾಗಿದೆ. ತೋರಿಕೆಯ ಮನೋಭಾವ ಮತ್ತೊಂದು ಬಗೆಯಲ್ಲಿ ವ್ಯಕ್ತವಾಗುವುದು ಉಂಟು ಹೇಗೆಂದರೆ ಅನುಕರಣೆ. ಅಂಧಾನುಕರಣೆಯಲ್ಲಿ ಮತ್ತೊಬ್ಬರ ಜೀವನ ಶೈಲಿಯನ್ನು ಅನುಸರಿಸುತ್ತಾ ಅವರಂತೆ ನಟಿಸಲು ಬದುಕಿಗೆ ಬಣ್ಣ ಬಳಿದು ಒಲ್ಲದ ಕೃತಕ ರೂಪ ಕೊಡಲು ಹೋಗಿ ಬದುಕೇ ಬರ್ಬರ ಹತ್ಯೆಯಾಗಲು ಮುಂದಾಗಿರುವುದು ಸಾಮಾನ್ಯ ಸಂಗತಿ. ಅಂತೆಯೇ ಇನ್ನೊಬ್ಬರಂತೆ ಬದುಕುವ ಪ್ರತಿಷ್ಠೆಯ ಗುಂಗಿನ ಜೀವನದ ದಾಸರಾಗಿ ಸಾಲ ಮಾಡಿಯಾದರೂ ಸರಿಯೇ ತುಪ್ಪ ತಿನ್ನು ಎಂಬಂತೆ ಸಾಲಕ್ಕೆ ಕೈ ಚಾಚಿ ಬದುಕನ್ನು ಕಣ್ಣೀರ ಕಡಲಾಗಿಸಿಕೊಳ್ಳುವುದು ಸರಿಯೇ?. ಪಕ್ಕದ ಮನೆಯಲ್ಲಿ ಯಾವುದೋ ಒಂದು ವಸ್ತುವನ್ನು ಖರೀದಿ ಮಾಡಿದ್ದಾರೆ ಅದೇ ತರಹದ ವಸ್ತುವನ್ನು ತಾನು ಖರೀದಿ ಮಾಡಬೇಕು ಅದರದೊಂದು ಚಿತ್ರಪಟ, ರೇಷ್ಮೇ ಸೀರೆ, ಒಡವೆ ವಸ್ತ್ರ, ಮನೆ ಬಳಕೆಯ ವಸ್ತುಗಳು, ವಿಲಾಸಿ ಜೀವನಕ್ಕೆ ಸಾಕ್ಷೀಕರಿಸುವ ಸರಕುಗಳು, ವಾಹನಗಳು ಈ ಎಲ್ಲವೂ ಬಂದಿವೆ ವ್ಯಕ್ತಿಯನ್ನು ಕೈ ಮಾಡಿ ಕರೆಯುತ್ತಿವೆ. ಅವನ್ನು ಹೇಗಾದರೂ ಖರೀದಿಸುವ ಮಂದಿಗಳು ಹಿಂದೆ ಬಿದ್ದಿಲ್ಲ ಇಂತಹ ವಸ್ತುಗಳಿಗೆ ಮಾರು ಹೋದ ಜನ ಕೊಂಡೇ ಕೊಳ್ಳುತ್ತಾರೆ ಮತ್ತು ಅವುಗಳಿಂದ ತಮ್ಮ ಪ್ರತಿಷ್ಠೆ ಹೆಚ್ಚಾಗುವಂತೆ ಮಾಡಿಕೊಳ್ಳುವುದು ಸರ್ವೆ ಸಾಮಾನ್ಯ ಸಂಗತಿಯಾಗಿದೆ. ಈ ಬಗೆಯಲ್ಲಿ ಹೇಳಿದ ಮಾತ್ರಕ್ಕೆ ಯಾವುದನ್ನು ಖರೀದಿಸುವುದು ಬೇಡವೇ ಎಂದು ಕೇಳಿದರೆ ಹೌದು ಖರೀದಿಸಬೇಕು ನಿಜ ಆದರೆ ಏನು ಮಾಡುವುದು ಅವಕಾಶವಿಲ್ಲದಿದ್ದರೂ ಅನುಕರಣೆ ಮಾಡಿ ಬದುಕನ್ನು ರೌರವ ನರಕವಾಗಿಸುವ ಪರಿಸ್ಥಿತಿ ಇಂದು ವಿಪರೀತವಾಗುತ್ತಿದೆ.

ಪ್ರಚಾರದ ಗೀಳು ಆಧುನಿಕ ಸಮಾಜದಲ್ಲಿ ಅದು ಹೇಗಾದರೂ ಸರಿಯೇ ಒಂದು ಮಟ್ಟದಲ್ಲಿ ಪ್ರಚಾರಬೇಕೆಂಬ ಹಪಾಹಪಿತನ ನಮ್ಮನ್ನು ಸದಾ ಜಾಗೃತಗೊಳಿಸುತ್ತಲೇ ಇರುತ್ತದೆ. ಸಮೂಹ ಮಾಧ್ಯಮಗಳ ಹಾವಳಿ ಹೆಚ್ಚಾದ ಮೇಲಂತೂ ಮನುಷ್ಯ ತನ್ನನ್ನು ಹೇಗಾದರೂ ಮಾಡಿ ಒಳ್ಳೆಯತನದಿಂದಲಾದರೂ ಇಲ್ಲವೇ ಅಡ್ಡದಾರಿಯಿಂದಲಾದರೂ ತಮ್ಮ ಚಹರೆಯ ಚಿರಮುದ್ರೆಯನ್ನು ಒತ್ತಲು ನಿಂತಿರುವುದು ವಿಪರ್ಯಾಸವೇ ಸರಿ. ಏನಾಗಿದ್ದೇವೆ ಏನು ಮಾಡುತ್ತಿದ್ದೇವೆ ಅದನ್ನು ಹೇಳಿಕೊಳ್ಳುವ, ಹಂಚಿಕೊಳ್ಳುವ ಮತ್ತು ಎಲ್ಲರ ಪ್ರೀತಿಗೆ ಪಾತ್ರವಾಗಿ ಮನ್ನಣೆ ಗಳಿಸುವ ಉದ್ದೇಶದಿಂದಲೇ ಹೊಟೇಲಿಗೆ ಹೋದರೆ ಒಂದು ಸ್ಟೇಟಸ್, ಸಿನಿಮಾಕ್ಕೆ ಹೋದಾಗಲೊಂದು ಸ್ಟೇಟಸ್ ಹೀಗೆ ತಮ್ಮ ವಿವಿಧ ರೂಪ-ಸ್ವರೂಪ-ವಿಶ್ವರೂಪದ ವಿರಾಟ ಪ್ರದರ್ಶನಗಳ ದೃಶ್ಯ ಇಲ್ಲವೇ ಚಿತ್ರಪಟಗಳ ದಾಖಲೆಗಳನ್ನು ದಾಖಲಿಕರಿಸುವ ಚಾಳಿ ದಾಳಿ ಇಟ್ಟಿದೆ.



ಹೆಸರುಸಿರು ನರನಿಗೆ ಬೇಕೆ-ಬೇಕು,
ಅದೇ ಅವನಿಗೆ ಬದುಕು-ಬೆಳಕು,
ತೋರಿಕೆಗೆ-ಗುರುತಿಗೆ, ನಿಸರ್ಗದಿ-ಸಹಜದಿ
ಯಾವುದಕ್ಕೂ ಅಂಕಿತವಿಲ್ಲದೆ ಪ್ರಚಾರವಿಲ್ಲದೆ ನಡೆದಿದೆ-ನಡೆಯುತ್ತಿದೆ
ಅಂದು-ಇಂದು-ಮುಂದು ಎಂದಳು ನನ್ನವ್ವ ಸಾಕವ್ವ

ನಾವು ಒಂದು ಕ್ಷಣ ಕುಳಿತು ಆಲೋಚನೆಗೆ ನಮ್ಮ ಮನವನ್ನು ಒಗ್ಗಿಸಿಕೊಂಡಿದ್ದೇ ಆದರೆ ಶತ ಶತಮಾನಗಳಿಂದ ಹಾದು ಬಂದಿರು ಪರಂಪರೆ, ಸಂಸ್ಕೃತಿ, ಕಲೆ, ವಾಸ್ತುಶಿಲ್ಪ, ಕೆರೆ-ಕಟ್ಟೆ-ಬಾವಿಗಳ ನಿರ್ಮಿತಿ, ದೇವಾಲಗಳ ಕೆತ್ತನೆ, ದೇವರ ಸುಂದರ ಮೂರ್ತಿಗಳನ್ನು ಕಡೆದು ನಿಲ್ಲಿಸಿದ, ಪ್ರತಿಷ್ಠಾಪಿಸಿದ ಅದೆಷ್ಟೋ ಮಹನಿಯರು ತಮ್ಮದೊಂದು ಹೆಸರನ್ನು ಸಹ ಗೀಚಿಡದೆ ಹಾಗೆಯೇ ಮರೆಯಾದುದನ್ನು ನೋಡಿದರೆ ವೇದ, ಉಪನಿಷತ್ತುಗಳು, ಆಗಮ, ಪುರಾಣಗಳು, ಜಾನಪದ ಸಾಹಿತ್ಯದ ಕಣಜ, ಹೆತ್ತು ಹೊತ್ತು ಸಾಕಿ ಸಲಹುವ ತಂದೆ-ತಾಯಿ, ಮಹಾತ್ಮರೆನಿಸಿಕೊಂಡವರ್‍ಯಾರು ತಮ್ಮ ಪ್ರಚಾರವನ್ನು ಎಂದು ಸಾರಿ ಸಾರಿ ಹೇಳಲೇ ಇಲ್ಲ ತುಂಬಿದ ಕೊಡ ತುಳುಕುವುದಿಲ್ಲ ಎಂಬಂತೆ ಹಾಗೂ ತಾವು ಮಾಗುತ್ತಿದ್ದಂತೆ ಎಡಗೈಗೆ ಕೊಟ್ಟಿದ್ದು ಬಲಗೈಗೆ, ಬಲಗೈಗೆ ಕೊಟ್ಟಿದ್ದು ಎಡಗೈಗೆ ತಿಳಿಯದಂತೆ ಬದುಕಿ ಎಲ್ಲಿಯೂ ಬೀಗದೆ ಬಾಗುತ್ತಲೇ ಬಾಳಿ ಮತ್ತೊಬ್ಬರ ಬಾಳಿಗೆ ದೀಪದಂತೆ ಬೆಳಕಾಗಿ ಬಯಲಾದ ಇವರ ನಿಸ್ವಾರ್ಥದ ಸೇವೆ ಮತ್ತು ಇದರಲ್ಲಿ ಭಾಗಿಯಾದ ಪ್ರತಿಯೊಬ್ಬರೂ ನಿಜವಾದ ಅರ್ಥದಲ್ಲಿ ಸ್ಮರಣೀಯರು. ಅಲ್ವಾ...

■ ಪರಮೇಶ ಕೆ.
ಉತ್ತನಹಳ್ಳಿ,
ಮೊ.7795862281



ವಾರಭವಿಷ್ಯ

27.11.2022 ರಿಂದ 3.12.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ವೃಶ್ಚಿಕ, ಚಂದ್ರ-ಧನುಸ್ಸು, ಮಕರ, ಕುಂಭ, ಮೀನ, ಕುಜ-ವೃಷಭ, ಬುಧ-ವೃಶ್ಚಿಕ, ಧನುಸ್ಸು, ಗುರು-ಮೀನ, ಶುಕ್ರ-ವೃಶ್ಚಿಕ, ಶನಿ-ಮಕರ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಯಾವುದೂ ನೀವಂದುಕೊಂಡಂತೆ ಸಾಗುತ್ತಿಲ್ಲವೇ, ಸಪ್ತಾಹದ ಕಡೆಗೆ ಕಾಯಿರಿ. ಕೈ ಹಾಕಿದ ಕೆಲಸಗಳು ನಿಂತು-ನಿಂತು ಸಾಗುತ್ತಿವೆ. 'ಸಮಯಕ್ಕಾದವನೇ ನೆಂಟ' ಎಂಬಂತೆ ಕಾಣದ ಕೈಯ ಸಹಾಯ ದೊರಕುವುದು. ವಾರ ಮಧ್ಯೆ ಕೊಂಚ ನಿರಾಳದ ತಂಗಾಳಿ ಬೀಸಲಿದೆ. ಸಜ್ಜನರ ಸಹವಾಸ ತೊರೆದರೆ ಸಂಕಷ್ಟಕ್ಕೆ ಸಿಲುಕುವಿರಿ. ನಿಮ್ಮ ಆರೋಗ್ಯದ ಬಗ್ಗೆ ಅಲಕ್ಷ್ಯ ಬೇಡ. ನಿಮಗೆ ವಿಶ್ರಾಂತಿಯ ಅಗತ್ಯವಿದೆ.
ಶ್ರೀ ಗಣಪತಿ ಸೇವೆ. ಶುಭ ಸಂಖ್ಯೆ-1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಸಾಮಾಜಿಕವಾಗಿ ಮೇಲು ಸ್ತರಕ್ಕೆ ಬರುವಿರಿ. ಆರೋಗ್ಯದಲ್ಲಿ ಸುಧಾರಣೆ, ಮನೋಲ್ಲಾಸ, ದೈವ ಕಾರ್ಯಗಳಲ್ಲಿ ಆಸಕ್ತಿ. ಸಾಲ ಮಾಡಿದರೂ ಸದ್ವಿನಿಯೋಗವಾಗಲಿದೆ. ಮಕ್ಕಳ ಹಿತಚಿಂತನೆಗೆ ಪ್ರಾಧಾನ್ಯತೆ ನೀಡಿ. ವಿದ್ಯಾ ವ್ಯಾಸಂಗಗಳಿಂದ ಕೀರ್ತಿಗೆ ಭಾಜನರಾಗುವರು. ವಿವಾಹಾರ್ಥಿಗಳಿಗೆ ಶುಭ ಸಮಾಚಾರ ದೊರೆಯಲಿದೆ. ದೂರ ಪ್ರಯಾಣಗಳನ್ನು ತಳ್ಳಿ ಹಾಕಲಾಗದು. ವಾರಾಂತ್ಯಕ್ಕೆ ಶಾರ್ಟ್ ಟ್ರಿಪ್‌ಗಳು ಉಂಟಾಗಲಿದೆ.
ಶ್ರೀದೇವಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವಾರದಾರಂಭಕ್ಕೆ ಉದ್ಯೋಗದಲ್ಲಿ ಅಲ್ಪ ಲಾಭ. ಮನೋವೃದ್ಧಿ, ಆಟ-ಪಾಠಗಳಲ್ಲಿ ಗೆಲುವನ್ನು ಕಾಣುವಿರಿ. ರಾಜಕಾರಣಿಗಳ ಸ್ಥಾನಕ್ಕೆ ಚ್ಯುತಿ, ವಿಲಾಸಿ ವಸ್ತುಗಳನ್ನು ಖರೀದಿಸುವಿರಿ. ಆತುರಗಾರನಿಗೆ ಬುದ್ಧಿ ಮಟ್ಟ ಎಂಬಂತೆ ನಡೆದು ತೊಂದರೆ ಎದುರಿಸಬೇಕಾ ಗುವುದು. ಶತ್ರುಗಳು ಬಲಾಢ್ಯರಾಗುತ್ತಾರೆ. ಸಾಲಗಾರರ ತಗಾದೆಯೂ ಇರುತ್ತದೆ. ಆತುರದ ವಾಹನ ಡ್ರೈವಿಂಗ್ ಕ್ಷೇಮವಲ್ಲ.
ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-5.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಸಪ್ತಾಹದ ಪ್ರಾರಂಭಕ್ಕೆ ಮನಸ್ಸಿಗೆ ಮುದ ನೀಡುವ ಪ್ರಸಂಗಗಳು. ಮನೆಗೆ ಅತಿಥಿ-ಅಭ್ಯಾಗತರ ಆಗಮನ. ಅವರ ಉಪಚಾರಕ್ಕೆ ಹೇರಳ ಧನವ್ಯಯ. ಗುರುಬಲದ ಕಾರಣ ನಿಮ್ಮ ಬುದ್ಧಿ ಸಾಮರ್ಥ್ಯದಿಂದ ಕಾರ್ಯ ಸಾಧನೆಯಾಗುವುದು. ಋಣಬಾಧೆ ತೀರುವಳಿಗೆ ಹಣ ಒದಗಿ ಬರುವುದು. ಆರೋಗ್ಯದಲ್ಲಿ ಸುಧಾರಣೆ, ಆಸ್ಪತ್ರೆಯಿಂದ ಡಿಸ್‌ಚಾರ್ಜ್. ದಾನ-ಧರ್ಮ ಬುದ್ಧಿ, ಅಸಹಾಯಕರಿಗೆ ಸಹಾಯ.
ಶ್ರೀದೇವಿ ಸ್ತುತಿ. ಶುಭ ಸಂಖ್ಯೆ-8.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಪರಿಶ್ರಮದಿಂದ ಧನ ಸಂಪಾದನೆ. ಹಾಗೆ ಸಂಪಾದಿತ ಹಣ ಬಹುಪಾಲು ಅಪವ್ಯಯವಾಗುವ ಸಾಧ್ಯತೆ. ಸಹೋದರರ ಸಹಕಾರದಿಂದ ಯೋಜಿತ ಕಾರ್ಯಗಳಲ್ಲಿ ಪ್ರಗತಿಯನ್ನು ಕಾಣುವಿರಿ. ಇದು ನಿಮ್ಮ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವ ವಾರ. ಶ್ರೀ ಶನಿದೇವ ಶುಭಪ್ರದವಿದ್ದು ಶತ್ರುಗಳ ಮೇಲೆ ವಿಜಯವನ್ನು ಸಾಧಿಸುವಿರಿ. ನ್ಯಾಯಾಲಯದ ವಿಚಾರಗಳು ನಿಮ್ಮ ಪರವಿರುವುದು. ಆತುರದ ವಾಹನ ಚಾಲನೆ ಮುಳುವಾದೀತು. ಶ್ರೀ ಸೂರ್ಯಸ್ತುತಿ. ಶುಭ ಸಂಖ್ಯೆ-6.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಾರದ ಆರಂಭಕ್ಕೆ ಯತ್ನ ಕಾರ್ಯಗಳು ನಿಧಾನಗತಿಯಲ್ಲಿ ಸಾಗಿದರೂ ಗುರುಕೃಪೆಯಿಂದ ಗುರಿ ಮುಟ್ಟುವುದು. ಹೊಸ ಮಿತ್ರರು ದೊರೆಯುವರು. ಆದರೆ ಗುಣ ಅರಿತು ಗೆಳೆತನ ಮಾಡಿ. ಸರ್ಕಾರಿ ಕೆಲಸಗಳು ನಿಮಗೆ ಅನುಕೂಲಕರವಾಗಿರುವುದು. ಪಂಚಮದಲ್ಲಿ ಶನಿದೇವನಿರುವ ಕಾರಣ ಪಾಪ ಕರ್ಮಾಸಕ್ತಿ ಉಂಟಾದೀತು. ಅಕಾಲಿಕ ಭೋಜನದಿಂದ ಆರೋಗ್ಯ ಕೆಡುವುದು. ವಾಕಿಂಗ್ ಹೋಗುವಾಗ ಆಭರಣ ತೆಗೆದಿಟ್ಟು ಹೋಗಿ. ಶ್ರೀ ನಾರಾಯಣ ಸೂಕ್ತ ಪಠಿಸಿ. ಶುಭ ಸಂಖ್ಯೆ-4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ನಿಮ್ಮ ಯೋಜನೆಗಳು ಕಾರ್ಯರೂಪಕ್ಕೆ ಬರಲು ಹೆಚ್ಚಿನ ತಯಾರಿಯ ಅಗತ್ಯ ಕಾಣಬರುತ್ತದೆ. ವ್ಯಾಪಾರ ವ್ಯವಹಾರಗಳಲ್ಲೂ ಲಾಭ ಗಳಿಸಲು ಕಷ್ಟಪಡುವಿರಿ. ಆಲಸ್ಯಪಟ್ಟರೆ ಕಾರ್ಯಗಳು ಸಿದ್ಧಿಸುವುದಿಲ್ಲ. ಸರ್ಕಾರಿ ನೌಕರರಿಗೆ ಕೆಲಸದ ಹಾಗೂ ಮೇಲಧಿಕಾರಿಗಳ ಒತ್ತಡ ಜಾಸ್ತಿ ಇರುತ್ತದೆ. ಜನ್ಮಸ್ಥ ಕೇತು ಸಣ್ಣಮಟ್ಟ ಶಸ್ತ್ರಕ್ರಿಯೆ ಹಾಗೂ ಕರುಳು ಸಂಬಂಧಿತ ಕಾಯಿಲೆಗೆ ಕಾರಣನಾಗುವನು. ಲಾಟರಿ-ರೇಸುಗಳ ತಂಟೆಗೆ ಹೋಗದಿದ್ದರೆ ಕ್ಷೇಮ.
ಶ್ರೀ ಚಾಮುಂಡೇಶ್ವರಿ ದರ್ಶನ, ಪ್ರಾರ್ಥನೆ. ಶುಭ ಸಂಖ್ಯೆ-7.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ವಾರದಾರಂಭಕ್ಕೆ ವಿತ್ತ ಲಾಭ, ವಸ್ತ್ರಾಭರಣ ಲಾಭ, ಕೈ ಹಿಡಿದ ಕೆಲಸ ಪೂರ್ಣಗೊಳ್ಳಲು ಗುರು ಕೃಪೆಯೇ ಕಾರಣ. ನಿಂತಿದ್ದ ಕೆಲಸಗಳು ಮರುಚಾಲನೆ ಪಡೆಯುವುವು. ಕ್ರಯ-ವಿಕ್ರಯ, ಲೇವಾದೇವಿ ವ್ಯವಹಾರಗಳಲ್ಲಿ ಉತ್ತಮ ಆದಾಯವನ್ನು ಕಾಣುವಿರಿ. ನೆರೆಹೊರೆಯಲ್ಲಿ ಭ್ರಾತೃತ್ವದಿಂದ ಮೆಚ್ಚುಗೆಗೆ ಪಾತ್ರರಾಗುವಿರಿ. ಧರ್ಮ ಗುರುಗಳ ಭೇಟಿ ಹಾಗೂ ಆಶೀರ್ವಚನ ದೊರೆಯಲಿದೆ. ಸಮತೋಲನವಾದ ಮನಸ್ಸು ಸ್ವರ್ಗಕ್ಕೆ ದಾರಿ. ಶ್ರೀ ನರಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-2.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಈ ವಾರ ಕೆಲಸ ಕಾರ್ಯಗಳು ನಿಧಾನಗತಿಯಲ್ಲಿ ಸಾಗುವುದರಿಂದ ಅಪೇಕ್ಷಿತ ಫಲ ದೊರೆಯದು. ಇದು ನಿಮಗೆ ಮಿಶ್ರ ಫಲದ ವಾರ. ಕುಟುಂಬ ಸದಸ್ಯರೊಂದಿಗೆ ವಿನಾಕಾರಣ ವಾದ-ವಿವಾದಗಳಿಗೆ ಆಸ್ಪದ ಕೊಡದಿರಿ. ನೀವು ಬಂಧು-ಬಳಗದವರ ಸಹಾಯಹಸ್ತ ನಿರೀಕ್ಷಿಸಿದರೆ ತಪ್ಪಿಲ್ಲ. ದ್ವಿತೀಯ ಶನಿದೇವನಿಂದ ಕೈಗೆ ಬಂದ ಹಣ ನೀರಿನಂತೆ ಪೋಲಾಗುವುದು. ಉತ್ತಮರ ಸಂಗದಲ್ಲಿ ಇರಲು ಪ್ರಯತ್ನಿಸಿ.
ಶ್ರೀ ದತ್ತಗುರು ದರ್ಶನ. ಶುಭ ಸಂಖ್ಯೆ-9.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
'ಕೈ ಕೆಸರಾದರೆ ಬಾಯಿ ಮೊಸರು'. ಇದು ನಿಮಗೆ ಸಾಡೇಸಾತಿ ಶನಿಪ್ರಭುವಿನ ಕಾಲ. ಚೆನ್ನಾಗಿದ್ದರೆ ನೆಂಟರು, ಕೆಟ್ಟರೆ ಯಾರೂ ಇಲ್ಲ. ಧನದಾಯವಿದ್ದರೂ ವೈದ್ಯೋಪಚಾರಕ್ಕೆ ವ್ಯಯವಾದೀತು. ಕೆಲವು ನಿರ್ಣಯಗಳು ಸಾಕಾರಗೊಳ್ಳುವುವು. ಯೋಚಿಸಿ ಮುಂದಡಿ ಇಡಿ. ವಾರದ ಕೊನೆಗೆ ಕಾರ್ಯ ಚಟುವಟಿಕೆಗಳು ಹೆಚ್ಚಾಗಿ ದೇಹಾಲಸ್ಯವಾಗುವುದು. ಪ್ರಯಾಣ ಕಾಲದಲ್ಲಿ ಎಚ್ಚರವಾಗಿರಿ.
ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-3.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ವಾರದ ಆದಿಗೆ ಪ್ರಿಯ ಜನರ ಸಂಗ, ಸಹವಾಸದಿಂದ ಮನಸ್ಸಿಗೆ ಖುಷಿ. ಎಲ್ಲರಲ್ಲೂ ಪ್ರೀತ್ಯಾದರಗಳನ್ನು ಗಳಿಸುವಿರಿ. ನಿರೀಕ್ಷಿತ ಮೂಲಗಳಿಂದ ಧನಾದಾಯವಾಗುವುದು. ಸತಿ-ಪತಿಯರಲ್ಲಿ ಅನುರಾಗ ಹೆಚ್ಚುವುದು. ಹಲವರಿಗೆ ಪುತ್ರ ಸಂತಾನದ ಸಂಭ್ರಮ. ಸರ್ಕಾರಿ ನೌಕರರಿಗೆ ಹಿರಿಯ ಅಧಿಕಾರಿಗಳಿಂದ ಕಿರುಕುಳ. ಅಧ್ಯಾಪಕ ವರ್ಗದವರಿಗೆ ಕಾರ್ಯಬಾಹುಳ್ಯ ಹೆಚ್ಚಾಗುವುದರಿಂದ ಬೇಸರ ಹಾಗೂ ದೇಹಾಯಾಸ.
ಶ್ರೀ ಶಿರಡಿ ಬಾಬಾ ಪ್ರಾರ್ಥನೆ. ಶುಭ ಸಂಖ್ಯೆ-7.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ವಾರದ ಆದಿಗೆ ಕೊಡುಗೆ ತರುವ ವ್ಯವಹಾರಗಳಲ್ಲಿ ಮಿಶ್ರ ಫಲ ದೊರೆಯುವುದು. ಹಣಕಾಸಿನ ಹೊಂದಾಣಿಕೆ ಸುಸೂತ್ರವಾಗಿದ್ದರೂ ನೀವು ಊಹೆ ಮಾಡಿದಷ್ಟು ಖರ್ಚುಗಳು ಎದುರಾಗುವುದು. ಸ್ವದೇಶ ತ್ಯಾಗ ಮಾಡುವ ಸನ್ನಿವೇಶ. ಸಜ್ಜನರ ವಿರೋಧ ಎದುರಿಸಬೇಕಾಗುವುದು. ರಾಜಕಾರಣಿಗಳಿಗೆ ಪದಭ್ರಷ್ಟತೆಯ ಭಯ ಕಾಡುವುದು. ಮಂಗಳ ಕಾರ್ಯಗಳು ಮುಂದೂಲ್ಪಡುವುದು.
ಶ್ರೀ ಗುರ್ವಾಷ್ಟಕ ಪಠಿಸಿ. ಶುಭ ಸಂಖ್ಯೆ-6.

ಮೂರನೇ ಪುಟದಿಂದ

ಕಾಲ ಕಾಲಕ್ಕೆ ನವೀಕರಿಸಿಕೊಳ್ಳಿ...

ಪಾವತಿಸಿ ಆಧಾರ್ ಪಿವಿಸಿ ಕಾರ್ಡ್ ನೊಂದಣಿ ಮಾಡಿಕೊಳ್ಳಬಹುದಾಗಿದೆ. ತಿಂಗಳ ನಂತರ ಎಟಿಎಂ ಕಾರ್ಡ್ ಮಾದರಿಯ ಆಧಾರ್ ಕಾರ್ಡ್ ಅಂಚೆ ಮೂಲಕ ಮನೆಗೆ ತಲುಪಲಿದೆ. ಅದು ಸದಾ ಜೊತೆಯಲ್ಲಿರಿಸಿಕೊಳ್ಳಲು ಸಹಕಾರಿಯಾಗಲಿದೆ.

ವಿಜಯನಗರ ಕೇಂದ್ರ: ಮೈಸೂರಿನ ವಿಜಯನಗರದ ಕಾಳಿದಾಸ ರಸ್ತೆಯಲ್ಲಿ ರುವ ಆಧಾರ್ ಕೇಂದ್ರವೂ ಸಾರ್ವಜನಿಕರಿಗೆ ಸೇವೆ ಒದಗಿಸುತ್ತಿದೆ. ಈ ಕೇಂದ್ರದಲ್ಲೂ 5 ಯೂನಿಟ್‌ಗಳಿದ್ದು, ದಿನಕ್ಕೆ 800ರಿಂದ 1200 ಜನರ ಆಧಾರ್ ಕಾರ್ಡ್ ತಿದ್ದುಪಡಿ ಮಾಡಿ ಕೊಡುವ ವ್ಯವಸ್ಥೆ ಇದೆ. ವಿಜಯನಗರ, ಹಿನಕಲ್, ಕೂರ್ಗಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಈ ಕೇಂದ್ರದಲ್ಲಿ ಆಧಾರ್ ಕಾರ್ಡ್ ಸೌಲಭ್ಯ ಒದಗಿಸುತ್ತಿದೆ.

ವಿವಿಧೆಡೆ ಸೇವೆ ಲಭ್ಯ: ಜನರಿಗೆ ಆಧಾರ್ ಕಾರ್ಡ್ ತಿದ್ದುಪಡಿ ಸೌಲಭ್ಯ ಕೆಲ ಸ್ಥಳಗಳಲ್ಲಿ ದೊರೆಯುತ್ತಿದೆ. ಮೈಸೂರು ಒನ್ ಕೇಂದ್ರ, ಬಿಎಸ್‌ಎನ್‌ಎಲ್ ಕಚೇರಿ, ಕೆಲವು ಖಾಸಗಿ ಏಜೆನ್ಸಿಗಳ ಮೂಲಕವೂ ಆನ್‌ಲೈನ್ ಮೂಲಕ ತಿದ್ದುಪಡಿ ಮಾಡಿಸಿಕೊಳ್ಳುವ ವ್ಯವಸ್ಥೆ ಇದೆ.

'ಸುರಕ್ಷಾ' ಕಣ್ಣು

ನಮೂನೆಯನ್ನು ಸಂಬಂಧಪಟ್ಟ ಠಾಣೆಗೆ ನೀಡಿದರೆ ಬಾಡಿಗೆ ಅಥವಾ ಭೋಗ್ಯದಾರರು ನೀಡಿರುವ ಮಾಹಿತಿ ಹಾಗೂ ದಾಖಲೆ ಅಸಲಿಯೋ? ಅಥವಾ ನಕಲಿಯೋ? ಎನ್ನುವುದನ್ನು ಪರಿಶೀಲಿಸಿ ಹೇಳುತ್ತೇವೆ ಎಂದು ತಿಳಿಸಿದರು.

ಡಿಸೆಂಬರ್‌ನೊಳಗೆ ನೀಡಿ: ಈಗಾಗಲೇ ಬಾಡಿಗೆ/ಭೋಗ್ಯ ನೀಡಿದ್ದರೂ ಈ ನಮೂನೆಯನ್ನು ಭರ್ತಿ ಮಾಡಿ, ಅಗತ್ಯ ದಾಖಲೆಯೊಂದಿಗೆ ಆಯಾ ವ್ಯಾಪ್ತಿಯ ಪೊಲೀಸ್ ಠಾಣೆಗಳಿಗೆ ಡಿಸೆಂಬರ್ ತಿಂಗಳೊಳಗೆ ನೀಡಬೇಕು. ಇದು ಸಾರ್ವಜನಿಕರ ಸುರಕ್ಷತೆ, ಭದ್ರತೆ ದೃಷ್ಟಿಯಿಂದ ಮಾಡುತ್ತಿರುವುದರಿಂದ ಎಲ್ಲರೂ ಸಹಕರಿಸಬೇಕು. ನಮ್ಮ ಮನವಿಯನ್ನು ನಿರ್ಲಕ್ಷ್ಯಿಸಿ ನಿಗದಿತ ನಮೂನೆಯಲ್ಲಿ ಬಾಡಿಗೆದಾರರ ಮಾಹಿತಿ ನೀಡದಿದ್ದರೆ ತಾವೇ ಹೊಣೆಗಾರರಾಗಬೇಕಾಗುತ್ತದೆ. ಒಂದು ವೇಳೆ ಬಾಡಿಗೆದಾರರು ಗಂಭೀರ ಅಪರಾಧ ಕೃತ್ಯಗಳಲ್ಲಿ ಭಾಗಿಯಾದಲ್ಲಿ ಅಂತಹವರಿಗೆ ಮನೆ ಅಥವಾ ಕೊಠಡಿ ನೀಡಿದ್ದ ಮಾಲೀಕರೂ ಭಾಗೀದಾರರಾಗುತ್ತಾರೆ. ಹಾಗಾಗಿ ಬಾಡಿಗೆದಾರರ ವಿವರವನ್ನು ಕಡ್ಡಾಯವಾಗಿ ನೀಡಬೇಕು. ಇದು ಮನೆ, ಕೊಠಡಿ, ಪಿಜಿ, ಸರ್ವೀಸ್ ಅಪಾರ್ಟ್‌ಮೆಂಟ್, ಹೋಂಸ್ಟೇ ಮಾಲೀಕರಿಗೂ ಅನ್ವಯವಾಗುತ್ತದೆ ಎಂದು ಹೇಳಿದರು.

ಅಸಲೀಯತ್ತು ಪರಿಶೀಲನೆ: ಆಧಾರ್, ಪಾನ್‌ಕಾರ್ಡ್, ಡ್ರೈವಿಂಗ್ ಲೈಸೆನ್ಸ್ ಇನ್ನಿತರ ದಾಖಲೆಗಳನ್ನು ನಕಲು ಮಾಡಿ ವಂಚಿಸಬಹುದು. ದಾಖಲೆ ಬಗ್ಗೆ ಏನಾದರೂ ಅನುಮಾನವಾದರೆ ಅದನ್ನು ಪೊಲೀಸರಿಗೆ ನೀಡಿದರೆ ಪರಿಶೀಲನೆ ನಡೆಸಿ ಅಸಲಿಯೋ? ನಕಲಿಯೋ? ಎಂದು ತಿಳಿಸುತ್ತೇವೆ. ಮನೆ ಕೆಲಸಕ್ಕೆ ಸೇರಿಸಿಕೊಳ್ಳುವಾಗ ಅವರ ಪೂರ್ವಾಪರ ತಿಳಿದುಕೊಳ್ಳಲು ಈಗಾಗಲೇ ವ್ಯವಸ್ಥೆ ಜಾರಿಯಲ್ಲಿದೆ. ತಮ್ಮ ವ್ಯಾಪ್ತಿಯ ಪೊಲೀಸ್ ಠಾಣೆಗೆ ಅರ್ಜಿ ನೀಡಿದರೆ ಪರಿಶೀಲಿಸಲಾಗುವುದು. ಇನ್ನು ಹೋಟೆಲ್‌ಗಳಲ್ಲಿ ಕೊಠಡಿ ಬಾಡಿಗೆ ನೀಡುವಾಗ ಆ ವ್ಯಕ್ತಿಯ ನೈಜ ದಾಖಲೆ ಪರಿಶೀಲಿಸಿ, ಅದರ ಪ್ರತಿಯನ್ನು ಪಡೆದುಕೊಳ್ಳಬೇಕು. ನಾವು ರ‍್ಯಾಂಡಮ್ ಆಗಿ ಪರಿಶೀಲನೆ ನಡೆಸುತ್ತೇವೆ. ಕೊಠಡಿ ಬಾಡಿಗೆ ಪಡೆದವನ ನೈಜ ದಾಖಲೆ ಸಂಗ್ರಹಿಸದ ಹೋಟೆಲ್‌ನವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಸಾಕಷ್ಟು ಕ್ರಮ: ಇನ್ನು ಮುಂದೆ ನಿಗದಿತವಾಗಿ ಮೊಹಲ್ಲಾ ಸಭೆಗಳನ್ನು ಅನುಮಾನಾಸ್ಪದ ವ್ಯಕ್ತಿಗಳ ಬಗ್ಗೆ ಜನರಿಂದಲೇ ಮಾಹಿತಿ ಸಂಗ್ರಹಿಸಲಾಗುವುದು. ಹಿರಿಯ ನಾಗರಿಕರ ಸಭೆ, ಯೂತ್ ಕಮಿಟಿ ಮೀಟಿಂಗ್ ಹೀಗೆ ಈಗಾಗಲೇ ಅನುಷ್ಠಾನದಲ್ಲಿರುವ ಚಟುವಟಿಕೆಗಳಿಗೆ ಚುರುಕು ನೀಡಲಾಗುತ್ತದೆ. ನಗರದ 9 ಗಡಿ ಪ್ರದೇಶದಲ್ಲಿ ವಾಹನಗಳ ಪರಿಶೀಲನೆ ನಡೆಸಲಾಗುತ್ತಿದೆ. ಅಲ್ಲದೆ 23 ಸ್ಥಳಗಳಲ್ಲಿ ರಾತ್ರಿ ಸಂಚರಿಸುವ ವಾಹನಗಳ ಮೇಲೆ ನಿಗಾ ಇಡಲಾಗಿದೆ. 1 ವಾರದಿಂದ ರಾತ್ರಿ 11 ಗಂಟೆ ನಂತರ ಅಂಗಡಿಗಳನ್ನು ಮುಚ್ಚಿಸಲಾಗುತ್ತಿದೆ. ಅನುಮಾನಾಸ್ಪದ ವ್ಯಕ್ತಿಗಳನ್ನು ಠಾಣೆಗೆ ಕರೆತಂದು ವಿಚಾರಣೆ ಮಾಡಲಾಗುತ್ತಿದೆ. ರೌಡಿಶೀಟರ್‌ಗಳ ಚಟುವಟಿಕೆ ಬಗ್ಗೆ ನಿಗಾ ಇಡಲಾಗಿದ್ದು, ಕೆಲವರ ಗಡಿಪಾರಿಗೂ ಕ್ರಮ ಕೈಗೊಳ್ಳಲಾಗಿದೆ. ನಾನು ನಾಲ್ಕೈದು ದಿನಗಳಿಂದ ಖಾಸಗಿ ವಾಹನದಲ್ಲಿ ಮೈಸೂರು ನಗರ ಸುತ್ತಿ ಎಲ್ಲವನ್ನೂ ಗಮನಿಸುತ್ತಿದ್ದೇನೆ. ಯಾವುದೇ ರೀತಿಯ ಕಾನೂನು ಬಾಹಿರ ಚಟುವಟಿಕೆಗಳು ಕಂಡುಬಂದರೂ ಅದನ್ನು ಸಂಪೂರ್ಣವಾಗಿ ಬಂದ್ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪೊಲೀಸ್ ಆಯುಕ್ತ ರಮೇಶ್ ಬಾನೋತ್ ತಿಳಿಸಿದರು.

ಹೊಸ ಪಾರ್ಕಿಂಗ್ ವ್ಯವಸ್ಥೆ: ನಗರದ ಪ್ರಮುಖ ವಾಣಿಜ್ಯ ಪ್ರದೇಶದಲ್ಲಿ ವಾಹನ ಪಾರ್ಕಿಂಗ್ ಸಮಸ್ಯೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಸುಗಮ ಸಂಚಾರಕ್ಕೆ ಅನುವಾಗುವ ರೀತಿಯಲ್ಲಿ ಪರಿಶೀಲನೆ ನಡೆಸಿ ಪ್ರಸ್ತಾವನೆ ನೀಡುವಂತೆ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಹಾಗೂ ಸಂಚಾರ ಎಸಿಪಿ ಅವರಿಗೆ ಸೂಚನೆ ನೀಡಿದ್ದೇನೆ. ನಂತರ ಹೊಸ ಪಾರ್ಕಿಂಗ್ ವ್ಯವಸ್ಥೆ ಜಾರಿಗೆ ತರಲಾಗುವುದು ಎಂದು ತಿಳಿಸಿದರು.

ಕೋರ್ಟ್ ಮೊರೆ

ಡೇ ವೇಳೆಗೆ ಪ್ರತ್ಯೇಕ ಕೊಡವ ಹೋಂ ಲ್ಯಾಂಡ್‌ನೊಂದಿಗೆ ಸಂಭ್ರಮಿಸೋಣ. ಕೊಡವ ಲ್ಯಾಂಡ್ ಬೇಡಿಕೆ ನ್ಯಾಯಯುತವಾಗಿದೆ. ಸಿಎನ್‌ಸಿಯ ಬೇಡಿಕೆಗಳು ಸುಪ್ರೀಂ ಕೋರ್ಟ್‌ನ ಮೂಲಕ ಈಡೇರುವ ವಿಶ್ವಾಸವಿದೆ. ಪ್ರತ್ಯೇಕ ರಾಜ್ಯ ಕೇಳುವುದರಲ್ಲಿ ಯಾವುದೇ ತಪ್ಪಿಲ್ಲ ಎಂದರು. ಗೋವಾ, ತೆಲಂಗಾಣ, ಉತ್ತರಾಖಂಡ್ ಪ್ರದೇಶಗಳು ನಿರಂತರ ಹೋರಾಟದ ಫಲವಾಗಿ ಪ್ರತ್ಯೇಕ ರಾಜ್ಯಗಳಾಗಿ ಮಾರ್ಪಟ್ಟಿವೆ. ಕೊಡವರು ಎಂದೆಂದಿಗೂ ಈ ದೇಶದ ಅಂಗವಾಗಿಯೇ ಉಳಿಯಲಿದ್ದಾರೆ. ತಮ್ಮ ಹಕ್ಕುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಪ್ರತ್ಯೇಕ ಹೋಂ ಲ್ಯಾಂಡ್ ಕೇಳುತ್ತಿದ್ದಾರೆ. ಇದಕ್ಕೆ ನನ್ನ ಸಂಪೂರ್ಣ ಸಹಕಾರ ಮತ್ತು ಬೆಂಬಲವಿದೆ. ಮುಂದಿನ ವರ್ಷ ಪ್ರತ್ಯೇಕ ಕೊಡವ ಹೋಂ ಲ್ಯಾಂಡ್ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸೋಣ. ಇಡೀ ಭಾರತೀಯರು ಕೊಡವರ ಪರವಾಗಿ ಇದ್ದಾರೆ ಎಂದು ಸುಬ್ರಮಣಿಯನ್ ಸ್ವಾಮಿ ತಿಳಿಸಿದರು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿ, ಸಿ.ಎನ್.ಸಿ ಸಂಘಟನೆ ಅಲ್ಪ ಜನಾಂಗದೊಂದಿಗೆ ನ್ಯಾಯಕ್ಕಾಗಿ ಹೋರಾಡುತ್ತಿದ್ದು, ಸಂವಿಧಾನದ ಗೌರವ ನೀಡಿ ಸಂವಿಧಾನದ ಆಶಯದಂತೆ ನಡೆದುಕೊಳ್ಳುತ್ತಿದೆ. ಸಂವಿಧಾನದ ಬಗ್ಗೆ ಸಂಪೂರ್ಣವಾಗಿ ಅರಿತುಕೊಂಡಾಗ ಮಾತ್ರ ಕೊಡವರ ನ್ಯಾಯಯುತ ಹಕ್ಕುಗಳನ್ನು ಪಡೆಯಲು ಸಾಧ್ಯ ಎಂದರು.

ವಿರಾಟ್ ಹಿಂದೂಸ್ತಾನ್ ಸಂಗಮ್(ವಿಹೆಚ್‌ಎಸ್) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಶೆಟ್ಟಿ ಮಾತನಾಡಿ, ಸಿಎನ್‌ಸಿ ಸಂಘಟನೆ ಸಂವಿಧಾನದ ನ್ಯಾಯಬದ್ಧ ಹಕ್ಕುಗಳನ್ನು ಕೇಳುತ್ತಿದೆ. ಇದು ರಾಷ್ಟ್ರ ವಿರೋಧಿ ಬೇಡಿಕೆಯಲ್ಲ. ಆದ್ದರಿಂದ ಸರ್ಕಾರ ಇವರ ಬೇಡಿಕೆಯನ್ನು ಪರಿಗಣಿಸುವ ಅಗತ್ಯವಿದೆ ಎಂದು ಹೇಳಿದರು. ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ವಿವಿಧ ಬೇಡಿಕೆಗಳ ಕುರಿತು ಸಭೆಯಲ್ಲಿ ಪ್ರತಿಜ್ಞಾ ವಿಧಿ ಬೋಧಿಸಿದರು.

ಸಿಎನ್‌ಸಿ ಪ್ರಮುಖ ಕಲಿಯಂಡ ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು. ಇದೇ ಸಂದರ್ಭ ಡಾ.ಸುಬ್ರಮಣಿಯನ್ ಸ್ವಾಮಿ ಅವರು, ಕೊಡವ ಅಭಿವೃದ್ಧಿಗೆ ದೇವಾಲಯದ ಅಭಿವೃದ್ಧಿಗೆ ರಾಜ್ಯಸಭಾ ಸದಸ್ಯರ ನಿಧಿಯಿಂದ 10 ಲಕ್ಷ ರೂ.ಗಳನ್ನು ಘೋಷಿಸಿದರು. ವಿವಿಧ ಕೊಡವ ಸಾಂಸ್ಕೃತಿಕ ಕಾರ್ಯಕ್ರಮದ ಮೂಲಕ ನೆರೆದಿದ್ದವರು ಗಮನ ಸೆಳೆದರು.

ಹಕ್ಕೊತ್ತಾಯ ಮಂಡನೆ: ಕೊಡವ ಮೂಲ ಎಂಡಮ್ಮ ಬುಡಕಟ್ಟು ಸಮುದಾಯಕ್ಕೆ ಎಸ್‌ಟಿ ಪಟ್ಟಿಯಲ್ಲಿ ಮಾನ್ಯತೆ ನೀಡಬೇಕು, ಕೊಡವರ ಧಾರ್ಮಿಕ ಸಂಸ್ಕಾರ ಕೋವಿಗೆ ಸಂವಿಧಾನದ 25, 26ನೇ ವಿಧಿಯಲ್ಲಿ ವಿಶೇಷ ಭದ್ರತೆ ಒದಗಿಸಬೇಕು, ಕೊಡವ ತಕ್‌ಗೆ 8ನೇ ಶೆಡ್ಯೂಲ್ ಸ್ಥಾನಮಾನ ನೀಡಬೇಕು, ಅರಮನೆ ಪಿಷಾಣ ಮತ್ತು ದೇವಾಟ್ ಪರಂಬುವಿನ ನರಮೇದದಲ್ಲಿ ಜೀವ ಕಳೆದುಕೊಂಡ ಕೊಡವರ ಸ್ಮರಣೆಗಾಗಿ ಸ್ಮಾರಕ ನಿರ್ಮಾಣ ಮಾಡಬೇಕು, ಕೊಡವರ ಭೂಮಿ, ಸಂಸ್ಕೃತಿ, ಜನಪದ, ಪರಂಪರೆ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಈಶಾನ್ಯ ರಾಜ್ಯದ ಮಾದರಿ 371(ಕೆ) ವಿಧಿಯಂತೆ ರಾಜ್ಯಾಂಗದ ವಿಶೇಷ ಖಾತ್ರಿಗೆ ಸಂಬಂಧಿಸಿದ ನಿರ್ಣಯ ಸೇರಿದಂತೆ ಕೊಡವರ ಹಿತಾಸಕ್ತಿ ಕಾಪಾಡುವ ಪ್ರಮುಖ ಹಕ್ಕೊತ್ತಾಯಗಳನ್ನು ಇದೇ ಸಂದರ್ಭ ಮಂಡಿಸಿ ಅಂಗೀಕರಿಸಲಾಯಿತು.

ನಿರ್ಧಾರಗಳ ಬಗ್ಗೆ ಆಕ್ಷೇಪವಿದೆ

ತಪ್ಪು ನಿರ್ಧಾರ ಕೈಗೊಂಡಾಗ ತಿಳಿದಿದ್ದೂ ಯಾಕೆ ನೀವು ಮೌನವಾಗಿದ್ದೀರಿ ಎಂದು ಜನರು ಪ್ರಶ್ನಿಸುತ್ತಾರೆ. ಪ್ರಜಾಪ್ರಭುತ್ವದಲ್ಲಿ ಪ್ರಧಾನಿ ಬಗ್ಗೆ ಶ್ಲಾಘಿಸುವುದು, ಟೀಕಿಸುವುದು ಒಳ್ಳೆಯ ಲಕ್ಷಣ. ತಪ್ಪು ತೀರ್ಮಾನಗಳ ಕುರಿತಂತೆ ಹಲವೊಮ್ಮೆ ಪ್ರಧಾನಿಗೆ ತಾನು ಪತ್ರ ಬರೆದಿದ್ದೇನೆ. ಅದಕ್ಕೆ ಸ್ಪಂದಿಸುತ್ತಿಲ್ಲ ಎಂದರು. ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಕೈಗೊಂಡಿರುವ ಭಾರತ್ ಜೋಡೋ ಯಾತ್ರೆ ಬಗ್ಗೆ ವ್ಯಂಗ್ಯವಾಡಿದ ಡಾ.ಸುಬ್ರಮಣಿಯನ್ ಸ್ವಾಮಿ, ಯಾರು ಭಾರತವನ್ನು ಒಡೆದರೋ ಅವರೇ ತಾವು ಭಾರತ ಜೋಡಿಸುವ ಪ್ರಯತ್ನಿಸುತ್ತಿರುವ 'ಭಾರತ್ ಜೋಡೋ' ಎಂದು ಭಾರತವನ್ನು ಜೋಡಿಸಲು ಹೊರಟಿದ್ದಾರೆ. ರಾಹುಲ್ ಗಾಂಧಿಗೆ ಮಾತ್ರ ಭಾರತ ಒಡೆದಂತೆ ಕಾಣುತ್ತದೆಯೇ ವಿನಾ ನಿಜವಾದ ಭಾರತ ಒಗ್ಗಟ್ಟಿನ ಭಾರತವಾಗಿದೆ, ಎಲ್ಲೂ ಒಡೆದ ಭಾರತವಂತಿಲ್ಲ ಎಂದು ಹೇಳಿದರು.

ರಾಜಕಾರಣಿಗಳಿಗೆ ಕಂಟಕ!

ಬೆನ್ನಲ್ಲೇ ಇಂತಹ ಪ್ರಕರಣ ನಡೆದಿರುವುದನ್ನು ಆಯೋಗ ಗಂಭೀರವಾಗಿ ತೆಗೆದುಕೊಂಡಿದೆ. ಇದರಿಂದ ಕೆಲವು ಅಧಿಕಾರಸ್ಥ ರಾಜಕಾರಣಿಗಳ ಬುಡಕ್ಕೆ ಬಂದು ನಿಲ್ಲಲಿದೆ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮತದಾರರ ಮಾಹಿತಿ ಕಳವು ಪ್ರಕರಣದಲ್ಲಿ ಸರ್ಕಾರ ಮುಕ್ತ ರೀತಿಯ ತನಿಖೆ ಮಾಡುತ್ತಿದೆ ಎಂದು ತಿಳಿಸಿದ್ದಾರೆ. ಯಾವುದೇ ಸಂಸ್ಥೆಯಾಗಲಿ, ಅಧಿಕಾರಿಗಳು ತಪ್ಪು ಮಾಡಿದ್ದರೆ ಅವುಗಳನ್ನು ಶಿಕ್ಷೆಗೆ ಒಳಪಡಿಸಲೆಂದೇ ಅವುಗಳನ್ನು ತನಿಖೆಗೆ ಆದೇಶ ಮಾಡಿರುವುದು. ಈಗಾಗಲೇ ಹಲವಾರು ಜನರ ವಿರುದ್ಧ ಕ್ರಮಕೈಗೊಂಡು ಬಂಧಿಸಲಾಗಿದೆ. ಅಧಿಕಾರಿಗಳ ವಿಚಾರಣೆಯೂ ನಡೆದಿದೆ. ಚುನಾವಣಾ ಆಯೋಗ ಮುಖ್ಯವಾಗಿ ಡಿಲೀಟ್ ಆಗಿರುವ ಪ್ರಕರಣಗಳನ್ನು ಹಾಗೂ ಮತಪಟ್ಟಿಯನ್ನು ಮತ್ತೊಮ್ಮೆ ಪರಿಷ್ಕರಣೆ ಮಾಡಲು ತೀರ್ಮಾನಿಸಿದೆ. ಇದನ್ನು ನಾವು ಸ್ವಾಗತಿಸುತ್ತೇವೆ. ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳಾಗಬೇಕು. ಯಾವುದಾದರೂ ಹೆಸರನ್ನು ಅನ್ಯಾಯವಾಗಿ ಡಿಲೀಟ್ ಮಾಡಿದ್ದರೆ ಸರಿಪಡಿಸುವುದು, ಎರಡು ಮತ್ತು ಮೂರು ಕಡೆಗಳಲ್ಲಿ ಗುರುತಿನ ಚೀಟಿ ಹೊಂದಿದ್ದರೆ ಅದನ್ನು ತೆಗೆಯುವುದು. ಪಾರದರ್ಶಕವಾಗಿ ಕೆಲವು ಕ್ರಮಗಳನ್ನು ಕೈಗೊಳ್ಳಲಾಗುವುದನ್ನು ಸ್ವಾಗತಿಸುವುದಾಗಿ ತಿಳಿಸಿದರು.

ರಾಮಾಯಣ, ಮಹಾಭಾರತದಂತೆ ಸಂವಿಧಾನವನ್ನು ಪಠಿಸಬೇಕಾಗಿದೆ

ಹಿರಿಯ ರಂಗಕರ್ಮಿ ಡಾ.ರಾಜಪ್ಪ ದಳವಾಯಿ ಕರೆ



ಮೈಸೂರು, ನ.26(ಜಿಎ)– ರಾಮಾಯಣ, ಮಹಾಭಾರತ ಗ್ರಂಥಗಳ ನಂತರ ಪ್ರಜಾಪ್ರಭುತ್ವದ ಗ್ರಂಥವಾದ ಸಂವಿಧಾನವನ್ನು ನಾವು ಹೆಚ್ಚು ಪಠಿಸಬೇಕಾಗಿದೆ ಎಂದು ಹಿರಿಯ ರಂಗಕರ್ಮಿ ಡಾ.ರಾಜಪ್ಪ ದಳವಾಯಿ ಹೇಳಿದರು.

ಸಂವಿಧಾನ ಅಂಗೀಕಾರ ದಿನದ ಅಂಗವಾಗಿ ಜನಮನ, ನೆಲೆ ಹಿನ್ನೆಲೆ, ಪ್ರತಿಪರ ಸಂಘಟನೆಗಳ ಒಕ್ಕೂಟ, ಎಡ ಮತ್ತು ಪ್ರಜಾಪ್ರಭುತ್ವ ಒಕ್ಕೂಟ, ವಿವಿ ವಿದ್ಯಾರ್ಥಿಗಳ ಒಕ್ಕೂಟ, ಫೆಡರೇಷನ್ ಆಫ್ ಮುಸ್ಲಿಂ ಒಕ್ಕೂಟ ಹಾಗೂ ದಲಿತ ಸಂಘರ್ಷ ಸಮಿತಿ ಒಕ್ಕೂಟದ ವತಿಯಿಂದ ನಗರದ ಕಿರು ರಂಗಮಂದಿರದ ಆವರಣದಲ್ಲಿ ಆಯೋಜಿಸಿದ್ದ 'ಸಂವಿಧಾನ: ಬಹುತ್ವ ಸಂಸ್ಕೃತಿಯತ್ತ ಸಾಗೋಣ ಬನ್ನಿ' ಎಂಬ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಂತರ 'ಭಾರತದ ಪ್ರಜೆಗಳ ಹೊಣೆ : ಸಂವಿಧಾನದ ರಕ್ಷಣೆ' ಎಂಬ ವಿಷಯದ ಬಗ್ಗೆ ಮಾತನಾಡಿದ ಅವರು, ಸಂವಿಧಾನ ಎಂಬುದು ಕೇವಲ ಕಾನೂನಿನ ಗ್ರಂಥವಲ್ಲ. ಅದು ಸಂಸ್ಕೃತಿಯ ಗ್ರಂಥವಾಗಿದೆ. ಹಲವಾರು ವರ್ಷಗಳ ಹಿಂದೆ ಸಂವಿಧಾನ ಎಂದರೆ ಏನು? ಎಂದು ಯಾರೂ ಪ್ರಶ್ನಿಸುತ್ತಿರಲಿಲ್ಲ. ಆದರೆ, ಈ ದಶಕದಲ್ಲಿ ಸಂವಿಧಾನದ ಬಗ್ಗೆ ಹೆಚ್ಚು ಚರ್ಚೆಗಳಾಗುತ್ತಿವೆ ಎಂದರು.

ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಸಂವಿಧಾನ ಶಿಲ್ಪಿ ಎಂದು ಕರೆಯಲು ನಿಜವಾದ ಕಾರಣವೆಂದರೆ, ಅವರ ಸಮಿತಿಯಲ್ಲಿ ನೇಮಿಸಿದ್ದ ಏಳು ಮಂದಿಯೂ ವಿವಿಧ ಕಾರಣಗಳಿಂದ ಸಂವಿಧಾನ ರಚನೆಯಲ್ಲಿ ಭಾಗಿಯಾಗಲಿಲ್ಲ. ಆದರೆ, ಅಂಬೇಡ್ಕರ್ ಅವರು ಮಾತ್ರ ಆ ಏಳು ಮಂದಿಯ ಕೆಲಸವನ್ನು ಒಬ್ಬರೇ ಮಾಡಿದ್ದರಿಂದ ಅವರನ್ನು ಸಂವಿಧಾನ ಶಿಲ್ಪಿ ಎಂದು ಕರೆಯುತ್ತಾರೆ. ಮಹಿಳೆಯರಿಗಾಗಿ ಮಾಡಿದ್ದ ಅವರ ಬಿಲ್ ಪಾಸ್ ಆಗಲಿಲ್ಲ ಎಂಬ ಕಾರಣಕ್ಕೆ ಅವರು ರಾಜೀನಾಮೆ ನೀಡಿ ಬಂದ ಮಹಾನ್ ವ್ಯಕ್ತಿ ಅವರು ಎಂದು ಸ್ಮರಿಸಿದರು.

ಸಂವಿಧಾನ ಎಂಬುದು ನಮ್ಮ ಜೀವನದ ಒಂದು ಭಾಗವಾಗಬೇಕು. ಆದರೆ, ರಾಜಕಾರಣಿಗಳು ಅವಕಾಶ ಸಿಕ್ಕಿದ ತಕ್ಷಣ ಅಧಿಕಾರ ಹಿಡಿಯಲು ವಿವಿಧ ಅಸ್ತ್ರಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಇವರಿಗೆ ಶಾಂತವೇರಿ ಗೋಪಾಲಗೌಡರು ಮಾದರಿಯಾಗಬೇಕು. ಅವರು ಚುನಾವಣೆಗೆ ನಿಂತಾಗ ಜನರು ಅವರಿಗೆ ಓಟು ನೀಡುವುದರ ಜೊತೆ ಒಂದು ನೋಟನ್ನು ನೀಡಿದ್ದರು. ಆದರೆ, ಇಂದು ಸಾಫ್ಟ್‌ವೇರ್ ಮೂಲಕ ಮತದಾರರು ಹೆಸರೇ ಇಲ್ಲದಂತೆ ಮಾಡುತ್ತಿದ್ದಾರೆ. ಸಂವಿಧಾನವನ್ನು ಸರಿಯಾಗಿ ಜಾರಿಗೊಳಿಸದಿದ್ದರೆ, ಪ್ರಬಲ ಜಾತಿಗಳು ವಿಧಾನಸೌಧದ ಶಕ್ತಿಯಾಗಿ ದುರ್ಬಲ ವರ್ಗಕ್ಕೆ ಕೆಲಸವಿಲ್ಲದಂತೆ ಮಾಡುತ್ತಾ ಮುಂದಿನ ದಿನಗಳಲ್ಲಿ ಅತಂತ್ರ ಸ್ಥಿತಿ ಎದುರಿಸಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವದಲ್ಲಿ ಪರ ಮತ್ತು ವಿರೋಧ ಎಂಬ ವಿಚಾರವಿದೆ. ಅದು ಚರ್ಚೆಯಾಗಬೇಕು. ಆದರೆ, ಇದನ್ನು ಪ್ರಶ್ನಿಸುವವರನ್ನೇ ಅಪರಾಧಿಗಳಂತೆ ಮಾಡುತ್ತಿದ್ದಾರೆ. ಇದು ಬೇಸರದ ಸಂಗತಿ. ನೆಲ್ಸನ್ ಮಂಡೆಲ್ಲಾ ಅವರು ಭಾರತಕ್ಕೆ ಬಂದಾಗ ಅವರು ಭಾರತದಿಂದ ನಮ್ಮ ಸಂವಿಧಾನದವನ್ನು ತೆಗೆದುಕೊಂಡು ಹೋಗಿ, ಭಾರತದ ತಜ್ಞರನ್ನು ಬಳಸಿಕೊಂಡು ದಕ್ಷಿಣ ಆಫ್ರಿಕಾದಲ್ಲಿ ಅದನ್ನು ಅಳವಡಿಸಲು ಮುಂದಾದರು. ಅಷ್ಟು ಶ್ರೇಷ್ಠ ನಮ್ಮ ಸಂವಿಧಾನ. ಬೇರೆ ದೇಶದವರಿಗೆ ಅದರ ಮಹತ್ವ ತಿಳಿದಿದೆ. ಸಂವಿಧಾನದಲ್ಲಿ ದೇಶಕ್ಕೆ ಬೇಕಿರುವ ಎಲ್ಲಾ ಕಠಿಣ ಅಂಶಗಳು ಒಳಗೊಂಡಿದೆ. ಅದನ್ನು ನಾವು ಅನುಸರಿಸಬೇಕು ಎಂದು ತಿಳಿಸಿದರು.


> ಕಲಾಕ್ಷೇತ್ರಕ್ಕೆ ಪೊಲೀಸರ ಕಾವಲು ನೋಡುತ್ತಿದ್ದರೆ ಬೇಸರವಾಗುತ್ತಿದೆ. ರಂಗಭೂಮಿ ಪೊಲೀಸ್ ಪಾಳಿಯಲ್ಲಿ ಬಹಳ ದಿನ ಉಳಿಯುವುದಿಲ್ಲ. ರಂಗಭೂಮಿ ಇರುವುದು ಮನಸ್ಸು ಕಟ್ಟಲು ಹೊರತು ಮನಸ್ಸನ್ನು ಕೆಡಿಸಲು ಅಲ್ಲ. ರಂಗಕರ್ಮಿ ಆಗಿ ನಾನು ಇದನ್ನು ಧಿಕ್ಕರಿಸುತ್ತೇನೆ.
> -ಡಾ.ರಾಜಪ್ಪ ದಳವಾಯಿ, ಹಿರಿಯ ರಂಗಕರ್ಮಿ

ಕಾರ್ಯಕ್ರಮಕ್ಕೂ ಮುನ್ನ ಅಂಬೇಡ್ಕರ್ ಅವರ ಜೀವನ ಚರಿತ್ರೆಯ ಮಹತ್ವವನ್ನು ಸಾರುವ ಭಿತ್ತಿಚಿತ್ರಗಳ ವಿಶೇಷ ಪ್ರದರ್ಶನ ಹಾಗೂ ಮೈಸೂರಿನ ಜನಮನ ಸಂಸ್ಥೆ ವತಿಯಿಂದ ದೇವನೂರು ಮಹಾದೇವ ಅವರ 'ಸಂಬಂಜ ಅನ್ನೋದು ದೊಡ್ಡುಕನ್' ನಾಟಕ ಪ್ರದರ್ಶಿಸಲಾಯಿತು.

ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್, ಹಿರಿಯ ಪತ್ರಕರ್ತರಾದ ಬಿ.ಎಂ. ಹನೀಫ್, ಜಗದೀಶ್ ಕೊಪ್ಪ, ಟಿ.ಗುರುರಾಜ್, ಸಾಹಿತಿ ಅಜೀಜ್, ಮೆಸ್ಕೋ ಕಾಲೇಜಿನ ಪ್ರಾಂಶುಪಾಲ ಮಹಮ್ಮದ್ ಕಲೀಮ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಭೂಸ್ವಾಧೀನಕ್ಕೆ ಹದಿನಾರು ಗ್ರಾಮಸ್ಥರ ವಿನೂತನ ವಿರೋಧ

ಗ್ರಾಮದ ಐತಿಹಾಸಿಕ ಹಿನ್ನೆಲೆ, ಪ್ರಾಕೃತಿಕ ಛಾಯಾಚಿತ್ರ ಪ್ರದರ್ಶನದ ಮೂಲಕ ಜನರ ಬೆಂಬಲ ಯಾಚನೆ



ಮೈಸೂರು,ನ.26(ಎಂಟಿವೈ)– ಗ್ರಾಮದ ಪ್ರಾಕೃತಿಕ ಸಂಪತ್ತಿನ ಛಾಯಾಚಿತ್ರಗಳ ಪ್ರದರ್ಶನದ ಮೂಲಕ ಗ್ರಾಮದ ಫಲ ವತ್ತಾದ ಕೃಷಿ ಭೂಮಿಗಳ ಭೂಸ್ವಾಧೀನ ಪ್ರಕ್ರಿಯೆಯನ್ನು ವಿಭಿನ್ನ ರೀತಿಯಲ್ಲಿ ವಿರೋಧಿಸಿ ಹದಿನಾರು ಗ್ರಾಮದ ಗ್ರಾಮಸ್ಥರು ಗಮನ ಸೆಳೆದಿದ್ದಾರೆ.

ನಂಜನಗೂಡು ತಾಲೂಕಿನ ಹದಿನಾರು ಗ್ರಾಮದ ಬಿಳಿಕೆರೆ ಮಹದೇಶ್ವರ ದೇವಾಲಯದಲ್ಲಿ ನಡೆದ ಜಾತ್ರಾ ಮಹೋತ್ಸವದಲ್ಲಿ ಗ್ರಾಮದ ಮುಖಂಡರೊಂದಿಗೆ ಪರಿಸರ ಕಾಳಜಿಯುಳ್ಳ ಯುವಕರ ತಂಡ 'ನೋಡ ಬನ್ನಿ ನಮ್ಮೂರ' ಶೀರ್ಷಿಕೆಯಡಿ ಆಯೋಜಿಸಿದ್ದ ಛಾಯಾಚಿತ್ರ ಪ್ರದರ್ಶನದಲ್ಲಿ ಬಿಳಿಕೆರೆ ಮಹದೇಶ್ವರ ಸ್ವಾಮಿ ದೇವಸ್ಥಾನದ ಇತಿಹಾಸ, ಹದಿನಾರು ಗ್ರಾಮದ ಸೌಂದರ್ಯ, ಫಲವತ್ತಾದ ಭೂಮಿ, ಹದಿನಾರು ಕೆರೆ, ಕೆರೆಯ ಆವರಣದಲ್ಲಿರುವ ಪಕ್ಷಿ ಸಂಕುಲ, ಗಿಡ–ಮರಗಳೂ ಸೇರಿದಂತೆ ಸುತ್ತಮುತ್ತಲಿನ ಭೌಗೋಳಿಕ ಲಕ್ಷಣಗಳ ಬಗ್ಗೆ ಮಾಹಿತಿಯುಳ್ಳ ಛಾಯಾಚಿತ್ರ ಪ್ರದರ್ಶನ ಆಯೋಜಿಸುವ ಮೂಲಕ ಹದಿನಾರಿನ ಪ್ರಾಕೃತಿಕ ಸೌಂದರ್ಯದ ಅನಾವರಣ ಮಾಡಿ, ಭೂ ಸ್ವಾಧೀನ ಪ್ರಕ್ರಿಯೆ ಕೈಬಿಡುವಂತೆ ವಿಭಿನ್ನ ಶೈಲಿಯಲ್ಲಿ ಪ್ರತಿಭಟನೆ ವ್ಯಕ್ತಪಡಿಸಿದರು.

ಕೈಗಾರಿಕೆ ಸ್ಥಾಪನೆ ಉದ್ದೇಶದಿಂದ ಕೆಐಎಡಿಬಿ ಹದಿನಾರು, ಆಯರಹಳ್ಳಿ, ಸೋಮೇಶ್ವರಪುರ, ಅಡಕನಹಳ್ಳಿ, ಕೋಚನಹಳ್ಳಿ ಗ್ರಾಮದ ವಿವಿಧ ಸರ್ವೇ ನಂಬರ್‌ಗಳಿಗೆ ಸೇರಿದ 1037 ಎಕರೆ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸಿ ನೋಟಿಸ್ ನೀಡಲಾಗಿದ್ದು, ಅದರಲ್ಲಿ 325 ಎಕರೆ ಭೂಮಿ ಹದಿನಾರು ಗ್ರಾಮದ ರೈತರಿಗೆ ಸೇರಿದೆ. ಹದಿನಾರು ಕೆರೆಗೆ ದೇಶ–ವಿದೇಶದಿಂದ ಪ್ರತಿವರ್ಷ ಸಾವಿರಾರು ವಿವಿಧ ಬಗೆಯ ಪಕ್ಷಿಗಳು ಆಗಮಿಸಿದ್ದು, ತನ್ನದೇ ಆದ ವೈಶಿಷ್ಟ್ಯತೆಯನ್ನು ಹದಿನಾರು ಕೆರೆ ಕಾಯ್ದುಕೊಂಡಿದೆ. ಈ ಹಿನ್ನೆಲೆಯಲ್ಲಿ ಫಲವತ್ತಾದ ಕೃಷಿ ಭೂಮಿಯನ್ನು ಕೈಗಾರಿಕಾ ಸ್ಥಾಪನೆಗೆ ನೀಡಲು ಗ್ರಾಮಸ್ಥರು ಒಕ್ಕೊರಲಿನಿಂದ ವಿರೋಧ ವ್ಯಕ್ತಪಡಿಸಿದ್ದು, ಕೆಐಎಡಿಬಿಗೆ ಆಕ್ಷೇಪ ಸಲ್ಲಿಸಿದೆ. ಗ್ರಾಮಸ್ಥರ ಮನವಿಗೆ ವರುಣಾ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಬೆಂಬಲ ನೀಡಿದ್ದು, ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳುವ ನಿರ್ಧಾರದಿಂದ ಹಿಂದೆ ಸರಿಯುವಂತೆ ಆಗ್ರಹಿಸಿ, ಪತ್ರ ಬರೆದಿದ್ದಾರೆ.

ಈ ಹಿನ್ನೆಲೆಯಲ್ಲಿ ಜಾತ್ರೆಗೆ ಬರುವ ಭಕ್ತರು, ಜನರಿಗೆ ಭೂ ಸ್ವಾಧೀನ ಪ್ರಕ್ರಿಯೆ ವಿರೋಧಿಸುವ ಹೋರಾಟಕ್ಕೆ ಬೆಂಬಲ ಕೋರಲು ಆಯೋಜಿಸಿದ್ದ ಛಾಯಾಚಿತ್ರ ಪ್ರದರ್ಶನ ಎಲ್ಲರ ಗಮನ ಸೆಳೆಯಿತು. ಸ್ಥಳೀಯ ಯುವಕ ಸೂರ್ಯ ಹಾಗೂ ಮೈಸೂರಿನ ಕೆಲ ವನ್ಯಜೀವಿ ಛಾಯಾಗ್ರಾಹಕರು ತೆಗೆದಿರುವ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗಿತ್ತು.

ಪಕ್ಷಿಗಳು, ಹಾವುಗಳ ವಿವರ, ಚಿತ್ರಗಳನ್ನು, ಹುಳಿಮಾವು ಹಾಗೂ ನಿಟ್ರೆ ಗುಡ್ಡಗಳಲ್ಲಿರುವ ಪ್ರಾಣಿ ಪಕ್ಷಿಗಳು, ಸಸ್ಯಗಳು, ಅವುಗಳ ಉಪಯೋಗಗಳು, ಗ್ರಾಮದ ನೀರಾವರಿ ಮೂಲಗಳ ವಿವರ, ಭೂ ಸ್ವಾಧೀನ ವಿರುದ್ಧದ ಹೋರಾಟದ ಮಾಹಿತಿ, ಕೈಗಾರಿಕರಣದಿಂದಾಗುವ ಸಾಮಾಜಿಕ, ಪರಿಸರದ ಮೇಲಿನ ದುಷ್ಪರಿಣಾಮ, ಕಾನೂನಾತ್ಮಕ ಹೋರಾಟ, ಕೌಟುಂಬಿಕ ಕಲಹಗಳ ಬಗ್ಗೆ ವಿವರವಾದ ಚಿತ್ರ ಸಹಿತ ವಿವರಣೆ ನೀಡಲಾಗಿತ್ತು. ಸುತ್ತ ಮುತ್ತಲಿನ ಗ್ರಾಮಸ್ಥರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಪ್ರದರ್ಶನ ವೀಕ್ಷಿಸಿ, ಯಾವುದೇ ಕಾರಣಕ್ಕೂ ಭೂಸ್ವಾಧೀನ ಪ್ರಕ್ರಿಯೆ ಮುಂದುವರೆಸದಂತೆ ಅಭಿಪ್ರಾಯ ಹಂಚಿಕೊಂಡು, ಬೆಂಬಲ ಸೂಚಿಸಿದ್ದಾರೆ.


ಶಾರಿಕ್‌ಗೆ ಮನೆ ಬಾಡಿಗೆಗೆ ನೀಡಿದ್ದ ಮಾಲೀಕ ಪೊಲೀಸರ ವಶಕ್ಕೆ

ಮೈಸೂರು, ನ.26– ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ ಆರೋಪಿ ಶಾರಿಕ್‌ಗೆ ಮೈಸೂರಿನಲ್ಲಿ ಮನೆ ಬಾಡಿಗೆಗೆ ನೀಡಿದ್ದ ಮಾಲೀಕ ಮೋಹನ್‌ಕುಮಾರ್ ಮಂಗಳೂರು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಶಾರಿಕ್ ಮನೆ ಬಾಡಿಗೆಗೆ ಪಡೆಯುವಾಗ ಹುಬ್ಬಳ್ಳಿಯ ಮೇಘರಾಜ್ ಎಂಬವರ ಆಧಾರ ಕಾರ್ಡ್ ನೀಡಿದ್ದ. ಇದನ್ನು ನಂಬಿದ್ದ ಮೋಹನ್‌ಕುಮಾರ್ ಆತನಿಗೆ ಮನೆ ಬಾಡಿಗೆಗೆ ನೀಡಿದ್ದರು. ಈತ ಉಗ್ರ ಚಟುವಟಿಕೆಯಲ್ಲಿ ಭಾಗಿಯಾಗಿದ್ದಾನೆ ಎಂಬುದರ ಬಗ್ಗೆ ಅವರಿಗೆ ಗೊತ್ತಿರಲಿಲ್ಲ ಎನ್ನಲಾಗಿದೆ. ಆದರೂ ಶನಿವಾರ ಮನೆ ಮಾಲೀಕನನ್ನು ವಶಕ್ಕೆ ಪಡೆದಿರುವ ಮಂಗಳೂರು ಪೊಲೀಸರು ವಿಚಾರಣೆ ಆರಂಭಿಸಿದ್ದಾರೆ.

ಲಿಂಗದಲ್ಲಿ ಮೂಡಿರುವ ಕಣ್ಣುಗಳು!

ಮಾಗಡಿ, ನ.26– ರಾಮನಗರ ಜಿಲ್ಲೆಯ ಮಾಗಡಿ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಇರುವ ಉಮಾಮಹೇಶ್ವರಿ ದೇವಸ್ಥಾನದ ಶಿವಲಿಂಗದಲ್ಲಿ ಕಣ್ಣು ಮೂಡಿದೆ ಎಂಬ ವದಂತಿ ಹಿನ್ನೆಲೆಯಲ್ಲಿ ಇದನ್ನು ನೋಡಲು ಸಾವಿರಾರು ಭಕ್ತರು ದೇಗುಲಕ್ಕೆ ಆಗಮಿಸುತ್ತಿದ್ದಾರೆ.



ಶಿವಲಿಂಗದಲ್ಲಿ ಕಣ್ಣು ಮೂಡಿರುವ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಈಗ ದೇವಸ್ಥಾನದ ಬಳಿ ಜನ ಜಾತ್ರೆಯೇ ಸೇರುತ್ತಿದೆ. ಈ ದೇವಸ್ಥಾನ 50 ವರ್ಷ ಹಳೆಯದಾಗಿದ್ದು, 5 ವರ್ಷದ ಹಿಂದೆ ಜೀರ್ಣೋದ್ಧಾರ ಮಾಡಲಾಗಿತ್ತು.

ಇದರ ಅರ್ಚಕ ರುದ್ರೇಶ್ ಶುಕ್ರವಾರ ದೇವಸ್ಥಾನಕ್ಕೆ ಬಂದಿರಲಿಲ್ಲ. ಅವರ ಸಹೋದರ ಚಂದನ್ ಪೂಜೆ ಮಾಡಿದ್ದರು. ಸಂಜೆ ಹೊತ್ತಿನಲ್ಲಿ ಪಟ್ಟಣದ ಹೊಸಪೇಟೆಯ ನಾಗೇಶ್ ಎಂಬ ಭಕ್ತರು ದೇವಸ್ಥಾನಕ್ಕೆ ಬಂದು ಪೂಜೆ ಸಲ್ಲಿಸಿ ಮೊಬೈಲ್‌ನಲ್ಲಿ ಫೋಟೋ ತೆಗೆದುಕೊಂಡಿದ್ದಾರೆ. ಆ ಫೋಟೋವನ್ನು ಗಮನಿಸಿದಾಗ ಲಿಂಗದಲ್ಲಿ ಕಣ್ಣು ಮೂಡಿರುವುದು ಕಂಡು ಅರ್ಚಕ ರುದ್ರೇಶ್‌ಗೆ ತಿಳಿಸಿದ್ದಾರೆ. ಆಗ ಪರೀಕ್ಷೆ ಮಾಡಿದಾಗ ಲಿಂಗದಲ್ಲಿ ಕಣ್ಣು ಮೂಡಿರುವುದು ದಿಟವಾಗಿದೆ.

ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ವಿಜಯಸಿಂಹ, ಅರ್ಚಕರ ಕೈಯಲ್ಲಿ ಶಿವಲಿಂಗವನ್ನು ಒರೆಸಿ ನೋಡಿದಾಗಲೂ ಬದಲಾವಣೆ ಕಂಡುಬಂದಿಲ್ಲ. ರಾತ್ರಿ ಆಗುತ್ತಿದ್ದಂತೆ ಕಣ್ಣು ಮುಚ್ಚಿಕೊಂಡ ರೀತಿಯಲ್ಲಿ ಕಾಣಿಸುತ್ತಿದ್ದು, ಈ ವಿಸ್ಮಯದ ದರ್ಶನಕ್ಕೆ ಜನರು ಸೇರುತ್ತಿದ್ದಾರೆ. ಈ ರೀತಿ ನಡೆದಿರುವುದು ನಮಗೂ ಅಚ್ಚರಿ ಮೂಡಿಸಿದೆ. ಯಾರು ಬೇಕಾದರೂ ಪರೀಕ್ಷೆ ಮಾಡಿಕೊಳ್ಳಲಿ ಎಂದು ದೇವಸ್ಥಾನದ ಟ್ರಸ್ಟ್‌ನವರು ತಿಳಿಸಿದ್ದಾರೆ.

'ಹೆಮ್ಮೆಯ ಕನ್ನಡಿಗ' ಪ್ರಶಸ್ತಿ ಪುರಸ್ಕಾರ

ಮೈಸೂರು, ನ.26(ಎಂಟಿವೈ)– ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ನ. 27 ರಂದು ಬೆಳಗ್ಗೆ 10ಕ್ಕೆ ಹೂಟಗಳ್ಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ ಹಾಗೂ ಕನ್ನಡಾಂಬೆಯ ಹೆಮ್ಮೆಯ ಕನ್ನಡಿಗ ಪ್ರಶಸ್ತಿ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ರಾಜಶೇಖರ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅರ್ಜುನ್ ಅವಧೂತ ಗುರೂಜಿ ಸಾನ್ನಿಧ್ಯ ವಹಿಸುವ ಕಾರ್ಯಕ್ರಮದಲ್ಲಿ ಸಾಹಿತಿ ಬನ್ನೂರು ಕೆ.ರಾಜು ಮುಖ್ಯ ಭಾಷಣ ಮಾಡುವರು. ಶಾಸಕ ಜಿ.ಟಿ. ದೇವೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯ ಕ್ರಮದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ವಿವಿಧ ಕ್ಷೇತ್ರದ ಪ್ರತಿನಿಧಿಗಳಾಗಿ ಸೂರ್ಯಕೀರ್ತಿ, ಕರ್ಪೂರವಳ್ಳಿ ಮಹದೇವ್, ಆರ್ಯನ್, ಗಿರೀಶ್ ಶಿವಾರ್ಚಕ, ಎಂ.ಡಿ.ಪವಿತ್ರ ಎ.ಎಸ್.ರಾಜೇಶ್,ಯಾದವ್ ಹರೀಶ್, ರಕ್ತದಾನಿ ಮಂಜು ಅವರನ್ನು ಸನ್ಮಾನಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಸದಸ್ಯರಾದ ಕುಮಾರ್, ನವೀನ್, ಅಜಯ್ ಶೆಟ್ಟಿ, ಶಿವಕುಮಾರ್, ವೆಂಕಟೇಶ್ ಇದ್ದರು.

ಮಹಿಳೆ ನಾಪತ್ತೆ

ಮೈಸೂರು, ನ.26–ಜಾತ್ರೆಗೆ ಹೋಗಿ ಬರುತ್ತೇನೆಂದು ಮನೆಯಿಂದ ಹೋದ ಮಹಿಳೆ ನಾಪತ್ತೆಯಾಗಿರುವ ಬಗ್ಗೆ ವರುಣಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರಾಯನ ಹುಂಡಿ ಗ್ರಾಮದ ನಿವಾಸಿ ಕೆಂಪಮ್ಮ(50) ನ.18ರಂದು ಬೆಳಗ್ಗೆ 11ಗಂಟೆಗೆ ಕಡಕೊಳ ಗ್ರಾಮದ ತುರುವಿನ ಜಾತ್ರೆಗೆ ಹೋಗುತ್ತೇನೆಂದು ಮನೆಯಿಂದ ತೆರಳಿದವರು ಈವರೆಗೂ ವಾಪಾಸ್ಸಾಗಿಲ್ಲ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ವರುಣಾ ಪೊಲೀಸ್ ಠಾಣೆ (0821–2594411, 2444800) ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಆನ್‌ಲೈನ್ ವಂಚನೆ

ಡೆಬಿಟ್ ಕಾರ್ಡ್ ಮಾಹಿತಿ ಪಡೆದು ಹೆಡ್ ಕಾನ್‌ಸ್ಟೇಬಲ್‌ಗೆ 1.48 ಲಕ್ಷ ದೋಖಾ

ಮಂಡ್ಯ, ನ.26–ಆನ್‌ಲೈನ್ ವಂಚನೆ ದಿನೇ ದಿನೆ ಹೆಚ್ಚುತ್ತಿದ್ದು, ವಿದ್ಯಾವಂತರೇ ಈ ವಂಚನೆಗೆ ಹೆಚ್ಚಾಗಿ ಬಲಿಯಾಗುತ್ತಿದ್ದಾರೆ. ಪೊಲೀಸರೂ ಆನ್‌ಲೈನ್ ವಂಚನೆ ಬಗ್ಗೆ ಜಾಗೃತಿ ಮೂಡಿಸುತ್ತಿದ್ದರೂ ಜನ ಮಾತ್ರ ಎಚ್ಚೆತ್ತಂತೆ ಕಂಡುಬರುತ್ತಿಲ್ಲ. ಬ್ಯಾಂಕ್‌ಗಳೂ ಪದೇ ಪದೆ ಈ ವಂಚನೆ ಬಗ್ಗೆ ಮೆಸೇಜ್ ರವಾನೆ ಮಾಡುವ ಮೂಲಕ ಜಾಗೃತಿ ಮೂಡಿಸುತ್ತಿವೆ. ಇಷ್ಟಾದರೂ ಪೊಲೀಸ್ ಅಧಿಕಾರಿಯೇ ಆನ್‌ಲೈನ್ ವಂಚಕರ ಬಲೆಗೆ ಬಿದ್ದು, 1.48 ಲಕ್ಷ ರೂ. ಕಳೆದುಕೊಂಡಿರುವ ಬಗ್ಗೆ ವರದಿಯಾಗಿದೆ.

ಕೆಆರ್‌ಎಸ್‌ನ ಕಾವೇರಿ ನೀರಾವರಿ ನಿಗಮದ ಕ್ವಾರ್ಟರ್ಸ್‌ನಲ್ಲಿ ವಾಸವಿರುವ ಪಾಂಡವಪುರ ಠಾಣೆಯ ಹೆಡ್ ಕಾನ್‌ಸ್ಟೇಬಲ್ ಸುಧಾಕರ(46) ವಂಚನೆಗೊಳಗಾದವರಾಗಿದ್ದು, ಎಸ್‌ಬಿಐನಲ್ಲಿ ಖಾತೆ ಹೊಂದಿರುವ ಇವರು, ಕ್ರೆಡಿಟ್ ಕಾರ್ಡ್ ಪಡೆದಿದ್ದರಾದರೂ, ಅದನ್ನು ಬಳಸುತ್ತಿಲ್ಲ. ನ.11ರಂದು ಬೆಳಗ್ಗೆ ಅವರ ಮೊಬೈಲ್‌ಗೆ 8389001570 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ, ಎಸ್‌ಬಿಐ ಕ್ರೆಡಿಟ್ ಕಾರ್ಡ್ ವಿಭಾಗದಿಂದ ಮಾತಾಡುತ್ತಿರುವುದಾಗಿ ತಿಳಿಸಿದನಲ್ಲದೆ, ನಿಮ್ಮ ಕ್ರೆಡಿಟ್ ಕಾರ್ಡ್ ಖಾತೆಯಿಂದ ಟ್ಯಾಕ್ಸ್ ಕಟ್ಟಾಗುತ್ತಿದೆ ಎಂದು ಹೇಳಿದ್ದಾನೆ.

ಆಗ ಸುಧಾಕರ ಅವರು, ತಾವು ಕ್ರೆಡಿಟ್ ಕಾರ್ಡ್ ಬಳಸುತ್ತಲೇ ಇಲ್ಲ ಎಂದು ಹೇಳಿದಾಗ ಅದರ ನಂಬರ್ ತಿಳಿಸುವಂತೆಯೂ, ತಾನು ಕ್ರೆಡಿಟ್ ಕಾರ್ಡ್ ಕ್ಯಾನ್ಸಲ್ ಮಾಡುವುದಾಗಿಯೂ ಹೇಳಿದ್ದಾನೆ. ತಾವು ಬಳಸದೇ ಇರುವ ಕ್ರೆಡಿಟ್ ಕಾರ್ಡ್ ಕ್ಯಾನ್ಸಲ್ ಮಾಡಲು ಸುಧಾಕರ ಅವರು ಒಪ್ಪಿ, ಕಾರ್ಡ್ ಎಲ್ಲಿ ಇಟ್ಟಿದ್ದೇನೆಯೋ ಗೊತ್ತಿಲ್ಲ ಎಂದಾಗ ಡೆಬಿಟ್ ಕಾರ್ಡ್ ನಂಬರ್ ಅನ್ನು ಹೇಳಿ. ಅದರ ಮೂಲಕ ಕ್ರೆಡಿಟ್ ಕಾರ್ಡ್ ಪತ್ತೆ ಹಚ್ಚಿ ಕ್ಯಾನ್ಸಲ್ ಮಾಡುತ್ತೇವೆ ಎಂದು ವಂಚಕ ಹೇಳಿದ್ದನ್ನು ನಂಬಿದ ಸುಧಾಕರ ಅವರು, ತಮ್ಮ ಡೆಬಿಟ್ ಕಾರ್ಡ್‌ನ ಎಲ್ಲಾ ವಿವರಗಳನ್ನು ನೀಡಿದ್ದಾರೆ. ಇದಾದ ಕೆಲವೇ ನಿಮಿಷಗಳಲ್ಲಿ 3 ಹಂತದಲ್ಲಿ ಅವರ ಖಾತೆಯಿಂದ 1,48,500 ರೂ. ಕಡಿತಗೊಂಡಿದೆ. ಈ ಸಂಬಂಧ ಮಂಡ್ಯ ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಬ್ಬರು ಸರಗಳ್ಳರ ಸೆರೆ: 5 ಮಾಂಗಲ್ಯ ಸರ ವಶ

ಮೈಸೂರು, ನ.26(ಎಂಕೆ)– ಇಬ್ಬರು ಸರಗಳ್ಳರನ್ನು ಬಂಧಿಸಿರುವ ಕುವೆಂಪುನಗರ ಠಾಣೆ ಪೊಲೀಸರು ಬಂಧಿತರಿಂದ 11.75 ಲಕ್ಷ ರೂ. ಮೌಲ್ಯದ 235 ಗ್ರಾಂ ತೂಕದ 5 ಮಾಂಗಲ್ಯ ಸರ ಹಾಗೂ 3 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಜಯನಗರದ ಚನ್ನಗಿರಿ ಕೊಪ್ಪಲಿನ 14ನೇ ಕ್ರಾಸ್ ನಿವಾಸಿ ಎಸ್.ಸಂತೋಷ್ ಅಲಿಯಾಸ್ ಸಂತು(23), ಮಂಡಿ ಮೊಹಲ್ಲಾದ ಅಕ್ಬರ್ ರಸ್ತೆಯ ನಿವಾಸಿ ಆರ್.ದರ್ಶನ್(20) ಬಂಧಿತರು. 2022ರ ಅಕ್ಟೋಬರ್ 10ರಂದು ವಿವೇಕಾನಂದ ನಗರದ ವಿವೇಕಾನಂದ ಸರ್ಕಲ್ ಬಳಿ ದ್ವಿಚಕ್ರವಾಹನದಲ್ಲಿ ತೆರಳುತಿದ್ದ ಮಹಿಳೆಯೊಬ್ಬರ ಕುತ್ತಿಗೆಯಲ್ಲಿದ್ದ 70 ಗ್ರಾಂ ತೂಕದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಕುವೆಂಪುನಗರ ಠಾಣೆ ಪೊಲೀಸರು ಇಬ್ಬರು ಸರಗಳ್ಳರನ್ನು ಬಂಧಿಸಿದ್ದಾರೆ. ಈ ಖದೀಮರು ಕುವೆಂಪುನಗರ ಠಾಣೆ ವ್ಯಾಪ್ತಿಯಲ್ಲಿ 4 ಹಾಗೂ ಕೃಷ್ಣರಾಜ ಠಾಣೆ ವ್ಯಾಪ್ತಿಯ ಒಂದು ಸರಗಳವು ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಾದೇಶಿಕತೆಗೆ ಪ್ರಾಧಾನ್ಯತೆ ನೀಡಿದರೆ ಸಂಘರ್ಷಗಳಿಗೆ ನಾಂದಿ ಹಾಡಿದಂತೆ

ಚಿಂತಕ ರೋಹಿತ್ ಚಕ್ರತೀರ್ಥ ಎಚ್ಚರಿಕೆ



ಮೈಸೂರು, ನ.26 (ಜಿಎ)– ಪ್ರಾದೇಶಿಕತೆ ಎಂಬುದು ಪ್ರತ್ಯೇಕವಾದರೆ ಹಲವಾರು ಸಂಘರ್ಷಗಳಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ ಎಂದು ಚಿಂತಕ ರೋಹಿತ್ ಚಕ್ರತೀರ್ಥ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮಂಥನ ಮೈಸೂರು ಸಂಸ್ಥೆ ವತಿಯಿಂದ ಆಯೋಜಿಸಿದ್ದ 'ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆ – ಭಾರತೀಯ ಕಥನ' ವಿಚಾರ ಕುರಿತು ಮಾತನಾಡಿದ ಅವರು, ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆ ಎರಡು ಭಿನ್ನವೇ ಎಂಬುದರ ಬಗ್ಗೆ ರಾಜ್ಯ ಹಾಗೂ ಅಂತರರಾಜ್ಯಗಳಲ್ಲಿ ಚರ್ಚೆ ನಡೆಯುತ್ತಿದ್ದು, ಇದು ಅನಿವಾರ್ಯವೂ ಆಗಿದೆ ಎಂದರು.

ರಾಷ್ಟ್ರ ಕವಿ ಕುವೆಂಪು ರಚಿತ ನಾಡಗೀತೆಯಲ್ಲಿ 'ಜಯ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ' ರಚಿಸಿರುವಂತೆ ಭಾರತವೇ ಮೊದಲು ನಂತರ ಕರ್ನಾಟಕ ಎಂಬುದನ್ನು ನೆನಪಿಸಿಕೊಳ್ಳಬೇಕು ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಪ್ರಾದೇಶಿಕತೆ ಎಂಬುದು ಎಂದೂ ಪ್ರತ್ಯೇಕತೆಗೆ ದಾರಿ ಮಾಡಿಕೊಡಬಾರದು. ಪ್ರತ್ಯೇಕವಾದಲ್ಲಿ ಜಾತಿ, ಭಾಷೆ, ಸಿದ್ಧಾಂತಗಳ ನಡುವಿನ ಸಂಘರ್ಷಕ್ಕೆ ದಾರಿಯಾದಂತಾಗುತ್ತದೆ ಎಂದರು.

ನ್ಯಾಷನಲಿಸಂ ಎಂಬ ಪದವು 20 ದಶಕಗಳ ಹಿಂದಿನಿಂದಲೂ ಇದೆ. ಆದರೆ, ರಾಷ್ಟ್ರೀಯತೆ ಮತ್ತು ನ್ಯಾಷನಲಿಸಂ ಎರಡಕ್ಕೂ ಬಹಳಷ್ಟು ವ್ಯತ್ಯಾಸವಿದ್ದು, ಅನೇಕ ಚಿಂತಕರಲ್ಲಿ ನ್ಯಾಷನಲಿಸಂ ಎಂಬ ಪರಿಕಲ್ಪನೆಯಿಲ್ಲ. ನ್ಯಾಷನಲಿಸಂ ಎಂಬ ಶಬ್ಧವು ಯೂರೋಪ್‌ಗೆ ಸಂಬಂಧ ಪಟ್ಟ ಶಬ್ಧವಾಗಿದ್ದು, ಇದನ್ನು ಭಾರತಕ್ಕೆ ತಂದು ರಾಷ್ಟ್ರೀಯತೆಯೆಂದು ನವೀಕರಣ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಿದ್ದಾರೆ ಎಂದರು.

ಭಾರತದಲ್ಲಿ ವಿವಿಧತೆಯಲ್ಲಿ ಏಕತೆ ಎಂಬ ಪದವನ್ನು ಸಂವಿಧಾನ ಬಂದ ನಂತರ ಬಳಸಲಾಗುತ್ತಿದ್ದು, ಅದು ಪದಕ್ಕೆ ಮಾತ್ರ ಸೀಮಿತವಾಗಿದೆ. ಈ ದೇಶದ ಉದ್ದಗಲಕ್ಕೂ ಒಂದೊಂದು ಬಗೆಯ ಸಂಸ್ಕೃತಿ ಇದೆ. ಆಚರಣೆಗಳು ಒಂದೇ ಆದರೂ ಅವುಗಳ ಹೆಸರು ಮಾತ್ರ ಬೇರೆ ಬೇರೆ. ಅದರಂತೆ ಇವತ್ತಿನ ಪಾಕಿಸ್ತಾನ, ಬಾಂಗ್ಲಾದೇಶ್, ಶ್ರೀಲಂಕಾ, ಭೂತಾನ್, ಇರಾನ್ ದೇಶಗಳಲ್ಲಿನ ಆಚರಣೆ ಸಂಸ್ಕೃತಿಗಳು ಒಂದೇ ಆಗಿವೆ ಎಂದು ಹೇಳಿದರು.

ಹಿಟ್ಲರ್‌ನ ನ್ಯಾಷನಲಿಸಂ ಮತ್ತು ಸಾವರ್ಕರ್ ಅವರ ರಾಷ್ಟ್ರೀಯತೆಗೂ ಬಹಳಷ್ಟು ವ್ಯತ್ಯಾಸವಿದೆ. ಯಾರೆಲ್ಲಾ ಈ ನೆಲವನ್ನು ಪಿತೃಭೂಮಿ ಎಂದು ಭಾವಿಸುತ್ತಾರೆಯೋ ಅವರೆಲ್ಲರೂ ಹಿಂದೂಗಳು ಎಂಬ ವಾಕ್ಯದ ಮೂಲಕ ಸಾವರ್ಕರ್ ಅವರು ರಾಷ್ಟ್ರೀಯತೆಯನ್ನು ತಿಳಿಸಿದ್ದಾರೆ. ಇದನ್ನು ತಿಳಿಯದ ಅನೇಕರು ಅವರ ಬಗ್ಗೆ ಅಪಪ್ರಚಾರ ಮಾಡುತ್ತ ಸುಳ್ಳುಗಳನ್ನು ಹೇಳಿಕೊಂಡು ತಿರುಗುತಿದ್ದಾರೆ. ಅವರು ಹಿಂದೂ, ಮುಸ್ಲಿಂ, ಪಾರ್ಸಿ, ಕ್ರೈಸ್ತರೆಲ್ಲರು ಒಂದೇ ಎಂಬ ವಾಕ್ಯದ ಮೂಲಕ ರಾಷ್ಟ್ರೀಯತೆಯನ್ನು ಸಾರಿದ್ದಾರೆಯೇ ಹೊರತು ಹಿಂದೂ ಹೊರತು ಇತರರನ್ನು ದೇಶದಿಂದ ಹೊರ ಹಾಕಬೇಕು ಎಂದು ಎಲ್ಲಿಯೂ ಹೇಳಿಲ್ಲ ಎಂದರು. 30 ವರ್ಷಗಳ ಹಿಂದೆ ಚಿಂತಕ ಸುಬ್ಬಣ್ಣ ಅವರು, ತಮ್ಮ ಗೋವಿನ ಪದ್ಯದಲ್ಲಿ 'ಧರಣಿ ಮಂಡಲ ಮಧ್ಯದೊಳಗೆ ಕರ್ನಾಟಕ ದೇಶದೊಳ್' ಎಂಬ ವಾಕ್ಯದ ಮೂಲಕ ಭಾರತ ಬಿಟ್ಟು ಕರ್ನಾಟಕವನ್ನು ರಾಷ್ಟ್ರೀಯತೆ ಎಂದು ದಾರಿ ತಪ್ಪಿಸಿದ್ದಾರೆ. ಈ ಗೀತೆ ದೇಶಕ್ಕೆ ಸಂಬಂಧಪಟ್ಟಿದ್ದು, ದೇಶವನ್ನು ಬಿಟ್ಟು ರಾಜ್ಯವನ್ನು ಪ್ರೀತಿಸುತ್ತೇನೆ ಎಂದರೆ ಮುಂದೆ ಪ್ರತ್ಯೇಕತೆ ಎಂಬ ಭಾವನೆ ಮೂಡಲಿದೆ. ಇದು ತಪ್ಪು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮಕ್ಕಳ ತಜ್ಞ ವಾಮನ್ ರಾವ್ ಬಾಪಟ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಭಾನುವಾರ 27 ನವೆಂಬರ್ 2022

ಕಳೆದ ಬಾರಿ ನನ್ನ ಸೋಲಿಗೆ ನಾನೇ ಕಾರಣ



ತಿ.ನರಸೀಪುರ ನ.26– ಕಳೆದ 2018ರ ಸಾರ್ವತ್ರಿಕ ವಿಧಾನಸಭಾ ಚುನಾವಣೆಯ ಸೋಲಿಗೆ ನೈತಿಕ ಹೊಣೆ ನನ್ನದೇ, ಯಾವ ಕಾರ್ಯಕರ್ತರು ಅಥವಾ ಮುಖಂಡರು ಸೋಲಿಗೆ ಜವಾಬ್ದಾರರಲ್ಲ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದರು.

ತಾಲೂಕಿನ ಕಲಿಯೂರು ಗ್ರಾಮದಲ್ಲಿ ನಡೆದ ಪಂಚಾಯಿತಿ ಮಟ್ಟದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಅಭಿಪ್ರಾಯ ಆಲಿಸಿ ಮಾತನಾಡಿದ ಅವರು, ವ್ಯಾಪಕ ಅಪಪ್ರಚಾರ ದೊಂದಿಗೆ ಚುನಾವಣೆಯ ಕೊನೆ ಗಳಿಗೆಯಲ್ಲಿ ಜೆಡಿಎಸ್ ಜೊತೆ ಬಿಜೆಪಿ ಶಾಮೀಲಾದ ಹಿನ್ನೆಲೆಯಲ್ಲಿ ನನಗೆ ಸೋಲಾಯಿತು. ಕ್ಷೇತ್ರದಲ್ಲಿ ಅಭಿವೃದ್ಧಿಗೆ ದುಡಿದರೂ ಸೋಲಿಗೆ ನಾನೇ ಜವಾಬ್ದಾರ. ಅದಕ್ಕಾಗಿ ಕಾರ್ಯಕರ್ತರು ಮತ್ತು ಮುಖಂಡರನ್ನು ದೂಷಿಸುವುದು ಬೇಡ ಎಂದು ಜನರಲ್ಲಿ ಮನವಿ ಮಾಡಿದರು.

ಅಧಿಕಾರವಿದ್ದಾಗ ಪುತ್ರ ಸುನೀಲ್ ಬೋಸ್ ಜೊತೆಗೆ ಬೆಳಗ್ಗೆಯಿಂದ ಸಂಜೆವರೆಗೂ ಇರುತ್ತಿದ್ದವರು, ಸಂಜೆಯಾದ ಮೇಲೂ ಜೊತೆಯಲ್ಲೇ ಇದ್ದು, ಅವರವರ ಕೆಲಸವನ್ನು ಮಾಡಿಸಿಕೊಂಡು ಲಾಭವನ್ನು ಮಾಡಿಕೊಳ್ಳುತ್ತಿದ್ದವರು ಕ್ಷೇತ್ರಕ್ಕೆ ಬಂದು ಬೋಸ್ ಕೈಗೆ ಸಿಗಲ್ಲ, ಮೊಬೈಲ್ ಕರೆಯನ್ನೂ ಸ್ವೀಕರಿಸುತ್ತಿಲ್ಲವೆಂದು ಅಪಪ್ರಚಾರ ಮಾಡುತ್ತಿದ್ದರು. ಈಗ ಅವರೆಲ್ಲರೂ ನಮ್ಮ ವಿರೋಧಿಗಳಾಗಿದ್ದಾರೆ ಎಂದು ಪಕ್ಷದಲ್ಲಿಯೇ ಇದ್ದು ಅಂತರ ಕಾಯ್ದುಕೊಳ್ಳುತ್ತಿರುವ ಕೆಲವು ಮುಖಂಡರ ವರ್ತನೆಗೆ ಅಸಮಾಧಾನ ವ್ಯಕ್ತಪಡಿಸಿದರು. ನಾನು ಯಾರನ್ನು ವೈಯಕ್ತಿಕವಾಗಿ ವಿರೋಧಿಸುವ ವ್ಯಕ್ತಿಯಲ್ಲವಾದ್ದರಿಂದ ಈಗಲೂ ಪಕ್ಷದ ಸಂಘಟನೆಗೆ ಮರಳಲು ಮುಕ್ತ ಅವಕಾಶವಿದೆ ಎಂದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಸಂಬಂಧ ಸಿಎಂ ಆಗಿದ್ದ ಸಿದ್ದರಾಮಯ್ಯ ಅವರು ನ್ಯಾ. ನಾಗಮೋಹನದಾಸ್ ಸಮಿತಿಯನ್ನು ರಚಿಸಿದ್ದರು. ಅವರ ವರದಿಯನ್ನು ಆಧರಿಸಿ, ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು ಆದರೆ ಈಗಿನ ಬಿಜೆಪಿ ಸರ್ಕಾರ ಮೀಸಲಾತಿ ಹೆಚ್ಚಿಸಿದ್ದು ತಾವೇ ಎಂದು ಪ್ರಚಾರವನ್ನು ಪಡೆದುಕೊಳ್ಳುತ್ತಿದೆ ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳು ಒಂದಾಗುವ ಬಗ್ಗೆ ವಾಲ್ಮೀಕಿ ಶ್ರೀಗಳು ಬರೆದಿರುವ ಪುಸ್ತಕವನ್ನು ಎಲ್ಲರೂ ಓದಿ ಒಂದುಗೂಡಬೇಕೆಂದು ಡಾ.ಹೆಚ್.ಸಿ.ಮಹದೇವಪ್ಪ ಮನವಿ ಮಾಡಿದರು.

ಪಕ್ಷ ಸಂಘಟನೆ ಬಲಪಡಿಸುವ ಬಗ್ಗೆ ಯುವ ಮುಖಂಡ, ವಸತಿ ಯೋಜನೆ ಜಾಗೃತ ಸಮಿತಿಯ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿದರು. ಜಿ.ಪಂ ಮಾಜಿ ಸದಸ್ಯ ಬಾಲಚಂದ್ರ, ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಮಾಲಂಗಿ ಜೆ.ಶಿವಸ್ವಾಮಿ, ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಎಂ.ಎಸ್.ಶಿವಮೂರ್ತಿ, ಪಿಎಸಿಸಿಎಸ್ ಮಾಜಿ ಅಧ್ಯಕ್ಷ ತೊಟ್ಟವಾಡಿ ರವಿ, ತಾ.ಪಂ ಮಾಜಿ ಸದಸ್ಯೆ ಚಿನ್ನಮ್ಮ ಸಿದ್ದರಾಜು, ಕೆಪಿಸಿಸಿ ಹಿಂ.ವರ್ಗಗಳ ಸಂಚಾಲಕ ಎಂ.ಬಿ.ಚಂದ್ರಶೇಖರ್, ಗ್ರಾ.ಪಂ ಸದಸ್ಯರಾದ ಶಿವಣ್ಣ, ಎಂ.ಎಸ್. ನಟರಾಜಮೂರ್ತಿ, ಮಮತಾ, ನಂಜುಂಡಸ್ವಾಮಿ, ಮುಖಂಡರಾದ ಶಿವಮೂರ್ತಿ, ಹಂಸರಾಜು, ಶಂಕರ ನಾಯಕ, ಬಸವರಾಜು, ಶಿವಪ್ರಕಾಶ್, ಶ್ರೀಕಾಂತ್, ಪ್ರಭುಸ್ವಾಮಿ, ಶಿವಣ್ಣ, ಪ್ರದೀಪ್, ವಿಜಯಕುಮಾರ್ ಹಾಗೂ ಇನ್ನಿತರರು ಹಾಜರಿದ್ದರು.

> ಕಲಿಯೂರು ಗ್ರಾಮದ ಯಾವೊಬ್ಬ ಮುಖಂಡರು ಕೂಡ ಮಹದೇವಪ್ಪನವರ ಸೋಲಿಗೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಕಾರಣರಲ್ಲ. ಅವರು ಗ್ರಾಮದ ಸಮಗ್ರ ಅಭಿವೃದ್ಧಿಗೆ ನಮ್ಮೆಲ್ಲರ ಮನವಿಯಂತೆ ಅನುದಾನವನ್ನು ಮಂಜೂರು ಮಾಡಿದ್ದರು. ಸ್ಥಳೀಯರಿಗಾಗಲಿ ಅಥವಾ ಕಾರ್ಯಕರ್ತರಿಗೆ ಆಗಲಿ ಯಾವುದೇ ಬೇಸರ, ಅನ್ಯಾಯ ವಾಗುವಂತಹ ವರ್ತನೆಯನ್ನು ನಾವುಗಳು ಯಾರೂ ಮಾಡಿಲ್ಲ. ಕ್ಷೇತ್ರದ ಕೆಲವೆಡೆ ಅಲ್ಲಿನ ಮುಖಂಡರ ಬಗ್ಗೆ ಆರೋಪವಿರಬಹುದು. ಹಾಗಾಗಿ ಮುಂಬರುವ ಚುನಾವಣೆಯಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿಕೊಳ್ಳೋಣ.
> -ಕೆ.ಜಿ.ಚಂದ್ರಶೇಖರ್, ಜಿ.ಪಂ ಮಾಜಿ ಸದಸ್ಯ

ಹೆಚ್ಚಿನ ಬೆಲೆಗೆ ತಂಬಾಕು ಖರೀದಿಸಲು ಆಗ್ರಹ

ಹುಣಸೂರು, ನ.26– ಹುಣಸೂರು ತಾಲೂಕಿನ ಕಟ್ಟೆಮಳಲವಾಡಿಯ ಡಿ. ದೇವರಾಜ ಅರಸು ತಂಬಾಕು ಹರಾಜು ಮಾರುಕಟ್ಟೆಗೆ ಜಿಲ್ಲಾ ರೈತ ಸಂಘದ ಅಧ್ಯಕ್ಷ ಹಾಗೂ ತಂಬಾಕು ಮಂಡಳಿಯ ರಸ ಗೊಬ್ಬರ ಸಮಿತಿಯ ಅಧ್ಯಕ್ಷ ಹೊಸೂರು ಕುಮಾರ್ ಭೇಟಿ ನೀಡಿ, ಕರ್ನಾಟಕದಲ್ಲಿ ಕಂಪನಿಗಳು ಪ್ರತಿ ಕೆಜಿ ತಂಬಾಕಿಗೆ 200 ರೂ. ನೀಡಿ ಖರೀದಿ ಮಾಡಬೇಕೆಂದು ಒತ್ತಾಯಿಸಿದರು.

ಇದಕ್ಕೂ ಮುನ್ನ ತಂಬಾಕು ಮಂಡಳಿಯ ಹರಾಜು ಅಧೀಕ್ಷಕರುಗಳ ಜೊತೆ ಮಾತುಕತೆ ನಡೆಸಿ ರೈತರಿಗೆ ಹೆಚ್ಚಿನ ಬೆಲೆ ನಿಗದಿಪಡಿಸಿ ಮಾರಾಟ ಮಾಡಿಸಿಕೊಡುವಂತೆ ಮನವಿ ಮಾಡಿದರಲ್ಲದೆ, ಈಗಾಗಲೇ ಪ್ರಾದೇಶಿಕ ವ್ಯವಸ್ಥಾಪಕರ ಜೊತೆ ಮಾತನಾಡಿ ಆಂಧ್ರಪ್ರದೇಶದ ಗುಂಟೂರಿನಲ್ಲಿ ತಂಬಾಕು ಹುಡಿಯನ್ನು ಖರೀದಿ ಮಾಡಿರುವುದಕ್ಕಿಂತ ಹೆಚ್ಚಾಗಿ ಕರ್ನಾಟಕದ ಹುಡಿಯನ್ನು ಹೆಚ್ಚಿನ ಬೆಲೆಗೆ ಖರೀದಿ ಮಾಡಬೇಕು ಎಂದರು.

ಮುಂದಿನ ವರ್ಷ ತಂಬಾಕು ಬೆಳೆಗೆ ರಸಗೊಬ್ಬರದ ಹಣ ಕಟ್ಟಿಸಿಕೊಳ್ಳಲು ಅಥವಾ ಹಿಡಿದುಕೊಳ್ಳಲು ಈ ತಿಂಗಳ ನವೆಂಬರ್ 30ರ ತನಕ ನಿಗದಿಯಾಗಿದ್ದ ದಿನಾಂಕವನ್ನು ಡಿಸೆಂಬರ್ 20ರ ತನಕ ವಿಸ್ತರಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು. ಇನ್ನು ಶೇಕಡ 50 ರಷ್ಟು ರೈತರು ತಂಬಾಕು ಮಾರಾಟ ಮಾಡಿಲ್ಲ. ರೈತರು ರಸಗೊಬ್ಬರಕ್ಕೆ ಹಣ ಕಟ್ಟಲು ಕಷ್ಟವಾಗುತ್ತಿದ್ದು, ದಿನಾಂಕವನ್ನು ವಿಸ್ತರಿಸುವಂತೆ ಪ್ರಾದೇಶಿಕ ವ್ಯವಸ್ಥಾಪಕರಿಗೆ ಮನವಿ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ತಂಬಾಕು ಬೆಳೆಗಾರರ ಸೇವಾ ಅಭಿವೃದ್ಧಿ ಸಂಘದ ಗೌರವಾಧ್ಯಕ್ಷ ಉಂಡುವಾಡಿ ಚಂದ್ರೇಗೌಡ, ರೈತ ಸಂಘದ ಮುಖಂಡರಾದ ಅಗ್ರಹಾರ ಸತೀಶ್, ರಾಮೇನಹಳ್ಳಿ ಕೃಷ್ಣಚಾರಿ, ಚಿಟ್ಟೆಕ್ಯಾತನಹಳ್ಳಿ ಚಂದ್ರೇಗೌಡ, ಹಿರೀಕ್ಯಾತನಹಳ್ಳಿ ವಿಜಯ್, ಹಲವಾರು ರೈತ ಮುಖಂಡರು ಹಾಗೂ ತಂಬಾಕು ಬೆಳೆಗಾರರು ಹಾಜರಿದ್ದರು.

ಆಮ್ ಆದ್ಮಿಗೆ 10ನೇ ವರ್ಷದ ಸಂಭ್ರಮ

ಸರಗೂರು, ನ.26– ಅನೇಕ ಗಣ್ಯರು ಹಾಗೂ ಪ್ರಾಮಾಣಿಕರು ಭ್ರಷ್ಟಾಚಾರ ಮತ್ತು ಒಡೆದು ಆಳುವ ನೀತಿಯಿಂದ ಬೇಸತ್ತು ಅಮ್ ಆದ್ಮಿ ಪಾರ್ಟಿ ಸೇರಲು ಒಲುವು ತೋರುತ್ತಿದ್ದಾರೆ ಎಂದು ಆಮ್ ಆದ್ಮಿ ಪಕ್ಷದ ತಾಲೂಕು ಅಧ್ಯಕ್ಷ ಗ್ರಾಮೀಣ ಮಹೇಶ್ ತಿಳಿಸಿದರು.

ಪಟ್ಟಣದ ಬಸ್ ನಿಲ್ದಾಣದಲ್ಲಿ ಆಮ್ ಆದ್ಮಿ ಪಕ್ಷಕ್ಕೆ 10 ವರ್ಷ ತುಂಬಿದ ಹಿನ್ನೆಲೆಯಲ್ಲಿ ಸಂಭ್ರಮಾಚರಣೆಯನ್ನು ಮಾಡಲಾಯಿತು. ಹತ್ತು ವರ್ಷ ತುಂಬಿದ ಸಂದರ್ಭದಲ್ಲಿ ಎಎಪಿ ಪಕ್ಷದ ಸದಸ್ಯತ್ವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ನೊಂದಣಿ ಮಾಡಿಕೊಳ್ಳಲಾಯಿತು. ಹೆಚ್.ಡಿ.ಕೋಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಮತದಾರರು, ಎಎಪಿ ಪಕ್ಷ ಸೇರಲು ಇಚ್ಚಿಸುವವರು 7065055757 ಸಂಖ್ಯೆಗೆ ಮಿಸ್ಡ್ ಕಾಲ್ ನೀಡುವ ಮೂಲಕ ಪಕ್ಷವನ್ನು ಬೆಂಬಲಿಸಬಹುದಾಗಿದೆ ಎಂದು ಅವರು ಇದೇ ವೇಳೆ ತಿಳಿಸಿದರು. ಇದೇ ವೇಳೆ ಸಂವಿಧಾನ ದಿನದ ಆಚರಣೆ ಪ್ರಯುಕ್ತ ಸಂವಿಧಾನ ಹಾಗೂ ರಾಜಕೀಯ ಅಧ್ಯಯನದ ಪುಸ್ತಕಗಳು, ಡಿಕ್ಷನರಿಗಳನ್ನು ವಿದ್ಯಾರ್ಥಿಗಳಿಗೆ ವಿತರಣೆ ಮಾಡಲಾಯಿತು.

108 ಆಂಬುಲೆನ್ಸ್ ಡಿಕ್ಕಿ; ಬೈಕ್ ಸವಾರ ಸಾವು

● ಪರಿಹಾರಕ್ಕೆ ಆಗ್ರಹಿಸಿ ಕುಟುಂಬಸ್ಥರಿಂದ ಹೆಚ್.ಡಿ.ಕೋಟೆ ಆಸ್ಪತ್ರೆ ಮುಂದೆ ಪ್ರತಿಭಟನೆ
● ಮೃತನಿಗೆ 25 ಸಾವಿರ ರೂ., ವಾಹನ ವಿಮೆ ಮೂಲಕ ಹೆಚ್ಚಿನ ಪರಿಹಾರ



ಹೆಚ್.ಡಿ.ಕೋಟೆ, ನ.26– 108 ಆಂಬುಲೆನ್ಸ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಪರಿಹಾರ ಮತ್ತು ಉದ್ಯೋಗಕ್ಕೆ ಆಗ್ರಹಿಸಿ ಪ್ರಗತಿಪರ ಸಂಘಟನೆಗಳೊಂದಿಗೆ ಕುಟುಂಬಸ್ಥರು ಪ್ರತಿಭಟನೆ ನಡೆಸಿದ ಘಟನೆ ಇಲ್ಲಿನ ಸಾರ್ವಜನಿಕ ಆಸ್ಪತ್ರೆ ಮುಂಭಾಗ ನಡೆದಿದೆ.

ತಾಲೂಕಿನ ಸೋಗಹಳ್ಳಿ ಗ್ರಾಮದ ವಾಸಿ ಜಿನೇಂದ್ರ (30) ಮೃತ ದುರ್ದೈವಿ. ಶುಕ್ರವಾರ ರಾತ್ರಿ 9.30ರ ಸಮಯದಲ್ಲಿ ತಾಲೂಕಿನ ಮೈಸೂರು–ಮಾನಂದವಾಡಿ ರಸ್ತೆ ಮಾದಾಪುರ ಬಳಿಯ ವೃತ್ತದಲ್ಲಿ ಜಿನೇಂದ್ರ ಅವರು ಬೈಕಿನಲ್ಲಿ ಸೋಗಹಳ್ಳಿ ಗ್ರಾಮದಿಂದ, ಕೋಳಗಾಲ ಗ್ರಾಮಕ್ಕೆ ಬರುತ್ತಿದ್ದಾಗ 108 ಆಂಬುಲೆನ್ಸ್ ಡಿಕ್ಕಿ ಹೊಡೆಯಿತು ಎನ್ನಲಾಗಿದೆ.

ಕೂಡಲೇ ಅದೇ ವಾಹನದಲ್ಲಿ ಎಚ್.ಡಿ. ಕೋಟೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಗಾಯಾಳುವನ್ನು ಕರೆತಂದು, ಪ್ರಾಥಮಿಕ ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯದಲ್ಲಿ ಗಾಯಾಳು ಮೃತಪಟ್ಟರು ಎನ್ನಲಾಗಿದೆ.

ಇದರಿಂದ ರೊಚ್ಚಿಗೆದ್ದ ಕುಟುಂಬಸ್ಥರು ಮತ್ತು ಸಂಬಂಧಿಕರು ಪ್ರಗತಿಪರ ಸಂಘಟನೆಗಳೊಂದಿಗೆ ಜಿನೇಂದ್ರ ಬಡವನಾಗಿದ್ದು, 108 ತುರ್ತುವಾಹನ ಗುತ್ತಿಗೆದಾರರಿಂದ ಪರಿಹಾರ ಕೊಡಿಸಬೇಕು, ಜಿನೇಂದ್ರ ಅವರಿಗೆ ಮದುವೆಯಾಗಿದ್ದು, ಮಕ್ಕಳಿಲ್ಲ. ಇವರಿಗೆ ತಂದೆ ಮತ್ತು ತಾಯಿ ಕೂಡ ಇಲ್ಲ. ಮೃತರಿಗೆ ಸಹೋದರ ಒಬ್ಬರಿದ್ದಾರೆ. ಅವರು ಆರ್ಥಿಕವಾಗಿ ಹಿಂದುಳಿದವರಾಗಿದ್ದು, ಅವರಿಗೆ ಸೂಕ್ತ ಪರಿಹಾರ ಮತ್ತು ಕೆಲಸ ಕೊಡಬೇಕು ಎಂದು ಬೆಳಗಿನಿಂದ ಮಧ್ಯಾಹ್ನದವರೆಗೂ ಸಾರ್ವಜನಿಕ ಆಸ್ಪತ್ರೆ ಮುಂಭಾಗ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ವೃತ್ತ ನಿರೀಕ್ಷಕ ಬಸವರಾಜು ಸಮ್ಮುಖದಲ್ಲಿ 108 ವಾಹನದ ಮುಖ್ಯಸ್ಥ ಯಶವಂತ್ ಮತ್ತು ಕುಟುಂಬದವರೊಂದಿಗೆ ಹಲವಾರು ಸುತ್ತಿನ ಮಾತುಕತೆ ನಡೆಸಿ, ಕೊನೆಗೆ ಮೃತನ ಕುಟುಂಬದವರಿಗೆ 25 ಸಾವಿರ ಹಣ ಕೊಡಲು ನಿರ್ಧರಿಸಲಾಯಿತು. ಹೆಚ್ಚಿನ ಪರಿಹಾರಕ್ಕೆ ವಾಹನ ವಿಮೆ ಮೂಲಕ ನ್ಯಾಯಾಲಯದಿಂದ ಪರಿಹಾರ ಪಡೆಯುವುದು ಎಂದು ತಿಳಿಸಲಾಯಿತು.

ವಾಹನ ಚಾಲಕ ಆನಂದ್ ಈಗಾಗಲೇ ಹಲವು ಅಫಘಾತಗಳನ್ನು ಮಾಡಿ ಜೀವ ಹಾನಿಗೆ ಕಾರಣವಾಗಿದ್ದು, ಆತನ ವಾಹನ ಚಾಲನ ಪರವಾನಗಿ ರದ್ದುಪಡಿಸಬೇಕು, ಜಿವಿಕೆ ಸಂಸ್ಥೆಯ ಕರ್ತವ್ಯದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಲಾಯಿತು.

ನಂತರ ಪಟ್ಟಣ ಠಾಣೆಯಲ್ಲಿ ದೂರು ದಾಖಲಾಗಿದ್ದು, ಮರಣೋತ್ತರ ಪರೀಕ್ಷೆ ನಂತರ ಕುಟುಂಬದವರು ಶವವನ್ನು ಗ್ರಾಮಕ್ಕೆ ಕೊಂಡೊಯ್ದು ಅಂತ್ಯಸಂಸ್ಕಾರ ನಡೆಸಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತಿಭಟನೆಯಲ್ಲಿ ನರಸಿಂಹಮೂರ್ತಿ, ಪ್ರೇಮ್, ಪುಟ್ಟಮಾದು, ಚಾ.ಶಿವಕುಮಾರ್, ಜಕ್ಕಹಳ್ಳಿ ಪುಟ್ಟರಾಜು, ಸಣ್ಣಕುಮಾರ್, ರಾಜು, ಆನಗಟ್ಟಿದೇವರಾಜು, ರಾಜು, ಜೀವಿಕ ಬಸವರಾಜು, ಕೇಶವ, ಕುಮಾರ, ರವಿ, ವೆಂಕಟೇಶ್, ಸಂತೋಷ ಕುಮಾರ ಇದ್ದರು.

ಚಿರತೆ ಹಾವಳಿ ತಡೆಗೆ ಅರಣ್ಯ ಇಲಾಖೆ ವಿಫಲ

ರೈತ ಸಂಘ, ಹಸಿರು ಸೇನೆಯಿಂದ ಪ್ರತಿಭಟನೆ



ತಿ.ನರಸೀಪುರ, ನ.26– ತಾಲೂಕಿನಾದ್ಯಂತ ಹೆಚ್ಚಿರುವ ಚಿರತೆಗಳನ್ನು ಸೆರೆಹಿಡಿಯುವಲ್ಲಿ ವಿಫಲರಾಗಿರುವ ಅರಣ್ಯ ಇಲಾಖೆ ಹಾಗೂ ತಾಲೂಕು ಆಡಳಿತದ ಬೇಜವಾಬ್ದಾರಿ ನಡೆಯನ್ನು ಖಂಡಿಸಿ ಬೃಹತ್ ಪ್ರತಿಭಟನಾ ಧರಣಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಕಾರ್ಯದರ್ಶಿ ಕಳ್ಳೀಪುರ ಮಹದೇವಸ್ವಾಮಿ ಎಚ್ಚರಿಕೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ ಮಲ್ಲಿಕಾರ್ಜುನ ಬೆಟ್ಟ, ವಡ್ಗಲ್ ರಂಗಸ್ವಾಮಿ ಬೆಟ್ಟ, ತರಗಬೆಟ್ಟ ಹಾಗೂ ಚಾಮನಹಳ್ಳಿ ಗುಡ್ಡ ಪ್ರದೇಶದ ವ್ಯಾಪ್ತಿಯ ಎಂ.ಎಲ್.ಹುಂಡಿ, ಕಳ್ಳಿಪುರ, ಮೇಗಳಕೊಪ್ಪಲು ಸೇರಿದಂತೆ 33 ಗ್ರಾಮಗಳಲ್ಲಿ 70 ಸಾವಿರಕ್ಕೂ ಹೆಚ್ಚಿನ ಜನಸಂಖ್ಯೆ ಇದೆ. ಆದರೆ ಕಳೆದ ನಾಲ್ಕೈದು ವರ್ಷಗಳಿಂದ ಕ್ರೂರ ಪ್ರಾಣಿಗಳು ಈ ಭಾಗದ ಗ್ರಾಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರೂ ಸ್ಥಳೀಯ ವಲಯ ಅರಣ್ಯ ಇಲಾಖೆ ಮೌನವಹಿಸಿದೆ.

ಚಿರತೆ ಹಿಡಿಯುವಲ್ಲಿ ಇಲಾಖೆ ಸಂಪೂರ್ಣ ವಿಫಲವಾಗಿದ್ದು ದಿನದಿಂದ ದಿನಕ್ಕೆ ಸಾಕುಪ್ರಾಣಿಗಳು ಚಿರತೆಗೆ ಬಲಿಯಾಗುತ್ತಿವೆ. ಚಿರತೆಯ ದಾಳಿಯಿಂದ ಗ್ರಾಮಸ್ಥರು ಆತಂಕಕ್ಕೊಳಗಾಗಿದ್ದು, ಇತ್ತೀಚೆಗಷ್ಟೆ ವಿದ್ಯಾರ್ಥಿಯೊಬ್ಬನನ್ನು ಚಿರತೆ ದಾಳಿ ಮಾಡಿ ಕೊಂದು ಹಾಕಿದೆ. ಘಟನೆ ನಡೆದು ತಿಂಗಳುಗಳೇ ಸಮೀಪಿಸುತ್ತಿದ್ದರೂ ಚಿರತೆ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ವಿಫಲರಾಗಿರುವುದರಿಂದ ಗ್ರಾಮಸ್ಥರು ಜೀವ ಭಯದಿಂದ ತತ್ತರಿಸಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಮತ್ತು ತಾಲೂಕು ಆಡಳಿತ ಬೇಜವಾಬ್ದಾರಿ ಮತ್ತು ಕರ್ತವ್ಯ ನಿರ್ಲಕ್ಷ್ಯತೆಯನ್ನು ಖಂಡಿಸಿ ಇದೇ 29 ರ ಮಂಗಳವಾರದಂದು ಪಟ್ಟಣದ ವಲಯ ಅರಣ್ಯ ಇಲಾಖೆಯ ಕಚೇರಿ ಮುಂಭಾಗ ವಿವಿಧ ಜನಪರ ಸಂಘಟನೆಗಳ ಆಶ್ರಯದಲ್ಲಿ ಪ್ರತಿಭಟನೆ ನಡೆಸಲಾಗುತ್ತಿದ್ದು, ಮಠಾಧಿಪತಿಗಳು, ಸರ್ವ ಸಂಘಟನೆಗಳ ಪದಾಧಿಕಾರಿಗಳು, ಸ್ತ್ರೀ ಶಕ್ತಿ ಮಹಿಳಾ ಸಂಘಗಳು, ಗ್ರಾಮಸ್ಥರು ಮಾನವೀಯತೆ ಮತ್ತು ಜಾತ್ಯತೀತ ದೃಷ್ಟಿಕೋನದಿಂದ ಧರಣಿಯಲ್ಲಿ ಭಾಗವಹಿಸುವಂತೆ ಮಹದೇವಸ್ವಾಮಿ ಮನವಿ ಮಾಡಿದರು.

ಸ್ಟೀಲ್ ಸ್ಕೇಲ್‌ನಿಂದ ಹೊಡೆದು ವಿದ್ಯಾರ್ಥಿ ಕೈ ಸೀಳಿದ ಶಿಕ್ಷಕ



ಹೆಚ್.ಡಿ.ಕೋಟೆ, ನ.26– ವಿದ್ಯಾರ್ಥಿಯೊಬ್ಬ ಸೀಮೆಸುಣ್ಣದಿಂದ ಆಟವಾಡುತ್ತಿದ್ದನ್ನು ಕಂಡು ಶಿಕ್ಷಕರೊಬ್ಬರು ಸ್ಟೀಲ್ ಸ್ಕೇಲ್‌ನಿಂದ ಹೊಡೆದ ಪರಿಣಾಮ ವಿದ್ಯಾರ್ಥಿಯ ಅಂಗೈ ಸೀಳಿ 6 ಹೊಲಿಗೆ ಹಾಕಿಸಿರುವ ಘಟನೆ ನಡೆದಿದೆ. ಪಟ್ಟಣದ ಖಾಸಗಿ ಶಾಲೆಯಲ್ಲಿ ಎಂಟನೇ ತರಗತಿ ಓದುತ್ತಿದ್ದ ವಿದ್ಯಾರ್ಥಿ ಅಮೃತ್ ಶಾಲೆಯ ಬಿಡುವಿನ ಸಂದರ್ಭದಲ್ಲಿ ಸೀಮೆಸುಣ್ಣ ತೆಗೆದುಕೊಂಡು, ಆಟವಾಡುತ್ತಿದ್ದ. ಇದನ್ನು ಕಂಡ ಶಿಕ್ಷಕ ಸಿದ್ದರಾಜು ವಿದ್ಯಾರ್ಥಿ ಅಮೃತ್‌ಗೆ ಸ್ಟೀಲ್ ಸ್ಕೇಲ್‌ನಿಂದ ಹೊಡೆದ ಕಾರಣ ವಿದ್ಯಾರ್ಥಿಯ ಅಂಗೈ ಸೀಳಿದ್ದು, ಕೈಗೆ ಹೊಲಿಗೆ ಹಾಕಿ ಚಿಕಿತ್ಸೆ ಕೊಡಿಸಲಾಗಿದೆ.

ವಿದ್ಯಾರ್ಥಿಯ ತಂದೆ ಷಣ್ಮುಖ ಅವರು ಮಾತನಾಡಿ, ಆಟವಾಡುವ ವಯಸ್ಸಿನಲ್ಲಿ ಮಕ್ಕಳಿಗೆ ಈ ರೀತಿ ಥಳಿಸಬಾರದಿತ್ತು. ಈ ಕುರಿತು ಕ್ಷೇತ್ರ ಶಿಕ್ಷಣಾಧಿಕಾರಿ ನನ್ನ ಮಗನ ಮೇಲೆ ಹಲ್ಲೆ ಮಾಡಿರುವ ಶಿಕ್ಷಕನ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ರಾಜಕಾರಣವೇ ಬೇರೆ, ಸಮಾಜ ಸೇವೆಯೇ ಬೇರೆ

1050 ವಿಕಲಚೇತನರಿಗೆ ವಿಮಾ ಹಣ ಭರಿಸುತ್ತಿರುವ ಶಾಸಕ ಸಾ.ರಾ.ಮಹೇಶ್



ಕೆ.ಆರ್.ನಗರ, ನ.26– ರಾಜಕಾರಣವೇ ಬೇರೆ, ಸಮಾಜ ಸೇವೆಯೇ ಬೇರೆ. ನನ್ನ 15 ವರ್ಷಗಳ ಆಡಳಿತಾವಧಿಯಲ್ಲಿ 1050 ವಿಕಲಚೇತನ ಮಕ್ಕಳಿಗೆ ಪ್ರತಿವರ್ಷ ಪ್ರತಿ ಮಗುವಿಗೆ 2 ಸಾವಿರದಂತೆ ವೈಯಕ್ತಿಕವಾಗಿ ವಿಮಾ ಹಣವನ್ನು ಭರಿಸುತ್ತಿದ್ದೇವೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.


ಪಟ್ಟಣದ ಶಿಕ್ಷಕರ ಭವನದಲ್ಲಿ ನಡೆದ ವಿಕಲಚೇತನ ಮಕ್ಕಳ ವೈದ್ಯಕೀಯ ಮೌಲ್ಯಂಕವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾನು ಹಣ ನೀಡಿದ ಮಕ್ಕಳ ಕುಟುಂಬದವರೆಲ್ಲರು ನನಗೆ ಮತ ನೀಡುತ್ತಾರೆ ಎಂಬ ಉದ್ದೇಶದಿಂದ ಹಣ ನೀಡುತ್ತಿಲ್ಲ. ವಿಕಲಚೇತನ ಮಕ್ಕಳು ದೇವರ ಮಕ್ಕಳು. ಅವರಿಗೆ 15ವರ್ಷ ತುಂಬಿದ ನಂತರ ಹಣ ಕಟ್ಟದೇ ವಿಮಾ ಪೂರ್ಣ ಹಣವನ್ನು 18ವರ್ಷ ತುಂಬಿದ ನಂತರ ಪಡೆಯಬಹುದಾಗಿದೆ ಎಂದರು.

ನಾನು ಸಾರ್ವಜನಿಕ ಸೇವೆ ಮಾಡುತ್ತಿರುವುದು ಚುನಾವಣೆಯಲ್ಲಿ ನನ್ನ ಪರ ಮತಗಳಾಗಿ ಪರಿವರ್ತನೆಯಾಗಲೆಂದು, ಅಧಿಕಾರಿಗಳು ಕೆಲಸ ಮಾಡುವುದು ವೇತನಕ್ಕಾಗಿ. ಆದರೆ ಯಾವುದೇ ಆಸೆ ಆಕಾಂಕ್ಷೆಗಳಿಲ್ಲದೆ ನಿಸ್ವಾರ್ಥ ಸೇವೆ ಮಾಡುತ್ತಿರುವ ತಾಲೂಕು ಅಂಗವಿಕಲ ಸಂಘದ ಅಧ್ಯಕ್ಷ ಕೆಎಲ್.ಹೇಮಂತ್ ಕುಮಾರ್ ಸಮಾಜಮುಖಿ ಕಾರ್ಯಕ್ಕೆ ಸಮಾಜ ಸದಾ ಋಣಿಯಾಗಿರಬೇಕೆಂದು ಹಾಗೂ ಇವರ ಕುಟುಂಬಕ್ಕೆ ತಾಲ್ಲೂಕಿನ ಪ್ರಥಮ ಪ್ರಜೆಯಾದ ನಾನು ಋಣಿಯಾಗಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ಡಿಡಿಪಿಐ ರಾಮಚಂದ್ರ ರಾಜ್ ಅರಸ್, ಇಓ ಹೆಚ್.ಕೆ.ಸತೀಶ್, ಬಿಇಓ ಗಾಯಿತ್ರಿ, ಬಿಆರ್‌ಸಿ ವೆಂಕಟೇಶ್, ಪುರಸಭೆ ಮುಖ್ಯಾಧಿಕಾರಿ ಡಾ.ಜಯಣ್ಣ, ತಾಲ್ಲೂಕು ಆರೋಗ್ಯಾಡಳಿತ ಅಧಿಕಾರಿ ಡಾ.ಮಹೇಂದ್ರಪ್ಪ, ಆಸ್ಪತ್ರೆ ವೈದ್ಯಾಧಿಕಾರಿ ಡಾ.ನಾಗೇಂದ್ರಪ್ಪ ಬಿಐಆರ್‌ಟಿಗಳಾದ ಶಂಕರೇಗೌಡ, ನಾಗರಾಜ್, ಪ್ರೇಮ, ಅಂಗವಿಕಲ ಸಂಘದ ಅಧ್ಯಕ್ಷ ಕೆಎಲ್. ಹೇಮಂತ್ ಕುಮಾರ್, ಶಿಕ್ಷಕರ ಸಂಘದ ಅಧ್ಯಕ್ಷ, ಕೃಷ್ಣನಾಯಕ, ಪುರಸಭಾ ಸದಸ್ಯರಾದ ಪ್ರಭುಶಂಕರ್, ತೊಂಟಧಾರ್ಯ, ಸೇರಿದಂತೆ ವೈದ್ಯಾಧಿಕಾರಿಗಳು ಶಿಕ್ಷಕರು ವಿಕಲಚೇತನ ಮಕ್ಕಳು ಮತ್ತು ಪೋಷಕರು ಹಾಜರಿದ್ದರು.

ರಾಜ್ಯದಲ್ಲಿ ಮತ್ತೇ ಕಾಂಗ್ರೆಸ್ ಅಧಿಕಾರಕ್ಕೆ ತನ್ನಿ

ಹೆಡಿಯಾಲದಲ್ಲಿ ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪನವರಿಗೆ ಅಭಿನಂದನೆ



ಮಲ್ಕುಂಡಿ, ನ.26– ಸಿದ್ದರಾಮಯ್ಯ ಅವರ 5 ವರ್ಷದ ಜನಪರ ಆಡಳಿತ ನೋಡಿ ರಾಜ್ಯದಲ್ಲಿ ಮುಂದಿನ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ತರಬೇಕಿದೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕರೆ ನೀಡಿದ್ದಾರೆ.

ನಂಜನಗೂಡು ವಿಧಾನಸಭಾ ಕ್ಷೇತ್ರದ ಹುರ ಜಿಪಂ ವ್ಯಾಪ್ತಿಯ ಹೆಡಿಯಾಲ ಗ್ರಾಮದಲ್ಲಿ ಕಾರ್ಯಕರ್ತರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಅಧಿಕಾರದ ಅವಧಿಯಲ್ಲಿ ನಾನು ಲೋಕೋಪಯೋಗಿ ಸಚಿವನಾಗಿದ್ದಾಗ ಈ ಕ್ಷೇತ್ರದ ಅಭಿವೃದ್ಧಿಗಾಗಿ ಹೆಚ್ಚು ಒತ್ತು ನೀಡಿದ್ದೇನೆ. ಕ್ಷೇತ್ರದ ಪ್ರತಿ ಗ್ರಾಮಗಳಿಗೆ ತೆರಳಿ ಎಲ್ಲಾ ಜನಾಂಗದ ಬೀದಿಗಳಿಗೆ ಕಾಂಕ್ರೀಟ್ ರಸ್ತೆ, ಚರಂಡಿ, ಸಮುದಾಯ ಭವನಗಳಿಗೆ ಅನುದಾನ ನೀಡಿದ್ದೇನೆ. ಇದನ್ನು ಮರೆಯದೆ ಈ ಕ್ಷೇತ್ರದ ಜನತೆ ನನ್ನನ್ನು ಅಭಿನಂದಿಸುತ್ತಿರುವುದು ನನಗೆ ಸಂತೋಷ. ನಾನು ಎಂದೆಂದಿಗೂ ನಿಮಗೆ ಚಿರಋಣಿಯಾಗಿರುತ್ತೇನೆ ಎಂದರು.

ಹಿಂದೆ ನಮ್ಮ ಕಾಂಗ್ರೆಸ್ ಸರ್ಕಾರದ ಅಧಿಕಾರಾವಧಿಯಲ್ಲಿ ಹಿಂದೂಳಿದ, ದೀನ–ದಲಿತರು, ಬಡವರ ಪರ ಕೆಲಸ ಮಾಡಿರುವುದು, ಕಾಂಗ್ರೆಸ್ ಸರ್ಕಾರದ ಸಿದ್ದರಾಮಯ್ಯ ಅವರ ಆಡಳಿತ ಕಂಡ ರಾಜ್ಯದ ಜನತೆಯು ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ತರಲು ರಾಜ್ಯದ ಜನತೆಯು ಕಾಯುತ್ತಿದ್ದಾರೆ. ನಾನು ನಂಜನಗೂಡು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಅರ್ಜಿ ಸಲ್ಲಿಸಿದ್ದೇನೆ. ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ಪಕ್ಷದ ಹೈಕಮಾಂಡ್‌ಗೆ ಬಿಟ್ಟಿದ್ದು, ಆದರೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರಲು ಒಗ್ಗಟ್ಟಿನಿಂದ ಕಾರ್ಯಕರ್ತರು ಶ್ರಮಿಸಬೇಕಿದೆ ಎಂದು ತಿಳಿಸಿದರು.

ಇದೇ ವೇಳೆ ಸಂವಿಧಾನ ದಿನಾಚರಣೆ ಅಂಗವಾಗಿ ಡಾ.ಬಿಆರ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಯುವ ಪೀಳಿಗೆಯು ಅಂಬೇಡ್ಕರ್ ಅವರ ಚಿಂತನೆಗಳನ್ನು ಅಳವಡಿಸಿಕೊಂಡು ಜಾಗೃತಿ ಮೂಡಿಸುವ ಮೂಲಕ ಅಸ್ಪೃಶ್ಯತೆ ನಿವಾರಣೆಯಲ್ಲಿ ತೊಡಗಬೇಕಿದೆ ಎಂದು ಹೇಳಿದರು.

ಯುವ ಮುಖಂಡ ಸುನೀಲ್ ಭೋಸ್, ವೀರಶೈವ ತಾಲೂಕು ಅಧ್ಯಕ್ಷ ದೇವನೂರು ಮಹದೇವಪ್ಪ, ಇಂಧನ ಬಾಬು, ಜಿ ಪಂ ಮಾಜಿ ಸದಸ್ಯರುಗಳಾದ ಕೆ.ಬಿ. ಸ್ವಾಮಿ, ಚಾಮರಾಜು, ಚೋಳರಾಜ್, ಮುಖಂಡರುಗಳಾದ ತರಗನಹಳ್ಳಿ ನಂಜುಂಡಸ್ವಾಮಿ, ಕುರುಬರ ಸಂಘದ ತಾಲೂಕು ಅಧ್ಯಕ್ಷ ಕೆಂಪಣ್ಣ, ಮೂಗಶೆಟ್ಟಿ, ಅಸ್ಲಾಂ, ನಾಗರಾಜು, ಶಿವನಂಜನಾಯ್ಕ, ನಟರಾಜ್, ತಮ್ಮಣ್ಣೇಗೌಡ, ಶಿವಮಲ್ಲು, ಕೆ ಎನ್ ಚಿನ್ನಸ್ವಾಮಿ, ಮಲ್ಕುಂಡಿ ಪುಟ್ಟವೀರಪ್ಪ, ಗ್ರಾಪಂ ಅಧ್ಯಕ್ಷ ಸಿದ್ದರಾಜು, ಗ್ರಾಪಂ ಸದಸ್ಯ ಗೋವಿಂದರಾಜು, ಸುಬ್ರಹ್ಮಣ್ಯ, ನಾಗರಾಜೇಗೌಡ, ಸೇರಿದಂತೆ ಪ್ರಮುಖರು ಹಾಜರಿದ್ದರು.

ಜಿಂಕೆ ಕೊಂದು ಮಾಂಸ ಸಾಗಿಸುತ್ತಿದ್ದ ಇಬ್ಬರ ಬಂಧನ



ಹೆಚ್.ಡಿ.ಕೋಟೆ, ನ.26– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಮೇಟಿಕುಪ್ಪೆ ವನ್ಯಜೀವಿ ವ್ಯಾಪ್ತಿಯ ಕಾಡಂಚಿನ ಮೇಟಿಕುಪ್ಪೆ ಗ್ರಾಮದ ಮೋಟು ತಾರೆಮರದ ಬಳಿ ಹೆಣ್ಣು ಜಿಂಕೆಯೊಂದನ್ನು ಕೊಂದು ಕತ್ತರಿಸಿ ಸಾಗಿಸಲು ಪ್ರಯತ್ನಿಸುತ್ತಿದ್ದ ಇಬ್ಬರನ್ನು ಬಂಧಿಸಲಾಗಿದ್ದು, ಉಳಿದವರು ತಪ್ಪಿಸಿಕೊಂಡಿದ್ದಾರೆ. ನೆಹರು ನಾಯಕ್ ಮತ್ತು ಅಭಿಶೇಕ್ ಎಂಬುವರೇ ಬಂಧಿತರಾಗಿದ್ದು, ಅವರಿಂದ ಜಿಂಕೆ ಮಾಂಸ ಮತ್ತು ಇತರ ಪರಿಕರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಬಂದೂಕಿನಿಂದ ಗುಂಡು ಹಾರಿಸಿ ಕೊಂದಿದ್ದ ಹೆಣ್ಣು ಜಿಂಕೆಯನ್ನು ಚೀಲಕ್ಕೆ ತುಂಬುತ್ತಿರುವ ವಿಷಯ ತಿಳಿದ ಅರಣ್ಯ ಇಲಾಖೆ ಸಿಬ್ಬಂದಿಗಳು ಮತ್ತು ಅಧಿಕಾರಿಗಳು ದಾಳಿ ನಡೆಸಿದಾಗ ಪ್ರಕಾಶ ನಾಯಕ್ ಬಿನ್ ಮಾದನಾಯಕ್, ಕೃಷ್ಣನಾಯಕ್, ಲಕ್ಷ್ಮಣ ನಾಯಕ್, ಗೋವಿಂದನಾಯಕ್ ಬಿನ್ ಬೋಜನಾಯಕ್, ಗಣೇಶನಾಯಕ್ ಮತ್ತು ಶಂಕರ್ ನಾಯಕ್ ಇವರುಗಳು ತಲೆಮರೆಸಿಕೊಂಡಿದ್ದು ಪತ್ತೆಗಾಗಿ ತಂಡಗಳನ್ನು ರಚಿಸಲಾಗಿದೆ.

ಗ್ರಾಮದ ಶಂಕರ್ ನಾಯಕ್ ಎಂಬುವವನ ಬಳಿ ಇರುವ ಅಕ್ರಮ ಬಂದೂಕನ್ನು ಪಡೆದು ಜಿಂಕೆಯನ್ನು ಹತ್ಯೆ ಮಾಡಿರುವುದಾಗಿ ತನಿಖೆ ವೇಳೆ ತಿಳಿದು ಬಂದಿದೆ ಎಂದು ವಲಯ ಅರಣ್ಯಾಧಿಕಾರಿ ರಕ್ಷಿತ್ ತಿಳಿಸಿದ್ದಾರೆ.

ಎಲ್ಲಾ ಆರೋಪಿಗಳ ಮೇಲೆ ಮೇಟಿಕುಪ್ಪೆ ವನ್ಯಜೀವಿ ವಲಯದಲ್ಲಿ ವನ್ಯಜೀವಿ ಕಾಯ್ದೆ ಪ್ರಕಾರ ಪ್ರಕರಣ ದಾಖಲಿಸಲಾಗಿದೆ. ಕಾರ್ಯಾಚರಣೆಯಲ್ಲಿ ಹರ್ಷ ಕುಮಾರ್.ಸಿ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ನಿರ್ದೇಶಕರು ಇವರ ಮಾರ್ಗದರ್ಶನದಲ್ಲಿ, ಮೇಟಿಕುಪ್ಪೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಕೆ.ಎನ್ ರಂಗಸ್ವಾಮಿ, ಮೇಟಿಕುಪ್ಪೆ ವನ್ಯಜೀವಿ ವಲಯದ ವಲಯ ಅರಣ್ಯಾಧಿಕಾರಿಗಳಾದ ಹರ್ಷಿ ಕೆ.ಎನ್. ಉಪ ವಲಯ ಅರಣ್ಯಾಧಿಕಾರಿಗಳಾದ ಶಿವಕುಮಾರ್ ಮತ್ತು ನಿರಂಜನ್ ಎಸ್, ಆನಂದ, ಅರಣ್ಯ ರಕ್ಷಕ, ಪರಮೇಶ, ಹಂಗಾಮಿ ಅರಣ್ಯ ವೀಕ್ಷಕ ಮತ್ತು ಹೆಚ್.ಡಿಕೋಟೆ 'ಪ್ರಾದೇಶಿಕ ವಲಯದ ವಲಯ ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳು ಪಾಲ್ಗೊಂಡಿದ್ದರು.



ಮೆಲ್ಲಹಳ್ಳಿ ಶ್ರೀ ವಿನಾಯಕ ಗೆಳೆಯರ ಬಳಗದ ವತಿಯಿಂದ ಆಯೋಜಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಭಾಗವಹಿಸಿ, ಧ್ವಜಾರೋಹಣ ನೆರವೇರಿಸಿದರು. ಬಳಗದ ಸದಸ್ಯರು, ರವಿ ಎನ್.ಗೌಡ, ಮೆಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಾದೇವ, ಹರೀಶ್.ಟಿ. ಹಾಗೂ ಇತರರು ಉಪಸ್ಥಿತರಿದ್ದರು.

ಮಾಜಿ ಕಾರ್ಪೊರೇಟರ್ ಸಿ.ಮಹದೇಶ್ ಹುಟ್ಟುಹಬ್ಬ ಆಚರಣೆ


ನಗರಪಾಲಿಕೆ ಮಾಜಿ ಸದಸ್ಯ ಹಾಗೂ ಜೆಡಿಎಸ್ ಮುಖಂಡ ಸಿ.ಮಹದೇಶ್ ಅವರನ್ನು ಶಾಸಕ ಎಲ್.ನಾಗೇಂದ್ರ, ಕಾರ್ಪೊರೇಟರ್ ಎಂ.ಯು.ಸುಬ್ಬಯ್ಯ, ಮುಖಂಡ ಪುನೀತ್ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿದರು.


ಅಭಿಮಾನಿಗಳು ಸಿ.ಮಹದೇಶ್ ದಂಪತಿಯನ್ನು ಸನ್ಮಾನಿಸುತ್ತಿರುವುದು.


ಮಾಜಿ ಕಾರ್ಪೊರೇಟರ್ ಸಿ.ಮಹದೇಶ್ ಅವರನ್ನು ಕಾರ್ಪೊರೇಟರ್ ನಮ್ರತಾ ರಮೇಶ್, ಮುಖಂಡ ರಮೇಶ್ ಇನ್ನಿತರರು ಅಭಿನಂದಿಸಿದರು. ಈ ವೇಳೆ ಶ್ರೀಮತಿ ಭಾಗ್ಯ ಮಹದೇಶ್, ಅವರ ಪುತ್ರರು ಇನ್ನಿತರರು ಚಿತ್ರದಲ್ಲಿದ್ದಾರೆ.


ಹುಟ್ಟುಹಬ್ಬ ಆಚರಿಸಿಕೊಂಡ ಜೆಡಿಎಸ್ ಮುಖಂಡ ಸಿ.ಮಾದೇಶ್ ಅವರಿಗೆ ಮೈಸೂರು ನಗರ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಜಿ.ಮಂಜುಗೌಡ ಅವರು ಬಾದಾಮಿ ಹಾರ ಹಾಕಿ, ಶುಭ ಕೋರಿದರು. ಈ ಸಂದರ್ಭದಲ್ಲಿ ಮುಖಂಡರಾದ ಸಜೀದ್ ಹುಸೇನ್, ಅಜಾಮ್, ಸಾಗರ್‌ಗೌಡ ಇನ್ನಿತರರು ಉಪಸ್ಥಿತರಿದ್ದರು.


ಮಾಜಿ ಕಾರ್ಪೊರೇಟರ್ ಸಿ.ಮಹದೇಶ್ ಅವರಿಗೆ ಜಯಪುರದ ಎಸ್‌ಆರ್ ವೈನ್ಸ್ ಮಾಲೀಕ ಎಸ್.ಶ್ರೀಕಾಂತ್, ಉದ್ಯಮಿಗಳಾದ ಕೆ.ಪಿ.ಪರಮೇಶ್, ಕೆ.ಎಸ್. ಯೋಗೇಶ್, ಕೆ.ಎಸ್.ದಿನೇಶ್ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಮೈಸೂರು,ನ.26(ಎಂಕೆ)–ನಗರಪಾಲಿಕೆ ಮಾಜಿ ಸದಸ್ಯ ಹಾಗೂ ಜೆಡಿಎಸ್ ಮುಖಂಡ ಸಿ.ಮಹದೇಶ್ ಅವರ ಹುಟ್ಟುಹಬ್ಬವನ್ನು ಅದ್ಧೂರಿಯಾಗಿ ಆಚರಿಸಲಾಯಿತು.

ಮೈಸೂರಿನ ಒಂಟಿಕೊಪ್ಪಲಿನಲ್ಲಿರುವ ತಮ್ಮ ನಿವಾಸದಲ್ಲಿ ನೂರಾರು ಮಂದಿ ಅಭಿಮಾನಿಗಳೊಂದಿಗೆ ಕೇಕ್ ಕತ್ತರಿಸಿದ ಮಹದೇಶ್, ಮಂಡಿಮೊಹಲ್ಲಾದಲ್ಲಿರುವ ಅನಾಥಾಶ್ರಮದ ಮಕ್ಕಳಿಗೆ ಊಟ ವಿತರಿಸಿ, ಪಠ್ಯಪುಸ್ತಕಗಳನ್ನು ನೀಡಿ ಸಾಮಾಜಿಕ ಕಳಕಳಿ ಮೆರೆದರು. ಬೆಳಗ್ಗೆಯಿಂದ ಸಂಜೆಯವರೆಗೂ ನಡೆದ ಹುಟ್ಟುಹಬ್ಬದ ಆಚರಣೆಯಲ್ಲಿ ಮಹದೇಶ್ ಅವರ ಸಾವಿರಾರು ಅಭಿಮಾನಿಗಳು, ಖುದ್ದು ಅವರ ಮನೆಗೆ ಭೇಟಿ ನೀಡಿ ಸಂಭ್ರಮದಲ್ಲಿ ಭಾಗಿಯಾದರು. ಹಲವು ಅಭಿಮಾನಿಗಳು ಮಹದೇಶ್ ಮತ್ತು ಅವರ ಪತ್ನಿ ಕಾರ್ಪೊರೇಟರ್ ಭಾಗ್ಯ ಮಹದೇಶ್ ಅವರಿಗೆ ಬೃಹತ್ ಗುಲಾಬಿ ಹಾರ ಹಾಕಿ ಅಭಿನಂದಿಸಿದರು.

ಶುಭಾಶಯ: ಶಾಸಕರಾದ ಜಿ.ಟಿ.ದೇವೇಗೌಡ, ಎಲ್.ನಾಗೇಂದ್ರ, ಅಶ್ವಿನ್‌ಕುಮಾರ್, ಕಾಂಗ್ರೆಸ್ ಮುಖಂಡ ಹರೀಶ್‌ಗೌಡ, ಪಾಲಿಕೆ ಸದಸ್ಯರಾದ ಪ್ರೇಮಾ ಶಂಕರೇಗೌಡ, ಶೋಭಾ ಮೋಹನ್, ಅಶ್ವಿನಿ ಅನಂತು, ಕೆ.ವಿ.ಶ್ರೀಧರ್, ರಮೇಶ್ ಸೇರಿದಂತೆ ಹಾಲಿ ಹಾಗೂ ಮಾಜಿ ಪಾಲಿಕೆ ಸದಸ್ಯರು, ಜೆಡಿಎಸ್ ಮುಖಂಡರು, ಕಾರ್ಯಕರ್ತರು ಶುಭಾಶಯ ತಿಳಿಸಿದರು. ಜೆಡಿಎಸ್ ಮುಖಂಡರಷ್ಟೇ ಅಲ್ಲದೆ ವಿವಿಧ ಪಕ್ಷದ ಮುಖಂಡರು, ಕಾರ್ಯಕರ್ತರು ಶುಭಾಶಯ ಕೋರಿದ್ದು, ಕುತೂಹಲಗಳಿಗೂ ಕಾರಣವಾಯಿತು.

ಯಾರು ಮರೆತಿಲ್ಲ: ಜೆಡಿಎಸ್ ಮುಖಂಡರು ಸೇರಿದಂತೆ ಹಲವರು ಹುಟ್ಟುಹಬ್ಬದ ಶುಭಾಶಯ ಕೋರಿದ್ದು, ನನ್ನನ್ನು ಯಾರು ಮರೆತಿಲ್ಲ. ಶಾಸಕರಾದ ಜಿ.ಟಿ.ದೇವೇ ಗೌಡರು ಸೇರಿದಂತೆ ಜೆಡಿಎಸ್ ಎಲ್ಲಾ ಸ್ಥಳೀಯ ಮುಖಂಡರು ಶುಭಾಶಯ ತಿಳಿಸಿದ್ದಾರೆ. ಬಿಜೆಪಿಯ ಹಲವರು ಕರೆಮಾಡಿ ಅಭಿನಂದನೆ ತಿಳಿಸಿದ್ದಾರೆ ಎಂದು ಮಾಜಿ ಕಾರ್ಪೊರೇಟರ್ ಮಹದೇಶ್, 'ಮೈಸೂರು ಮಿತ್ರ'ನೊಂದಿಗೆ ತಮ್ಮ ಹುಟ್ಟುಹಬ್ಬದ ಸಂಭ್ರಮವನ್ನು ಹಂಚಿಕೊಂಡರು.



ಈಗಲೂ ನರೇಂದ್ರ ಮೋದಿ ನಂ.1 ಜನಪ್ರಿಯ ನಾಯಕ

ನವದೆಹಲಿ, ನ.26– ಪ್ರಧಾನಿ ನರೇಂದ್ರ ಮೋದಿ ಈಗಲೂ ನಂ.1 ಜನಪ್ರಿಯ ನಾಯಕ ಪಟ್ಟದಲ್ಲೇ ಮುಂದುವರಿದಿದ್ದಾರೆ ಎಂದು ಸಮೀಕ್ಷಾ ವರದಿ ತಿಳಿಸಿದೆ.

ಜನರು ಮೆಚ್ಚಿದ ಗಣ್ಯರ ಪೈಕಿ ಜಗತ್ತಿನಲ್ಲೇ ನಂ.1 ಎಂಬ ಪಟ್ಟದಲ್ಲಿ ಮುಂದುವರಿಯುವುದರ ಜೊತೆಗೆ ಮೋದಿ ಜನಪ್ರಿಯತೆ ಪ್ರಮಾಣವನ್ನು ಹೆಚ್ಚಿಸಿಕೊಂಡಿದ್ದಾರೆ ಎಂದು ಮಾರ್ನಿಂಗ್ ಕನ್ಸಲ್ಟ್ ಹೇಳಿದೆ.

22 ದೇಶಗಳ ನಾಯಕರ ಸಾಧನೆ ಆಧರಿಸಿ ಸಂಸ್ಥೆ ಆನ್‌ಲೈನ್ ಸಮೀಕ್ಷೆ ನಡೆಸಿದೆ. ಈ ಸಮೀಕ್ಷೆಯಲ್ಲಿ ಶೇ.77ರಷ್ಟು ಅಪ್ರೂವಲ್ ರೇಟಿಂಗ್‌ನೊಂದಿಗೆ ಜಗತ್ತಿನಲ್ಲೇ ಅತೀ ಹೆಚ್ಚು ಅಂಕ ಪಡೆದ ದೇಶದ ನಾಯಕರಾಗಿ ಮೋದಿ ಹೊರಹೊಮ್ಮಿದ್ದಾರೆ.

ಸತತ 8 ವರ್ಷಗಳಿಂದ ಪ್ರಧಾನಿ ಹುದ್ದೆಯಲ್ಲಿರುವ ಮೋದಿ ಕಳೆದ ಆಗಸ್ಟ್ ಮತ್ತು ಜನವರಿಯಲ್ಲಿ ಪ್ರಕಟಗೊಂಡಿದ್ದ ವರದಿಯಲ್ಲೂ ಮೊದಲ ಸ್ಥಾನವನ್ನು ಪಡೆದಿದ್ದರು. ಮೋದಿಯವರಿಗೆ ಜನವರಿಯಲ್ಲಿ ಶೇ.72, ಆಗಸ್ಟ್‌ನಲ್ಲಿ ಶೇ.75ರಷ್ಟು ಅಪ್ರೂವಲ್ ರೇಟಿಂಗ್ ಸಿಕ್ಕಿತ್ತು. ಆಸ್ಟ್ರೇಲಿಯಾ, ಆಸ್ಟ್ರಿಯಾ, ಬೆಲ್ಜಿಯಂ, ಬ್ರೆಜಿಲ್, ಕೆನಡಾ, ಜೆಕ್ ರಿಪಬ್ಲಿಕ್, ಫ್ರಾನ್ಸ್, ಜರ್ಮನಿ, ಭಾರತ, ಐರ್ಲೆಂಡ್, ಇಟಲಿ, ಜಪಾನ್, ಮೆಕ್ಸಿಕೋ, ನೆದರ್‌ಲ್ಯಾಂಡ್, ನಾರ್ವೆ, ಪೋಲೆಂಡ್, ದಕ್ಷಿಣ ಕೊರಿಯಾ, ಸ್ಪೇನ್, ಸ್ವೀಡನ್, ಸ್ವಿಟ್ಜರ್ಲೆಂಡ್, ಯುನೈಟೆಡ್ ಕಿಂಗ್‌ಡಮ್ ಮತ್ತು ಅಮೆರಿಕ ದೇಶವನ್ನು ಸಮೀಕ್ಷೆಗೆ ಆಯ್ಕೆ ಮಾಡಲಾಗಿತ್ತು.

ಟಾಪ್ 5 ಸ್ಥಾನದಲ್ಲಿ ಯಾರಿದ್ದಾರೆ: ನರೇಂದ್ರ ಮೋದಿ(ಶೇ.77), ಆಸ್ಟ್ರೇಲಿಯಾದ ಪ್ರಧಾನಿ ಆಂಥೊನಿ ಅಲ್ಬನೀಸೆ (ಶೇ.56), ಅಮೆರಿಕದ ಅಧ್ಯಕ್ಷ ಜೋ ಬೈಡನ್ (ಶೇ.41), ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ(ಶೇ.38), ಬ್ರಿಟನ್ ಪ್ರಧಾನಿ ರಿಷಿ ಸುನಕ್ (ಶೇ.36), ಜಪಾನ್ ಪ್ರಧಾನಿ ಫ್ಯೂಮಿಯೋ ಕಿಶಿಡಾ (ಶೇ.23) ಅನುಕ್ರಮವಾಗಿ ಮೊದಲ ಐದು ಸ್ಥಾನವನ್ನು ಪಡೆದಿದ್ದಾರೆ.

1.10 ಕೋಟಿಯ ವಿವಿಧ ಕಾಮಗಾರಿಗೆ ಚಾಲನೆ



ಮೈಸೂರು, ನ.26(ಪಿಎಂ)–ಚಾಮರಾಜ ಕ್ಷೇತ್ರ ವ್ಯಾಪ್ತಿಯ ಪಾಲಿಕೆ ವಾರ್ಡ್ 18ರಲ್ಲಿ 1.10 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ಶನಿವಾರ ಭೂಮಿ ಪೂಜೆ ನೆರವೇರಿಸಿದರು.

ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ, ಮೈಸೂರು ಮಹಾನಗರ ಪಾಲಿಕೆ ಅನುದಾನ, 15ನೇ ಹಣಕಾಸು ಯೋಜನೆ ಹಾಗೂ ಸಾಮಾನ್ಯ ಅನುದಾನ ಸೇರಿದಂತೆ ಒಟ್ಟು 110 ಲಕ್ಷ (1.10 ಕೋಟಿ) ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಿದರು.

ವಾರ್ಡ್ ವ್ಯಾಪ್ತಿಯಲ್ಲಿ ಮೈಸೂರು ಪಾಲಿಕೆ 15ನೇ ಹಣಕಾಸು ಯೋಜನೆಯಡಿ 21 ಲಕ್ಷ ವೆಚ್ಚದಲ್ಲಿ ಯುಜಿಡಿ ನಿರ್ಮಾಣ ಹಾಗೂ ನಗರ ಪಾಲಿಕೆ 24.10 ಯೋಜನೆ ಅನುದಾನದಡಿ 40 ಲಕ್ಷ ವೆಚ್ಚದಲ್ಲಿ ಯುಜಿಡಿ (ಮತ್ತೊಂದು) ನಿರ್ಮಾಣ ಕಾಮಗಾರಿಗಳಿಗೆ ಶಾಸಕ ಎಲ್.ನಾಗೇಂದ್ರ ಗುದ್ದಲಿ ಪೂಜೆ ನೆರವೇರಿಸಿದರು.

14ನೇ ಹಣಕಾಸು ಯೋಜನೆ ಉಳಿಕೆ ಅನುದಾನದ 15.30 ಲಕ್ಷ ವೆಚ್ಚದಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ, ಪಾಲಿಕೆ ಸಾಮಾನ್ಯ ಅನುದಾನದ 8 ಲಕ್ಷ ವೆಚ್ಚದಲ್ಲಿ ಕುಡಿಯುವ ನೀರು ಸರಬರಾಜು ಪೈಪ್ ಲೈನ್ ನಿರ್ಮಾಣ, ಪಾಲಿಕೆ ಸಾಮಾನ್ಯ ಅನುದಾನದ 20 ಲಕ್ಷ ವೆಚ್ಚದಲ್ಲಿ ಯಾದವಗಿರಿ ದೋಬಿಘಾಟ್ ನವೀಕರಣ ಹಾಗೂ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದ 5 ಲಕ್ಷ ವೆಚ್ಚದಲ್ಲಿ ಯಾದವಗಿರಿ ಆಕಾಶವಾಣಿ ವೃತ್ತದ ಆಟೋ ನಿಲ್ದಾಣದ ಮೇಲ್ಛಾವಣಿ ನಿರ್ಮಾಣ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದರು.

ಪಾಲಿಕೆ ಪಾಲಿಕೆ ಮಾಜಿ ಸದಸ್ಯ ಗುರುವಿನಾಯಕ್, ನಾಮನಿರ್ದೇಶಿತ ಸದಸ್ಯ ಚಿಕ್ಕ ವೆಂಕಟು, ಬಿಜೆಪಿ ಮುಖಂಡರಾದ ಸೋಮಶೇಖರರಾಜು, ಎಸ್.ಕೆ.ದಿನೇಶ್, ಜಯಣ್ಣ, ಕಿರಣ್ ಬೋಳಾರ್, ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ರಾಮಕೃಷ್ಣ, ಆಶ್ರಯ ಸಮಿತಿ ಸದಸ್ಯ ಅನೂಜ್, ಮುಖಂಡರಾದ ಷಣ್ಮುಗಂ, ಶ್ರೀನಿವಾಸ ಸೀನು, ಮುರುಗೇಶ್, ಹರೀಶ್, ಅಶೋಕ, ಮುರಳಿ ಹರೀಶ್, ಕವಿತ, ರೂಪ, ನಾಗರತ್ನ, ವೀಣಾಬಾಯಿ, ಶಿವನಂಜಮ್ಮ ಮತ್ತಿತರರು ಹಾಜರಿದ್ದರು.

ವಾಕ್, ಶ್ರವಣದೋಷ ಸಂಬಂಧ ಭರತನಾಟ್ಯದ ಮೂಲಕ ಜಾಗೃತಿ

ಮೈಸೂರು,ನ.26(ಎಂಕೆ)–ಹಾಡು–ನೃತ್ಯಾಭಿನಯದ ಮೂಲಕ ವಾಕ್ ಮತ್ತು ಶ್ರವಣ ದೋಷಕ್ಕೆ ಇಲ್ಲಿದೆ ಪರಿಹಾರ ಎಂಬ ಜಾಗೃತಿ ಸಂದೇಶ ಸಾರುವ ಆಯಿಷ್(ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ) ವಿದ್ಯಾರ್ಥಿಗಳ ಪ್ರಯತ್ನಕ್ಕೆ ಭಾರೀ ಪ್ರಶಂಸೆ ವ್ಯಕ್ತವಾಗಿದೆ.



7 ಮಂದಿ ಆಯಿಷ್‌ನ ಮಹಿಳಾ ವಿದ್ಯಾರ್ಥಿಗಳು ಆಕರ್ಷಕ ಭರತನಾಟ್ಯ ಪ್ರದರ್ಶನದ ಮೂಲಕ ವಾಕ್ ಮತ್ತು ಶ್ರವಣ ದೋಷ ಸಮಸ್ಯೆ ನಿವಾರಣೆಗೆ ಮಾರ್ಗದರ್ಶನ ನೀಡುವ ಪ್ರಯತ್ನ ಮಾಡಿದ್ದಾರೆ. ಸರಿಯಾಗಿ ಮಾತು ಬಾರದಿರುವುದು, ಕಿವಿ ಕೇಳಿಸದಿರುವುದು, ತಲೆ ಸುತ್ತುವುದು ಸೇರಿದಂತೆ ಇನ್ನಿತರೆ ಶ್ರವಣದೋಷ ಸಮಸ್ಯೆಗಳಿದ್ದರೆ ಯಾವುದೇ ಕಾರಣಕ್ಕೂ ಉದಾಸೀನ ಮಾಡದೇ ಆಯಿಷ್‌ಗೆ ಭೇಟಿ ನೀಡಿ ಎಂದು ಸ್ವಾಗತ ಕೋರಿದ್ದಾರೆ. ಶಾಸ್ತ್ರೀಯ ಸಂಗೀತಕ್ಕೆ ಅನುಗುಣವಾಗಿ ಆಕರ್ಷಕ ನೃತ್ಯಾಭಿನಯದ ಮೂಲಕ ಆಯಿಷ್‌ನ ಪರಿಚಯ ಹಾಗೂ ಆಯಿಷ್‌ನಲ್ಲಿ ದೊರೆಯುವ ಚಿಕಿತ್ಸೆಗಳ ಬಗ್ಗೆ ಹಾವಭಾವದ ಮೂಲಕ ಅಭಿನಯಿಸಿ ತಿಳಿಸಿಕೊಟ್ಟಿದ್ದಾರೆ. 5 ನಿಮಿಷಗಳ ಭರತನಾಟ್ಯ ಪ್ರದರ್ಶನವನ್ನು ಆಯಿಷ್ ಪ್ರಮುಖ ವಿಭಾಗಗಳ ಎದುರೇ ನೀಡಿದ್ದು, ಆಯಾ ವಿಭಾಗಗಳಲ್ಲಿ ದೊರೆಯುವ ಸೌಲಭ್ಯಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ.

ಹೆಚ್ಚಾಗುತ್ತಿರುವ ವಾಕ್ ಮತ್ತು ಶ್ರವಣ ಸಮಸ್ಯೆಗಳ ನಿವಾರಣೆಗೆ ಆಯಿಷ್‌ನಿಂದ ಹಲವಾರು ಕಾರ್ಯಕ್ರಮಗಳನು ಹಮ್ಮಿಕೊಳ್ಳಲಾಗುತ್ತಿದೆ. ಆಯಿಷ್ ವಿದ್ಯಾರ್ಥಿಗಳು ಭರತನಾಟ್ಯದ ಮೂಲಕ ಜಾಗೃತಿ ಮೂಡಿಸುವ ವಿನೂತನ ಪ್ರಯತ್ನ ಮಾಡಿದ್ದಾರೆ. ವಿದ್ಯಾರ್ಥಿಗಳ ಈ ಪ್ರಯತ್ನಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಮೆಚ್ಚುಗೆ ವ್ಯಕ್ತವಾಗಿದೆ ಎಂದು ಆಯಿಷ್ ನಿರ್ದೇಶಕಿ ಡಾ.ಎಂ.ಪುಷ್ಪಾವತಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ನಿಧನ



ಶ್ರೀ ಮರಿಯಪ್ಪ ರವರು

ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರು, ಮಂಡ್ಯ

ಇವರು ದಿನಾಂಕ : 26.11.2022ನೇ ಶನಿವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಮೃತರ ಅಂತ್ಯ ಕ್ರಿಯೆಯನ್ನು ದಿನಾಂಕ : 27.11.2022 ಭಾನುವಾರ 12.00 ಗಂಟೆಗೆ ಮುಂಡುಗದೊರೆ (ದೊಡ್ಡಪಾಳ್ಯ ಹತ್ತಿರ) ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು: ಪತ್ನಿ ಸುಜಾತ ಹಾಗೂ ಹೆಣ್ಣು ಮಕ್ಕಳು, ಬಾಬುರಾಯನ ಕೊಪ್ಪಲು ಮತ್ತು ಕೆ.ಜಿ.ಕೊಪ್ಪಲು

ಮೈಸೂರು ಮಿತ್ರ 43

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ



The Bengaluru Educational & Social Trust

Vijayanagar, Bengaluru - 560040 www.thebest.org.in

Applications invited for proposed (2023-24)

The BEST Kidz Academy and School of Excellence

Survey No. 260, Yelakuru Road, Kuderu, Chamarajanagar - 571316

RECRUITMENT NOTIFICATION

PRINCIPAL	Postgraduate Degree from any recognised University with M.Ed. from NCTE recognised institution with at least 15 years of experience.
KINDERGARTEN TEACHERS	MTT or Any Graduate Degree with NTT / D.E.C.Ed. with minimum of 2 years of relevant work experience.

PRIMARY SCHOOL TEACHERS

Kannada / English / Hindi / Mathematics / Social Science / General Science / Computer Science / Value Education	TGT in subject of specialization with B.Ed. and minimum 2 years of relevant experience.
Art & Craft / Music / Dance	Trained Graduate / Diploma in respective fields from recognised institution with prior experience in an educational institution.
Physical Education	M.P.Ed. from NCTE recognised institution with minimum 2 years of relevant experience.

ADMINISTRATIVE STAFF

Office Assistant cum Receptionist	Degree / Diploma from any recognised university with minimum 2 years experience
Librarian	M.Lib. from any recognised University.
Accounts Assistant	Bachelor in Commerce with Tally Certification

Good command over English language, usage of computers and working experience of software is a must.

Freshers with requisite qualifications can also apply.
Salary is not a constraint for deserving candidates plus PF, ESIC, Medical Insurance & Gratuity benefits.

Send the updated resume to **careers@thebest.org.in** on or before **10th December 2022**



